ಪ್ರಕಾಶಕರು
ಕರ್ನಾಟಕ ಸಾಹಿತ್ಯ ಪ್ರಕಾಶನ ಗ್ರಂಥಮಾಲೆ
ಪೋಸ್ಟು: ಬೇಳ. ಕುಂಬಳೆ, ದ. ಕನ್ನಡ.

ಮುದ್ರಕರು:
ಶಾಂತಾ ಛಾಪಖಾನೆ, ಲಿಮಿಟೆಡ್, ಮಂಗಳೂರು.

ಮಾತೃಭಕ್ತಿ

ಬರೆದವರು

ಶ್ರೀ ಶೇಣಿ ಗೋಪಾಲಕೃಷ್ಣ ಭಟ್

"ಹರಿಕಥಾ ನಿರೂಪಣಾ ಪ್ರವೀಣ"

ಪ್ರಕಾಶಕರು

ಕರ್ನಾಟಕ ಸಾಹಿತ್ಯ ಪ್ರಕಾಶನ ಗ್ರಂಥಮಾಲೆ

ಪೋಸ್ಟು: ಬೇಳ. ಕುಂಬಳೆ, ದ. ಕನ್ನಡ.

ಮುದ್ರಕರು:

ಶಾಂತಾ ಛಾಪಖಾನೆ, ಲಿಮಿಟೆಡ್, ಮಂಗಳೂರು

ಬೆಲೆ ೦—೧೪—೦. Price 0—14—0.

ಎರಡು ಮಾತು.

****

ಭಾರತ ವರ್ಷದ ಹಿರಿಯ ಹಬ್ಬವಾದ ದೀಪಾವಳಿಯ ಸುಮೂಹೂರ್ತದಲ್ಲಿ ನಮ್ಮ ಗ್ರಂಥಮಾಲೆಯಿಂದ ಈ ಹೊತ್ತಗೆಯನ್ನು ಓದುಗರ ಮುಂದಿಡುವ ಭಾಗ್ಯ ಒದಗಿದುದಕ್ಕಾಗಿ ಅಮಿತ ಆನಂದವೆನಿಸುತ್ತದೆ. ಪ್ರಾಚೀನ ಕಾಲದಿಂದಲೂ ಜ್ಞಾನಕ್ಕೆ, ವಿವೇಕಕ್ಕೆ, ವಿದ್ಯೆಗೆ ದೀಪವನ್ನು ಸಂಕೇತವಾಗಿಟ್ಟುಕೊಂಡು ಪೂಜಿಸುವುದು ಭಾರತೀಯರಾದ ನಮ್ಮ ಸಂಪ್ರದಾಯಗಳಲ್ಲೊಂದು ಹಿರಿಮೆ. ಜ್ಞಾನದಂತೆ ಬೆಳಕೂ ಅಕ್ಷಯಸಂಪತ್ತು. ಒಂದು ದೀಪ ಇನ್ನೊಂದನ್ನು ಉರಿಸುವುದು. ಅದು ಮತ್ತೊಂದನ್ನು ಬೆಳಗಿಸುವುದು. ಅಂತೆಯೇ, ಸಹಸ್ರಾರು ಸೊಡರುಗಳು ಉರಿದು ಬೆಳಗುವಂತಾಗುವುದು. ಜ್ಞಾನವೂ ದಾನದಿಂದ ಕ್ಷಯವಾಗದೆ, ಅಕ್ಷಯವಾಗುತ್ತಾ ಹೋಗುತ್ತಿದೆ.

ಅಂತೆಯೇ, ಪಂಡಿತ ಪಾಮರರೆಂಬ ಬೇಧ ಭಾವನೆಯಿಲ್ಲದೆ, ಜ್ಞಾನದಾನ ಹಾಗೂ ಮನಾನಂದಗಳನ್ನೀಯಲು ಸಮರ್ಥವಾದ ಈ ನಾಟಕವನ್ನು ವಾಚಕರ ಮುಂದಿರಿಸಿರುವೆ. ಇದರಿಂದ ನಮ್ಮ ವಾಚಕರು ಸಂತಸಗೊಂಡರೆ, ನನ್ನ ಶ್ರಮವು ಸಾರ್ಥಕವಾದಂತಾಗುವುದು.

ಈ ನಾಟಕವನ್ನು ಮಾಲೆಯಲ್ಲಿ ಪೋಣಿಸಿಕೊಳ್ಳಲು, ಸಂತೋಷದಿಂದ ಸಮ್ಮತಿಸಿದ ಈ ಗ್ರಂಥದ ಲೇಖಕರಾದ, ಶ್ರೀ ಶೇಣಿ ಗೋಪಾಲಕೃಷ್ಣ ಭಟ್ಟ, "ಹರಿಕಥಾ ನಿರೂಪಣಾ ಪ್ರವೀಣ" ಇವರ ಉಪಕಾರವು ಚಿರಸ್ಮರಣೀಯವಾದುದು. ಮಾತ್ರವಲ್ಲ ಈ ಹೊತ್ತಗೆಯನ್ನು ಅಂದವಾಗಿ ಮುದ್ರಿಸಿಕೊಟ್ಟ ಶಾಂತಾ ಪ್ರೆಸ್ಸಿನ ಕೆಲಸಗಾರ ಬಂಧುಗಳೂ, ಅಭಿನಂದನೀಯರು.

ಕೊನೆಯದಾಗಿ, ನಮ್ಮ ಗ್ರಂಥಮಾಲೆಯ ಸರ್ವತೋಮುಖ ಏಳಿಗೆಯನ್ನು ಬಯಸುತ್ತಿರುವ ಕರ್ಣಾಟಕದ ಬಂಧು ಭಗಿನಿಯರಿಗೆ ಹಾರ್ದಿಕ ವಂದನೆಗಳು.

— ನಮಸ್ತೆ —

ಖರ ಸಂವತ್ಸರದ
ಆಶ್ವೀಜ ಮಾಸ

ಕೆ. ಯಸ್ ಭಟ್,
ಸಂಪಾದಕ.

ಆಜೀವ ಸದಸ್ಯರು

ಶ್ರೀ ಯಸ್. ಕೃಷ್ಣ ಭಟ್ಟ, ಕಾರ್ಯದರ್ಶಿ, ಗೆಳೆಯರ ಬಳಗ ಕಾಸರಗೋಡು. ಇವರು
,, ಯಸ್. ಕೆ. ಶಾಂಭಟ್, ಇವರು
,, ಯಚ್. ಶಂಕರನಾರಾಯಣ ಭಟ್ಟ, ಎಡನಾಡು. ಇವರು
,, ಶಂಕರ, ಪಾಣಾಜೆ, ಅರ್ಧಮೂಲೆ. ಇವರು
,, ಚೆಕ್ಕೆ ಈಶ್ವರ ಭಟ್ಟ, ಕುದುಕ್ಕಳಿ. ಇವರು
ಶ್ರೀಮತಿ ಪರಮೇಶ್ವರಿ ಅಮ್ಮ, ಐ. ಸಿ. ಭಂಡಾರಿ, ಕುಂಬಳೆ. ಇವರು

ಪೋಷಕರು

ಶ್ರೀ ಕೆ. ಶಾಂಭಟ್, ಯಂ. ಎ., ಪೆರಡಾಲ. ಇವರು
,, ಡಾ. ಪಿ. ಎಸ್. ಶಾಸ್ತ್ರಿ, ಪೆರಡಾಲ. ಇವರು
,, ಡಾ. ಕೆ. ಸಿ. ಆಳ್ವ, ಕಾಸರಗೋಡು. ಇವರು
,, ಯಚ್. ಮಹಾಲಿಂಗ ಭಟ್ಟ, ಎಡನಾಡು. ಇವರು
,, ಸಿ. ಯಚ್. ರಾಮಕೃಷ್ಣ ಭಟ್ಟ, ಬೇಳ. ಇವರು
,, ಡಿ. ಮಹಾಬಲ ಭಟ್ಟ, ಪೆರಡಾಲ. ಇವರು
,, ಪೂವಾಳೆ ಶಂಕರನಾರಾಯಣ ಭಟ್ಟ. ಇವರು
,, ವಿಷ್ಣು ತಂತ್ರಿ, ಮಾಯಿಪ್ಪಾಡಿ ಇವರು
,, ಯನ್. ಕೆ. ವಿಶ್ವನಾಥ್, ಪೆರಡಾಲ. ಇವರು
,, ಕೆ. ಜಿ. ಕಷ್ಣಭಟ್ಟ, ಪೆರಡಾಲ. ಇವರು
,, ಬಿ. ಶಾಂಭಟ್ಟ, ಕ್ಯೊಪಾಡಿ. ಇವರು
,, ಕೆ. ಕೊರಗಪ್ಪ, ವಿಟ್ಲ. ಹೈಸ್ಕೂಲು.
,, ಬಿ. ವಿನ್ಸೆಂಟ್ ಡಿ. ಸೋಜ, ಮುಡಂತ್ಯಾರು.

ಸಹಾಯಕರು

ಶ್ರೀ ಕೆ. ವಿ. ಸುಬ್ರಹ್ಮಣ್ಯ ಭಟ್ಟ, ಕಾವೇರಿಕಾನ. ಇವರು
,, ಜ್ಞಾನೋದಯ ಶಾಲೆ, ಮಾನ್ಯ. ಇವರು
,, ಪಟ್ಟಾಜೆ ಕೃಷ್ಣ ಭಟ್ಟರು.
,, ಪುದುಕೋಳಿ ಶಂಕರ ಭಟ್ಟರು.

ಶ್ರೀ ಗೆಳೆಯರೊಬ್ಬರು.
,, ಯನ್. ಕೇಶವ ಭಟ್ಟರು, ಚಾಳೆತಡ್ಕ.
,, ಕಿಳಿಂಗಾರು ವೆಂಕಟ್ರಮಣ ಭಟ್ಟರು.
,, ಯನ್. ಗೋಪಾಲಕೃಷ್ಣ ಭಟ್ಟರು.
,, ಕೆ. ಅಣ್ಣಪ್ಪಯ್ಯ, ಕಾಸರಗೋಡು. ಇವರು
,, ಯಂ. ಶಂಕರನಾರಾಯಣ, ಭಟ್ಟರು, ಕಿಜಕ್ಕಾರು.
,, ಚಿಕ್ಕೆ ಕೇಶವ ಭಟ್ಟರು, ಕುದುಕಲ್ಕುಳಿ.
,, ಪಿ. ಎಸ್. ಶಂಕರನಾಯಣ ಭಟ್ಟರು, ದೈತೋಟ.
,, ಕೆ. ಶಾಂಭಟ್ಟರು, ಕೊಡ್ಮಾಡು.
,, ಇಚ್ಲಂಪಾಡಿ ರಾಮಯ್ಯ ನಾಯ್ಕ, ಕುಂಬಳೆ. ಇವರು
,, ಯಂ. ವಾಸ್ತೇವ ರಾವ್, ಪೆರಡಾಲ. ಇವರು
,, ಪೆರಡಾಲ ದೂಮಣ್ಣ ರೈ. ಇವರು
,, ಸಾಂತಸುಲಾಯ, ಪಟೇಲ, ನೆಕ್ರಾಜೆ. ಇವರು
,, ಬಿ. ಕೃಷ್ಣ ಭಟ್ಟರು, ಬೊಳುಂಬು.
,, ಯಂ. ವೆಂಕಟ್ರಮಣ, ಭಟ್ ಬಿ, ಏ. ಯಲ್. ಟಿ.
,, ಪಿ. ವಿಷ್ಣು ಭಟ್ಟರು, ಪಂಜರಿಕೆ.
,, ಬಿ. ನರಸಿಂಹ ಪೈ, ಪೆರ್ಲ, ಇವರು
,, ಗೋಪಾಲಕೃಷ್ಣ ಕುಣಾಕುಳ್ಳಾಯರು ಉಬ್ರಂಗಳ.
,, ಶಂಕರನಾರಾಯಣ ಭಟ್ಟರು, ಹೊಸಮನೆ.
,, ನಾರಾಯಣ ಮಧ್ಯಸ್ಥ, ಕುಂಜಾರು. ಇವರು
,, ಈಶ್ವರಭಟ್ಟರು, ಕಾವೇರಿಕಾನ.
,, ಸಿ. ಕೃಷ್ಣಶಾಸ್ತ್ರಿ, ಸ, ನಾ, ಹೈಸ್ಕೂಲ್, ಪೆರ್ಲ.
,, ಟಿ. ಗಣಪತಿ ಭಟ್, ಪೆರ್ಲ.
,, ಚುಳ್ಳಿಕಾನ ಪರಮೇಶ್ವರ ಭಟ್ಟರು.
,, ಯಸ್. ಶಾಂಭಟ್ಟರು, ಎಡನೀರು.
,, ಎಡನಾಡು, ಮರುವಳ ಹೊಸಮನೆ ವೆಂಕಟ್ರಮಣ ಭಟ್ಟರು.
,, ಬಿ. ಸಾಲ್ದಾಂಞಾನವರು, ಮಡಂತ್ಯಾರು.
,, ಏ. ಜಿ. ತಿರುಮಲೇಶ್ವರ ಭಟ್ಟರು. ವಿಟ್ಲ.
,, ಯನ್. ಮಹಾಬಲೇಶ್ವರ ಭಟ್ಟರು.

(ಸಹಕರಿಸುವುದಾಗಿ ಆಶ್ವಾಸನೆಯಿತ್ತು ಈ ತನಕ ಧನ ಸಹಾಯ ನೀಡದವರು, ಕೃಪೆಯಿಟ್ಟು ಧನಸಹಾಯ ನೀಡಬೇಕಾಗಿ ವಿನಂತಿ.)

ಸಂ.

೧ನೆಯ ಅಂಕ

ಮೊದಲನೇ ದೃಶ್ಯ

ಸಮುದ್ರ ತೀರ

[ಕೈಕಸೆಯು ಶಿವಪೂಜೆ ಮಾಡುತ್ತಿರುವಳು.]

ಪದ್ಯ ೧

॥ ತಿಲಂಗ ರೂಪಕ ॥

ಪಾಹಿಲೋಕ ಜನಕಾ । ತ್ರಿಪುರಾಂತಕ-ಭವನಿವಾರಕಾ ॥ ಪಾಹಿ ॥ ಪಲ್ಲವಿ ॥
ಸ್ಮರವಿದಾರಾ-ನತಮಂದಾರ । ದುರಿತದೂರ ಕರುಣಾಗಾರ ।
ಗಿರಿಜಾವರ-ಹೇ ವಿಶ್ವಂಭರ । ಜಯಶು ಶಂಕರಾ ॥ ಪಾಹಿ ॥ ೧ ॥

ಸರ್ವಮಂಗಲದಾಯಕಾ! ಪರಮೇಶ್ವರಾ! ಈ ಸುಮಾಂಜಲಿಯನ್ನು ಕೃಪೆಯಿಂದ ಸ್ವೀಕರಿಸಿ ಕಾಪಾಡು. ದೇವಾ! ಸದಾ ನಿನ್ನ ಪಾದಭಕ್ತಿಯು ನನ್ನ ಹೃದಯದಲ್ಲಿ ಅಚ್ಚಳಿಯದೆ ಉಳಿಯಲಿ. ನನ್ನ ನಾಲಗೆಯು ನಿನ್ನ ನಾಮ ಭಜನೆಯನ್ನು ಮರೆಯದಿರಲಿ. ನಿತ್ಯವೂ ಈ ಶಿರವು ನಿನ್ನ ಪಾದಕಮಲಗಳಿಗೆ ಎರಗುತ್ತಿರಲಿ. ದೇವಾ! ಮತ್ತೇನು ಬೇಡಲಿ? ಇಷ್ಟನ್ನು ದಯೆಯಿಂದ ಕರುಣಿಸಿ, ಅಮಂಗಲವನ್ನು ನಿವಾರಿಸಿ, ಅಜ್ಞಾನವನ್ನು ಮರೆಯಿಸಿ, ಕಾಪಾಡು. (ಎಂದು ಎರಗುತ್ತಿರುವಷ್ಟರಲ್ಲಿ, ಕಡಲತೆರೆಯೊಂದು ಬಂದು ಶಿವಲಿಂಗವನ್ನು ಕೊಚ್ಚಿಕೊಂಡು ಹೋಗುವುದು—ಖಿನ್ನಳಾದ ಕೈಕಸೆಯು,) ಹಾ! ದೈವವೇ ಏನೀ ವಿಪರೀತವು? ಶಂಕರಾ! ನನ್ನದೇನು ಅಪರಾಧವಾಯಿತು? ಅಕಟಾ.

[ತೆರೆ ಬೀಳುವುದು]

ಎರಡನೇ ದೃಶ್ಯ

ರಾವಣನ ದರ್ಬಾರ್

[ಕುಂಭಕರ್ಣ, ವಿಭೀಷಣ, ಪ್ರಹಸ್ತ, ವೈತಾಳಿಕಾದಿಗಳು—ರಾವಣನ ಪ್ರವೇಶವಾದ ಕೂಡಲೇ ಎದ್ದು ನಿಂತು]

ಪದ್ಯ ೨

"ಮಹಾರಾಜಾಧಿರಾಜ, ರಾಕ್ಷಸ ಸಾರ್ವಭೌಮ, ರಾವಣೇಶ್ವರ ಮಹಾರಾಜಕೀ ಜೈ (ಎಂದು ಆಸೀನರಾಗುವರು.)

ರಾವಣ:—ಪ್ರಹಸ್ತಾ! ವೀರರಾದ ನಾವು ಬಹಳ ಸಾಹಸದಿಂದ, ಕಳೆದುಹೋದ ನಮ್ಮ ಸ್ವಾತಂತ್ರ್ಯವನ್ನೂ, ಸ್ವರಾಜ್ಯವನ್ನೂ ಮರಳಿ ಸಾಧಿಸಿದ್ದೇ

ಬಿಟ್ಟೆವು. ಕುಬೇರನನ್ನು ಜಯಿಸಿ ಪುಷ್ಪಕ ವಿಮಾನವನ್ನೂ ಸೆಳಕೊಂಡೆವು. ಆದರೂ,—

ಪ್ರಹಸ್ತ:—ಪ್ರಭೊ ಮುಂದೇನು? ಅನುಜ್ಞೆಯಾಗಲಿ.

ರಾವಣ:—॥ ಕಂದ ॥

ಬಿಡದಾ ಬಡ ಬಿಡು ಗಂಣರ ।
ಬಡಿದು ಬಡಿದು ದೇವರಾಜ ವೈಭವವೆಲ್ಲಂ ॥
ಬಡನಡುವಿನ ಕಡುಸೊಬಗಿನ ।
ಮಡದಿಯರೊಡಗೂಡಿ ಭೋಗಿಸಲ್ಕೆಣಿಸಿರ್ಪೆಂ ॥ ೧ ॥

ಈ ಅಸುರಾಧಿಪತ್ಯದೊಂದಿಗೆ, ಅಮರಾಧಿಪತ್ಯವನ್ನೂ ಸಾಧಿಸಿದರೇನೇ ನಮ್ಮ ಯೋಗ್ಯತೆಗೆ ಕಳೆ! ಧೀರತೆಗೆ ಬೆಲೆ!!

ಪ್ರಹಸ್ತ:—ಲಂಕೇಶ್ವರಾ ಭಲಾ! ಇದೀಗ ವೀರತನ. ದಾನವೇಂದ್ರ ನಿಗೇನೂ ಕಷ್ಟ ಸಾಧ್ಯವಲ್ಲ ಅಮರರ ಸಮರ.

ರಾವಣ:—ಮತ್ತೇತರ ಅಭ್ಯಂತರ

ಪ್ರಹಸ್ತ:—ಕ್ಷಮಿಸಬೇಕು. ಪ್ರಭುಗಳ ಹಾಗೂ ಪ್ರಜೆಗಳ ಹಿತಾ ಹಿತಗಳನ್ನು ಚಿಂತಿಸಿ, ಯತಾರ್ಥವನ್ನು ನಿವೇದಿಸುವುದೇ, ಮಂತ್ರಿಯ ಧರ್ಮವು. ರಾಕ್ಷಸೇಂದ್ರಾ, ಆ ಮಾಯಾವಿ ಹರಿಯು ದೇವತೆಗಳಿಗೆ ಸಹ ಕರಿಸುತ್ತಿರುವನಲ್ಲಾ? ಆ ಕಪಟಿಯು ನಮ್ಮ ಮೇಲೆ ಏನು ಪ್ರಸಂಗವನ್ನು ತಂದೊಡ್ಡುವನೋ ಎಂಬೊಂದು ಶಂಕೆಯೇ ನಮ್ಮ ಈ ಜೈತ್ರಯಾತ್ರಾ ಪ್ರಕರ ಣದಲ್ಲಿ ಬಗೆಹರಿಸಲು ಬಾರದ ಸಮಸ್ಯೆಯಾಗಿದೆ.

ರಾವಣ:—ಏನು? ಆ ಹರಿಯ ಕಾಟ ಪರಿಹರಿಸಲಿಕ್ಕೆ ಬಾರದುದೆ? ನನಗೂ? ಈ ದಶಕಂಠನಿಗೂ? ಪ್ರಹಸ್ತಾ! ನಿಜವಾಗಿಯೂ ಲಂಕೇಶ್ವರನಿಗದು ಅಸಾಧ್ಯವಲ್ಲ. ಹರಿ? ಹ್ಹ! ಹರಿಯಂತೆ! ಗಿರಿಯಂತೆ! ಅವನಿಗಿಂತಲೂ ಹೆಚ್ಚಿ ನವರನ್ನು ಈ ರಾವಣೇಂದ್ರನು ನುಚ್ಚು ನೂರು ಮಾಡಬಲ್ಲನು. ಅನುಮಾನ ವೇನು? ಸಹೋದರ ಕುಂಭಕರ್ಣಾ! ಏನು ನಿನ್ನಭಿಮತವು?

ಕುಂಭಕರ್ಣ:—ಅಣ್ಣಾ! ನನಗೊಮ್ಮೊಮ್ಮೆ ನಮ್ಮಾ ಮಂತ್ರೀಶ್ವರರ ಆಖ್ಯಾನಗಳನ್ನು ಕೇಳಿದರೆ ತಲೆಸಿಡಿತ ಉಂಟಾಗುತ್ತಿರುವುದು. ಸುರರಿಗೊಬ್ಬ ಹರಿ ಸಹಕಾರಿ! ಸೂತ್ರಧಾರಿ!! ನಮ್ಮಂಥಹ ವೀರರು ಹಿಂದೆ ಅಮರಲೋಕದ ಸಿಂಹಾಸನಾಧೀಶ್ವರರಾಗಿ ಸರ್ವಾಧಿಕಾರವನ್ನು ನಡೆಸುತ್ತಿದ್ದಾಗ ಮಾತ್ರ ಹರಿ

ಯೂ ಇಲ್ಲ ಗಿರಿಯೂ ಇಲ್ಲ. ರಣಭೂಮಿಯಲ್ಲಿ ಬಿದ್ದಿದ್ದ ಸುರರ ಒಡಲನ್ನು ಹರಿದು ತಿನ್ನುವ ಆಸೆಯಿಂದ ನರಿಗಳು ಮಾತ್ರ ಪರಿವಾರಸಹಿತ ಬಂದಿದ್ದುವಂತೆ.

ರಾವಣ:—(ಗೊಳ್ಳೆಂದು ನಗುತ್ತಾ) ಶಹಭಾಸ್ ತಮ್ಮಾ.

ಕುಂಭಕರ್ಣ:—ಅಣ್ಣಾ! ಇನ್ನು ಯೋಚನೆ ಬೇಕಾಗಿಲ್ಲ. ಯಾರು ಬರುವರೊ ಬರಲಿ. ನೋಡಿಯೇ ಬಿಡೋಣ. ಅಣ್ಣ ತಮ್ಮಂದಿರಿಬ್ಬರ ಪರಾಕ್ರಮವೊಮ್ಮೆ ಜಗತ್ತಿನಲ್ಲಿ ಪ್ರಕಟವಾಗಲಿ.

ರಾವಣ:—ನಿಜವು. ಇದೇ ಕೊನೆಯ ನಿರ್ಧಾರವು. ವಿಭೀಷಣಾ ಹಾಗಲ್ಲವೆ? ಸುಮ್ಮನಿರುವೆಯೇಕೆ?

ವಿಭೀಷಣ:—ಅಣ್ಣಾ! ಈ ಪ್ರಕರಣದಲ್ಲಿ ಏನುಮಾಡಬೇಕು? ಏನಾಡಬೇಕು? ಎಂಬುದೇ ನನಗೆ ತೋರದಾಗಿದೆ. ಅಥವಾ ನನ್ನ ಅಭಿಪ್ರಾಯವನ್ನೊಮ್ಮೆ ಪ್ರಕಟಿಸಿದರೆ, ಅದು ರುಚಿಸುವುದೋ ಇಲ್ಲವೊ?

ರಾವಣ:—ಹೇಳುವುದಕ್ಕೆ ಮೊದಲೇ ಸಂದೇಹವೇಕೆ? ಹೇಳು. ಅದೇನೋ ಕೇಳೋಣ.

ಕುಂಭಕರ್ಣ:—ಹೇಳುವುದೇನನ್ನು ಬೇರೆ? ಭಜನೆ, ಕೀರ್ತನೆ ಇವುಗಳನ್ನೆಲ್ಲಾ ಮಾಡಿಕೊಂಡೇ ಇರೋಣವೆಂದು.

ವಿಭೀಷಣ:—ನಿಜವಾಗಿಯೂ ಅದು ವಿಹಿತವಾದ ಮಾರ್ಗವೇ. ಅದು ಸಾಧ್ಯವಿಲ್ಲವಾದರೆ ನಿಷ್ಕಾರಣವಾಗಿ ಹರಿವಿರೋಧವನ್ನಾದರೂ ಏಕೆ ಮಾಡಬೇಕು? ರಾಕ್ಷಸೇಂದ್ರಾ! ಪರಮೇಶ್ವರನು ಪ್ರಸಾದಿಸಿರುವ ಈ ಮಹಾ ವೈಭವವು ನಮಗೆ ಸಾಲದೆ? ಶ್ರೀ ಹರಿಯ ಶರಣರಾದ ದೇವತೆಗಳೊಡನೆ ವೈರವೇಕೆ? ಧುರವೇಕೆ? ಈ ತರದ ದುರಾಗ್ರಹದಿಂದ ಹಿಂದೆ ವೀರದಾನವರನೇಕರು ಏನಾದರು? ಎಂಬೀ ವಿಷಯವು ಚಿತ್ತಕ್ಕೆ ಅರಿವಿಲ್ಲದ್ದಲ್ಲವಷ್ಟೆ? ಆದುದರಿಂದ ಈ ಅತ್ಯಾಗ್ರಹವು ಬೇಡ. ನಿನ್ನ ಕೈಯಿಂದಲೇ ನೆಟ್ಟ ದಾನವ ಕುಲದ ಕೀರ್ತಿವೃಕ್ಷಕ್ಕೆ ನೀನೇ ಕೊಡಲಿಯನ್ನಿಡಬೇಡ. ನಿನ್ನ ದಯೆಯಿಂದ ಎಲ್ಲೆಲ್ಲೂ ಹಬ್ಬಿದ ಈ ನಾಡಿನ ಶಾಂತಿಯನ್ನು ಕೆಡಿಸಿ ಅಶಾಂತಿಯನ್ನುಂಟು ಮಾಡಬೇಡ. ನಿನ್ನ ಕೃಪಾಛತ್ರದ ನೆರಳಲ್ಲಿ ಜೀವನ ಸಂಗ್ರಾಮದ ಅಜೇಯ ಯೋಧರಾಗಿ ಮೆರೆವ ವೀರಸೈನಿಕರ ಮನೆಮನೆಗಳಲ್ಲಿ, ಸ್ತ್ರೀ ಬಾಲಾದಿ ಜನದ ಗೋಳಾಟಕ್ಕೆ ಸಂಧಿಯನ್ನು ಕಲ್ಪಿಸಬೇಡ. ಓಲೆ ಕುಂಕುಮಗಳನ್ನು ಕಳ

ಕೊಂಡ ಯೋಧರ ಪತ್ನಿಯರ ಕಣ್ಣೀರಿಂದ ನಮ್ಮ ನಾಡ ಪತಾಕೆಯನ್ನು ತೋಯಿಸಬೇಡ.

ರಾವಣಃ—(ರೇಗಿ) ಸಾಕುಮಾಡು ನಿನ್ನೀ ಹಾಳು ಉಪನ್ಯಾಸವನ್ನು ಪ್ರತಿಯೊಂದು ಕಾರ್ಯಾರಂಭದಲ್ಲಿಯೂ, ಹೀಗೆ ನನ್ನನ್ನು ಪ್ರತಿಭಟಿಸುವುದೇ ಹುಟ್ಟುಗುಣವಾಗಿ ಬಿಟ್ಟಿದೆ ನಿನಗೆ.

ಕುಂಭಕರ್ಣಃ—ಹಾಗಿದ್ದರೂ, ಮತ್ತೂ ಈತನನ್ನು ಕೇಳುವುದನ್ನು ಬಿಡುವುದಿಲ್ಲವಲ್ಲ? ಅಣ್ಣಾ! ಈ ವಿಭೀಷಣನಿಗೊಂದು ಭಜನಾ ಮಂದಿರವನ್ನು ಸ್ಥಾಪಿಸಲು ಅಪ್ಪಣೆಯನ್ನು ಕರುಣಿಸಿಬಿಡು. ಅಷ್ಟೇಸಾಕು. ನಾವು ಮಾಡಬೇಕಾದುದೇನೋ ಅದು ನಮಗೆ ತಿಳಿದೂ ಇದೆ, ಸಾಧ್ಯವೂ ಇದೆ. ಪಾಪ ಈ ವಿಭೀಷಣನನ್ನೇಕೆ ಪೀಡಿಸಬೇಕು?

ರಾವಣಃ—ತಮ್ಮಾ! ವಿಹಿತವಾದ ಅಭಿಪ್ರಾಯವು.

ಪದ್ಯ ೩

ಪ್ರಹಸ್ತಾ! ಸರ್ವ ಸನ್ನಾಹಗಳೂ ಸಿದ್ಧವಾಗಲಿ. ಮಾತೆಯ ಆಶೀರ್ವಾದವನ್ನು ಪಡೆದು ಸುರಲೋಕಕ್ಕೆ ಜೈತ್ರಯಾತ್ರೆ ಮಾಡೋಣ—

[ರಾವಣಾದಿಯಾಗಿ ಎಲ್ಲರೂ ಏಳುವರು. ತೆರೆಬೀಳುವುದು.]

ಮೂರನೆಯ ದೃಶ್ಯ

ಕೈಕಸೆಯ ಮಂದಿರ

ಕೈಕಸೆಯು ಖಿನ್ನಳಾಗಿರುತ್ತಾ

ಪದ್ಯ ೪

ರಾವಣಃ—(ಬರುತ್ತಾ ಇದನ್ನು ಕೇಳಿ) ಪರಾಭವ? ಲಂಕೇಶ್ವರನ ಮಾತೆಗೆ ಪರಾಭವ? ಲೋಕೈಕ ವೀರ ಕುಮಾರರ ಮಾತೆಗೂ ಪರಾಭವವೆ? ಏತರಿಂದ (ತಾಯಿಗೆ ಎರಗಿ) ಜನನೀ! ಸುಖಜೀವನದಲ್ಲಿ ಈ ಅಶ್ರುಜೀವನಕ್ಕೇನು ಕಾರಣ?

ಕೈಕಸೆಃ—ನನ್ನ ದುರ್ವಿಧಿಗಾಗಿ ಮಗನೇ.

ರಾವಣಃ—ಹುಂ? ದುರ್ವಿಧಿ! ಹಾಗೆ ವಿಧಿಸಿದ ವಿಧಿ ಯಾವನವನು?

ಕೈಕಸೆಃ—ರಾವಣಾ! ಪರಿಹರಿಸಲಿಕ್ಕೆ ಬಾರದ ವಿಚಾರವದು. ನಿನಗೇಕದು? ನೀನದಕ್ಕೆ ಏನು ಮಾಡಲಾಪೆ, ಪಾಪ! (ಕಣ್ಣೀರಿಳಿಸುವಳು.)

ರಾವಣ:—ಅಮ್ಮಾ! ಇದೇಕೆ ಹೀಗೆ ಹೇಳುವೆ?

॥ ಕಂದ ॥

ಅಂಬರದಾ ರವಿ ಬಿಂಬವ।
ಕುಂಭಿನಿಗಿಳಿಸಲಿ? ಕುಲಾದ್ರಿಯುಂ ಜರಿಯಲಿ ಪೇ॥
ಳಂಬುಧಿ ಹೀರಲಿ? ತರಲೀ।
ನಂಬುಜಭವ ಶೌರಿ ದೇವ ಗೌರೀವರರುಂ? ॥ ೧ ॥

ಮಾತೆ! ರಾವಣನನ್ನು ಹೆತ್ತ ನಿನಗಾವ ಕಾಲಕ್ಕೂ ಪರಾಭವವಿಲ್ಲ. ನನ್ನ ಶಬ್ದಕೋಶದಲ್ಲಂತೂ ಆ ಶಬ್ದವೇ ಇಲ್ಲ. ತಾಯೀ! ಇದು ನಿಶ್ಚಯ. ಆದುದರಿಂದ ಏನಾಯಿತು? ಏನಾಗಬೇಕು? ಅನುಮಾನಿಸದೆ ಹೇಳು.

ಕೈಕಸೆ:—ರಾವಣಾ! ನನ್ನ ಶಿವಪೂಜೆಗೆ ವಿಘ್ನವುಂಟಾಯಿತು.

ರಾವಣ:—ಶಿವಪೂಜೆಗೆ ವಿಘ್ನವೆ? ಎಲ್ಲಿ? ಹೇಗೆ? ಯಾವಾಗ? ಯಾರಿಂದ?

ಕೈಕಸೆ:—ಮಗೂ! ನನ್ನ ನಿತ್ಯಪದ್ಧತಿಯಂತೆ ಈ ದಿನವೂ ಕಡಲತಡಿಯಲ್ಲಿ ಮಳಲ ಲಿಂಗವನ್ನು ಮಾಡಿ ಶಿವನನ್ನು ಆರಾಧಿಸುತ್ತಿದ್ದೆನು. ಅಷ್ಟರಲ್ಲೀ ಸಮುದ್ರದ ಅಲೆಯೊಂದು ಬಂದು ಶಿವಲಿಂಗವನ್ನು ಭಿನ್ನಮಾಡಿ, ಪೂಜೆಗೆ ಭಂಗವನ್ನು ತಂದಿತು.

ರಾವಣ:—ಭಲೇ! ಅಮ್ಮಾ, ಇದೆಲ್ಲವೂ ಆ ಕಪಟಿ, ದ್ರೋಹಿ. ಹರಿಯ ಆಟವು. ನಮ್ಮ ಜನ್ಮಶತ್ರುವಾದ ಆತನ ತಂತ್ರದಿಂದಲೇ ಹೀಗೆ ವರುಣಾದಿ ದೇವತೆಗಳೆಲ್ಲಾ ಕೊಬ್ಬಿರುವರು ಇದಕ್ಕಾಗಿಯೇ ಹರಿಯೊಂದಿಗೆ ಅಮರರನ್ನೆಲ್ಲಾ ಬಡಿದು, ಹಿಡಿದು ತರುವುದಕ್ಕೆ ಸನ್ನಾಹ ಮಾಡಿಯೇ ಇರುವೆನು. ಜನನೀ, ಚಿಂತಿಸದಿರು. ಆ ವರುಣಾದಿಗಳ ಕಾಟ—ವಿಷ್ಣುವಿನ ಮಾಟಗಳೆಲ್ಲಾ ಆ ಮೇಲೆ ಹೇಗೆ ನಡೆಯುವುದೊ ನೋಡೋಣ! ಅಮ್ಮಾ ಆಶೀರ್ವದಿಸು. ಆ ದುರಾತ್ಮರನ್ನೆಲ್ಲಾ ನಿನ್ನ—ನಿನ್ನ ಮಗನಾದ ನನ್ನ ಪಾದಾಕ್ರಾಂತರನ್ನಾಗಿ ಮಾಡುವೆನು.

ಕೈಕಸೆ:—ಬೇಡ, ಮಗನೇ ಆ ಹರಿಯಲ್ಲಿ ಹಗೆಯನ್ನು ಮಾಡಬೇಡ. ಅಕಟಾ! ದಾಸನ ವೈರಿಯಲ್ಲಿ ದಾನವನಾದ ನೀನು ಶಕ್ತಿಯಿಂದ ಗೆಲ್ಲುವ ಬಗೆ ಹೇಗೆ? ಭಕ್ತವತ್ಸಲನಾದ ಆತನಲ್ಲಿ ಭಕ್ತನಾಗಿಯೇ ಜಯಿಸಬೇಕಾದುದು ವಿಹಿತವು.

ರಾವಣ:—ಏನು? ಶೈವನಾದ ನಾನು ವಿಷ್ಣುವಿಗೆ ತಲೆಬಾಗಬೇಕೆ? ಅಮ್ಮಾ ಸಿಟ್ಟಾಗಬಾರದು. ಈ ಶಿರಗಳು ಶಿವನಿಗೊಬ್ಬನಿಗೆ, ಅದೂ ಆತನು ನ್ಯಾಯದಲ್ಲಿದ್ದರೆ, ಬಾಗುವವೇ ವಿನಹ ಮತ್ತಾರಿಗೂ ಬಾಗವು. ಇದು ದೃಢ ನಿಶ್ಚಯವು.

ಕೈಕಸೆ:— (ಸಮಾಧಾನ ಪಡಿಸುವಂತೆ.) ನನಗೆ ತಿಳಿಯದೇ ನಿನ್ನ ಶಕ್ತಿಯೂ, ಶಿವ ಭಕ್ತಿಯೂ? ಅವಿರಲಿ. ಈಗೇಕೆ ಕೋಪತಾಪಗಳು? ಹೋಗಲಿ ಬಿಡು. ನಾಳೆ ಇನ್ನೊಂದು ಶಿವಲಿಂಗವನ್ನು ಮಾಡಿ, ಮಹದೇವನನ್ನು ಪೂಜಿಸಿದರಾಯಿತು.

ರಾವಣ:— ಅಮ್ಮಾ ಅದು ಸಲ್ಲದು. ಮಹಾತಪಸ್ವಿಗಳ ಕುಟುಂಬದ ರಾವಣೇಶ್ವರನ ಮಾತೆ ನಿರ್ಜೀವವಾದ ಒಂದು ವಸ್ತುವನ್ನು ಪೂಜಿಸುವುದೇ? ತಪಸ್ಸಿನಿಂದಲೂ, ಭಕ್ತಿಯಿಂದಲೂ ಆ ಸದಾಶಿವನನ್ನು ಮೆಚ್ಚಿಸಿ, ಆತ್ಮ ಲಿಂಗವನ್ನೇ ಪಡೆದು ನಿನಗರ್ಪಿಸುವೆನು.

ಕೈಕಸೆ:— ಏನು? ಶಿವನ ಆತ್ಮಲಿಂಗವೆ? ಆಹಾ! ಆ ಪುಣ್ಯವು ನನಗಿದೆಯೆ?

ರಾವಣ:— ಸಂದೇಹವೇನು? ಜಗದೇಕ ವೀರ ರಾವಣೇಶ್ವರನ ಮಾತೆಗೆ ಆ ಭಾಗ್ಯವಿಲ್ಲದಿದ್ದರೆ, ಮತ್ತಾರಿಗೆ ಆ ಭಾಗ್ಯವು? ಜನನೀ ನಿಜವಾಗಿಯೂ ತಂದೇ ತೀರುವೆನು. ಈ ಪುಣ್ಯ ಪಾದಗಳೇ ಈ ನುಡಿಗೆ ಸಾಕ್ಷಿ. (ಎರಗುವನು.)

ಕೈಕಸೆ:— ಮಗನೇ ನಿನಗೆ ಮಂಗಲವಾಗಲಿ. (ಹರಸುವಳು. ರಾವಣನು ಮುಂದೆ ಬರುವನು. ತೆರೆ ಬೀಳುವುದು.)

ರಾವಣ:— ಹುಂ, ಹೇಗೂ ಸಾಧಿಸಿಯೇ ಬಿಡುವೆನು. ಆತ್ಮಲಿಂಗವು ನನ್ನ ಕರಗತವಾದರೆ ಮುಂದೇನು? ಜಗದೀಶ್ವರನೇ ನಾನಾಗುವೆನು. ತ್ರಿಕೂಟಾಚಲವೇ ರಜತಾಚಲವಾಗುವುದು. ಮತ್ತೇಕೆ ಅಮರಾಧಿಪತ್ಯ? ಲೋಕಾಧಿಪತ್ಯವೇ ನನ್ನದಾಗುವುದು. ಭಲೇ? ರಕ್ತಪಾತವಿಲ್ಲದೆಯೇ ಬಲು ದೊಡ್ಡ ಲಾಭ! (ತೆರೆಗೆ ತಿರುಗಿ) ಯಾರಲ್ಲಿ?

ಚಾರಕ:— (ಪ್ರವೇಶಿಸಿ, ಅತ್ಯಂತ ವಿನಯಪರನಾಗಿ ನಿಲ್ಲುವನು.)

ರಾವಣ:— ಎಲೋ! ಪ್ರಕೃತ ನಾನೊಂದು ಮಹತ್ಕಾರ್ಯದ ಕಡೆಗೆ ಲಕ್ಷ್ಯವಿಟ್ಟು, ಸಾಧಿಸಲು ಹೊರಡಲಿರುವೆನಾದ್ದರಿಂದ ಸೇನಾ ಸಿದ್ಧತೆಯು ಈಗ ಬೇಕಾಗಿಲ್ಲವೆಂದು ಮಂತ್ರಿಗೆ ತಿಳಿಸತಕ್ಕದ್ದು. ನಡೆ.

ಚಾರಕ:— (ಹೋಗುವನು.)

ರಾವಣ:— ಹುಂ. ಇನ್ನು ಮುಂದಿನ ಪ್ರಕರಣವನ್ನು ನೋಡೋಣ. (ನಿರ್ಗಮನ.)

— ಮೊದಲನೆಯ ಅಂಕ ಮುಗಿದುದು. —

ಎರಡನೆಯ ಅಂಕ.

ಮೊದಲನೆಯ ದೃಶ್ಯ

ಗೋದಾವರಿ ತೀರ

[ಮಂಡೋದರಿಯು—ಸಖಿಯರೊಂದಿಗೆ ಪ್ರವೇಶಿಸುತ್ತಿರುವಳು.]

ಪದ್ಯ ೫.

(ಸ್ವಲ್ಪ ಹೊತ್ತು ತಿರುಗುತಿದ್ದು.)

ಮಂಡೋದರಿ:— ಆಹಾ! ಈ ಪ್ರದೇಶವು ಎಷ್ಟು ರಮಣೀಯವಾಗಿದೆ? ನೋಡಿದಿರೆ? ತರುಲತೆಗಳಲ್ಲಿ ಫಲ ಪುಷ್ಪಾದಿಗಳು ರಂಜಿಸುತ್ತಿರುವುದೇನು ಸೊಬಗು ಸಖಿಯರೇ, ವನದೇವಿಯು ಸುತ್ತಲೂ ಒಮ್ಮೆ ನೆಗೆದಾಡಿ, ಕುಸುಮಗಳ ರಾಜಿಯಲ್ಲೊಮ್ಮೆ ನುಸುಳಿ ಬರುತ್ತಿರುವ ಸುಗಂಧ ಗಂಧವಾಹಕನು ಮನವನ್ನು ಕುಣಿಸುತ್ತಿರುವನಲ್ಲವೆ? ವಸಂತ ಮಾಧವನೊಡಗೂಡಿ ವಿಹರಿಸುತ್ತಿರುವ ಈ ವನದೇವತೆಯ ಈ ಮನೋಹರತೆಯು, ನನ್ನಂಥವಳ ಬದಲು ರಸಿಕ ಕವಿಗಳ ದೃಷ್ಟಿಗೆ ಗೋಚರಿಸಿದ್ದರೆ, ಅದೆಷ್ಟು ಹೊಸ ಗ್ರಂಥಗಳ ಸೃಷ್ಟಿಯಾಗುತ್ತಿತ್ತೊ? ಧನ್ಯೆ! ಪ್ರಕೃತಿ ದೇವೀ, ನೀನೇ ಧನ್ಯೆ!

೧ನೆ ಸಖಿ:— (ಹತ್ತಿರ ಬಂದಾಲಿಸಿ.) ದೇವೀ ಯಾರು ಧನ್ಯೆಯು?

ಮಂಡೋದರಿ:— ಈ ವನದೇವಿಯೇ ಧನ್ಯೆಯು.

೧ನೆ ಸಖಿ:— ಅದೇತರಿಂದ?

೨ನೆ ಸಖಿ:— ವಸಂತ ಮಾಧವನ ಒಡನಾಟದಿಂದ.

೧ನೆ ಸಖಿ:— ಹಾಗಿದ್ದರೆ ನಮ್ಮ ದೇವಿಯು?

೨ನೆ ಸಖಿ:— ಧನ್ಯೆಯಲ್ಲ.

ಮಂಡೋದರಿ:— ಸಾಕು ಒಂದು ಮಾತೆತ್ತಿದರೆ ಹತ್ತಿಪ್ಪತ್ತು ಹರಟುತ್ತಿರುವಿರಲ್ಲಾ? ಬಾಯ್ಮುಚ್ಚಿರಿ. ಅದೋ ಅಲ್ಲಿ ನೋಡಿರಿ. ಆ ಮಲ್ಲಿಕಾಲತೆಯು ಎಷ್ಟೊಂದು ವೈಭವವನ್ನು ಹೊಂದಿ ರಾರಾಜಿಸುತ್ತಿರುವುದು? ನೋಡಿದಿರೆ?

೨ನೆ ಸಖಿ:— ಅಹುದು ನಿಜವಾಗಿಯೂ ಅಹುದು. ಆ ಮಾವಿನ ಮರವನ್ನು ಆಶ್ರಯಿಸಿ, ಅದಕ್ಕೆ ಸುತ್ತಲೂ ಹಬ್ಬಿಕೊಂಡು. ಆ ಮೇಲೆ ಅದರ ಮೇಲೆಯೇ ದಬ್ಬಾಳಿಕೆಯನ್ನು ನಡೆಸುತ್ತಿರುವುದು ಆ ಲತೆಯು. ಏನು ಕೃತಘ್ನತೆ? ಆ ವೃಕ್ಷಕ್ಕೆ ಉಸುರು ಕಟ್ಟಿದಂತೆಯೇ ಆಗಿರುವುದು, ಪಾಪ!

೧ನೆ ಸಖಿ:— ಈ ಲತೆಗಳ ಸ್ವಭಾವವೇ ಹಾಗೆ. ಆಶ್ರಯದಾತನನ್ನು ಕಂಡಾಗ, ಅವನ ಕಡೆಗೆ ಬಾಗಿಕೊಂಡು ಹೋಗಿ, ದೀನಾವಸ್ಥೆಯಿಂದ ಮೇಲ್ಮೊಗವಾಗಿ ಅವನನ್ನೊಮ್ಮೆ ನೋಡಿ, ಮೆಲ್ಲಮೆಲ್ಲನೆ ಆಶ್ರಯವನ್ನು ಪಡೆದು, ಕಡೆಗೆ ಆತನ ಸರ್ವಾಂಗ ಹಬ್ಬಿ, ಕಟ್ಟಕಡೆಗೆ ಅವನನ್ನು ಗೋಳಾಡಿಸುತ್ತಿರುವುದೇ ಇವುಗಳ ಹುಟ್ಟುಗುಣ.

ಮಂಡೋದರಿ:— ನಿಜವು. ಏನು ಅನ್ಯಾಯವಿದು? ಪಾಪ. ಆ ಮರಕ್ಕೆ ಎಷ್ಟು ಕಷ್ಟವಾಗಿದೆಯೋ ಈ ಲತಾ ಬಂಧದಿಂದ!

೨ನೆ ಸಖಿ:— ನೋಡಿದೆಯಾ? ನಮ್ಮ ದೇವಿಯ ಮನಸ್ಸು ಎಷ್ಟು ಕರಗಿತು.

೧ನೆ ಸಖಿ:— ಹಾಂ! ಈಗ ಹೀಗಾದುದರಲ್ಲೇನು ಫಲವಿದೆ? ಮುಂದೆಯೂ ಈ ಭಾವನೆ ಉಳಿದರೆ ಮಾತ್ರ - - - -

ಮಂಡೋದರಿ:— ನೀವು ಈ ಹಾಳು ಹರಟೆಯನ್ನು ನಿಲ್ಲಿಸುವಿರೋ ಇಲ್ಲವೋ? ಏನೇನೋ ವ್ಯಂಗ್ಯ ಕವನವನ್ನು ಹೆಣೆಯುತ್ತಿರುವಿರಲ್ಲಾ ನೀವು? ನನಗೇನೂ ಅರ್ಥವಾಗುವುದಿಲ್ಲವೆಂದೆಣಿಸಿದಿರೇ ಏನು?

೨ನೆ ಸಖಿ:— ಛೆ ಛೆ! ಹಾಗಾದೀತೇ ದೇವಿ? ನಿನ್ನಷ್ಟು ಅರ್ಥ ನಮಗೆಲ್ಲಿಂದ ಆಗುವುದು? ಇರಲಿ, ನಾವಿನ್ನು ಹಿಂತಿರುಗೋಣವೆ?

ಮಂಡೋದರಿ:— ಸಖಿಯರೇ ನನಗೇಕೋ ಈ ಪ್ರದೇಶವನ್ನು ಬಿಟ್ಟು ಹೋಗಲು ಮನಸೇ ಬರಲೊಲ್ಲದು.

ಪದ್ಯ ೬.

೧ನೆ **ಸಖಿ:**— ಸರಿ ಒಳ್ಳೆ ಯೋಚನೆ. ಪರರ ಪ್ರದೇಶವನ್ನು ಆಕ್ರಮಿಸಿ ಇಷ್ಟು ಸುಖ ಅನುಭವಿಸಿದ್ದು ಸಾಲದೆ, ಪರ ದ್ರವ್ಯವನ್ನು ಚಿರ ಕಾಲವೂ ಭೋಗಿಸುವ ಬಯಕೆಯೇ ನಿನಗೆ? ಚೆನ್ನಾಯಿತು.

ಮಂಡೋದರಿ:— ಅದೇನು ಈ ಪ್ರದೇಶವು ಯಾರ ಅಧೀನಕ್ಕೊಳಪಟ್ಟಿರುವುದು?

೨ನೆ **ಸಖಿ:**— ದಾನವ ಚಕ್ರವರ್ತಿಯದು! ರಾವಣೇಶ್ವರನದು!! ಅನಿರೀಕ್ಷಿತವಾಗಿ ಎಲ್ಲಾದರೂ ಆತನು ಇಲ್ಲಿಗೀಗ ಬಂದರೆ,—ನಿನ್ನನ್ನು ನೋಡಿದರೆ - - - -

ಮಂಡೋದರಿ:— ಏನು ಅವನೇನು ಮಾಡುವನು?

೧ನೆ **ಸಖಿ:**— ಮಾಡುವುದೇನು? ಪಾಣಿಗ್ರಹಣವನ್ನು.

ಮಂಡೋದರಿ:— ಯಾರ ಪಾಣಿಗ್ರಹಣವನ್ನು?

೨ನೆ **ಸಖಿ:**— ಅಸುರಾಧಿಪನು ಮತ್ತಾರ ಕೈ ಹಿಡಿಯುವನು? ಅಸುರ ಪತಿ ಮಯ ಪುತ್ರಿಯ ಕರಗ್ರಹಣವನ್ನೇ ಮಾಡಿಕೊಳ್ಳುವನು.

ಮಂಡೋದರಿ:— ಸಾಕು ಸುಮ್ಮನಿರಿ. ಎಷ್ಟು ಅಧಿಕ ಪ್ರಸಂಗ?

೧ನೆ **ಸಖಿ:**— ಪ್ರಸಂಗದಲ್ಲಿ ಅಧಿಕವೂ ಇಲ್ಲ, ಕಡಿಮೆಯೂ ಇಲ್ಲ. ನಾವೇನೋ ಸುಮ್ಮನಿರುವೆವು. ಆದರೆ ಆ ಲಂಕೇಶ್ವರನು ಸುಮ್ಮನಿರಬೇಕಲ್ಲ!

ಮಂಡೋದರಿ:— ಅದಿರಲಿ. (ಸಮೀಪಕ್ಕೆ ಬಂದು, ಅತಿ ಸ್ನೇಹದಿಂದ) ಗೆಳತಿಯರೇ, ನೀವು ನನ್ನೊಡನೆ ನಿಜವನ್ನು ಹೇಳುವಿರೆ?

೨ನೆ **ಸಖಿ:**— ನಾವೇಕೆ ಸುಳ್ಳಾಡುವೆವು?

ಮಂಡೋದರಿ:— ನೀವು ಆತನನ್ನು ಎಂದಾದರೂ ಕಂಡಿರುವಿರೆ?

೧ನೆ **ಸಖಿ:**— ಒಂದು ಸಲವೆ? ಹತ್ತು ಸಲವೆ?

ಮಂಡೋದರಿ:— (ನಾಚುತ್ತ.) ಹೇಗಿರುವನೆ?

೨ನೆ ಸಖಿ:– ಅದೇಕೆ ಕೇಳುವೆ? ಮಹಾ ಮಂಗಳ ವಿಗ್ರಹ. ಸೃಷ್ಟಿ ಕರ್ತನ ನೂತನ ಸೃಷ್ಟಿ.

೧ನೆ ಸಖಿ:– ಇಷ್ಟೇ ಅಲ್ಲ. ಆ ಮೂಗು, ಆ ಕಣ್ಣುಗಳು, ಆ ಪಲ್ಲುಗಳು, ಎಲ್ಲ ನವನವೀನ ತರದವುಗಳು.

೨ನೆ ಸಖಿ:– ನಡೆ, ನುಡಿ ಎಲ್ಲಾ ವಿಚಿತ್ರವೇ. ಮೈಯ ಕಾಂತಿ ಯೋ? ಕಣ್ಣುಗಳನ್ನು ಕುಕ್ಕುವಂಥಾದ್ದೇ ದೇವಿ.

೧ನೆ ಸಖಿ:– ಹೆಚ್ಚೇಕೆ? ಇವನಂತಹನು ಜಗತ್ತಿನಲ್ಲಿ ಇವನೊಬ್ಬನೇ.

ಮಂಡೋದರಿ:– (ತೃಪ್ತಿಯಿಂದ) ಆಹಾ! ನಿಜವೇ!!

(ತೆರೆಯಲ್ಲಿ– ಶಂಭೋ ! ಮಹಾದೇವ !!)

೨ನೆ ಸಖಿ:– ಅದೋ ಬಂದೇ ಬಿಟ್ಟನು. ದೇವೀ ನಡೆ. ಅಲ್ಲಿ ಕಾಣುತ್ತಿರುವ ಹೊಯಿಗೆಯ ದಿನ್ನೆಯ ಹಿಂದೆ ಅಡಗಿಕೋ! ನಾವಿಲ್ಲೇ ಮರ ಗಳೆಡೆಯಲ್ಲಿ ಮರೆಯಾಗುವೆವು.

ಮಂಡೋದರಿ:–ಹಾಗೆಯೇ ಆಗಲಿ. (ಎಲ್ಲರೂ ಮರೆಯಾಗುವರು.)

ರಾವಣ·– (ಹಾಡುತ್ತಾ ಪ್ರವೇಶಿಸುವನು.)

ಪದ್ಯ ೭.

ಶಂಕರಾ! ಸರ್ವಸುಖಂಕರಾ! ನಿನ್ನ ಕಿಂಕರನಾದ ಈ ಲಂಕೇಶ್ವರ ನನ್ನು ಅನುಗ್ರಹಿಸಿ ಉದ್ಧರಿಸು. (ತೆರೆಯಲ್ಲಿ ನಾರದನ ಹಾಡಿನ ಧ್ವನಿ ಕೇಳಿ ಸುವುದು.) ಭಲೇ ನಾರದರ ಆಗಮನವಾಗುವಂತಿದೆ. ಒಳ್ಳೇ ಶಕುನವಾ ದಂತಾಯಿತು. ಇಲ್ಲೇ ಸ್ವಲ್ಪ ನಿಂತು ಬಿಡೋಣ. (ಇಷ್ಟರಲ್ಲಿ ನಾರದನು ಹಾಡುತ್ತಾ ಪ್ರವೇಶಿಸುವನು.)

ಪದ್ಯ ೮.

ರಾವಣ:– ದೇವರ್ಷೀ-ನಮಸ್ಕರಿಸುವೆನು.

ನಾರದ:– ಓಹೋ ಇದಾರು ರಾವಣೇಶ್ವರನೊ? ಸಂತೋಷ! ಇದೇ ನಯ್ಯಾ ನಮ್ಮ ಸಾಲಿಗೆ ನೀನೂ ಸೇರಿದಂತಿದೆಯಲ್ಲಾ?

ರಾವಣ:– ಅಂದರೆ?

ನಾರದ:– ಅಂದರೇ–ದೇಶ, ಕೋಶ, ಸೈನ್ಯ, ಅಸ್ತ್ರ ಇವುಗಳನ್ನೆಲ್ಲ ತ್ಯಜಿಸಿರುವೆ. ಹಿಂದಿನ ಆ ವೇಷ, ಆವೇಶಗಳನ್ನೆಲ್ಲಾ ಬಿಟ್ಟು, ಮುನಿ ವೇಷ

ವನ್ನು ಕಟ್ಟಿಕೊಂಡಿರುವೆ. ರಾವಣಾ! ಜೈತ್ರ ಯಾತ್ರೆಯನ್ನು ಬಿಟ್ಟು ತೀರ್ಥ ಯಾತ್ರೆಗೆ ಹೊರಟವರಂತೆ ಇರುವೆಯಲ್ಲಾ? ಇದೇನು ಸ್ವರ್ಗವನ್ನು ಏರುವ ವಿಚಾರವನ್ನು ಇಷ್ಟರಲ್ಲೇ ಬಿಟ್ಟು ಬಿಟ್ಟೆಯಾ?

ರಾವಣ:– ಪ್ರಕೃತಕ್ಕೆ ಅದನ್ನು ನಿಲ್ಲಿಸಿರುವೆನು.

ನಾರದ: ಅದೇತಕ್ಕೆ?

ರಾವಣ:– ಪರಶಿವನ ಆತ್ಮಲಿಂಗವನ್ನು ಸಾಧಿಸಲಿಕ್ಕೆ.

ನಾರದ:– (ಆಶ್ಚರ್ಯದಿಂದ) ಹಾಂ! ಆತ್ಮಲಿಂಗ?

ರಾವಣ:– ಅಹುದು. ನನ್ನ ಜನನಿಯು ನಿತ್ಯ ಪೂಜೆಗಾಗಿ ಆತ್ಮ ಲಿಂಗ.

ನಾರದ:– ಓಹೋ ಅದಕ್ಕಾಗಿ ಸ್ವರ್ಗದಾಸೆಯನ್ನು ಬಿಟ್ಟು ಕೈಲಾಸದ ಕಡೆಗೆ ಹೊರಟಿರುವೆಯೋ. ಸರಿ.

ರಾವಣ:– ಮಹರ್ಷಿಯೇ ಆಶೀರ್ವದಿಸಬೇಕು.

ನಾರದ:– ಕಲ್ಯಾಣಮಸ್ತು. (ರಾವಣನು ಹೋಗುವನು.)

ನಾರಾಯಣಾ! ಇವನಿಗೆ ಬೇಕಂತೆ ಶಿವನ ಆತ್ಮಲಿಂಗ! ಇವನ ದುರಾಗ್ರಹವು ಹಾಳಾಗ! ಇಂಥವರಿಗೆ ಲೋಕದಲ್ಲಿ ಏನಾದರೊಂದು ಗೊಂದಲವನ್ನುಂಟು ಮಾಡಿಕೊಂಡೇ ಇರಬೇಕು. ಇಲ್ಲವಾದರೆ ಇವರಿಗೆ ಶಾಂತಿಯೇ ಇಲ್ಲ. ಸದ್ಯಕ್ಕೆ ದೇವಾಸುರ ಯುದ್ಧವು ತಪ್ಪಿದರೂ, ಅದಕ್ಕಿಂತ ದೊಡ್ಡದೊಂದು ಗಂಡಾಂತರವು ಬೇಗನೆ ಬರಲಿಕ್ಕಿದೆ. ಅಂತೂ ಈ ಅತ್ಯಾಗ್ರಹಿಗಳ ಶಕ್ತಿ ಭಕ್ತಿಗಳೆರಡೂ ಜನರನ್ನು ಗೋಳಾಡಿಸಲಿಕ್ಕಾಗಿಯೇ ಇರುವುದು. ಹೇಗೂ ಉಪಾಯಾಂತರದಿಂದ ಈ ಅಪಾಯವನ್ನು ತಪ್ಪಿಸಲೇ ಬೇಕು. ಇನ್ನು ಉಪೇಕ್ಷಿಸಬಾರದು. ಏನಾದರೊಂದು ಸಂಧಿಯನ್ನು ಸಾಧಿಸೋಣ. (ಇಷ್ಟರಲ್ಲಿ ಮಂಡೋದರಿಯು ಪ್ರಕಟಳಾಗಿ.)

ಮಂಡೋದರಿ:– ಪೂಜ್ಯರೇ ಅಭಿವಾದನವು.

ನಾರದ:– ಯಾರು? ಮಂಡೋದರೀ! ಇದೇನಮ್ಮಾ ಪಾತಾಳದಿಂದ ಇಷ್ಟು ದೂರ ಬಂದಿರುವೆ?

ಮಂಡೋದರಿ:– ಹೂಂ! ಹೀಗೇ ನೋಡಿಕೊಂಡು ಹೋಗೋಣವೆಂದು ಬಂದೆ.

ನಾರದ:– ಹುಂ. (ವ್ಯಂಗ್ಯವಾಗಿ.) ನೋಡಿದೆಯಾ? ಹೇಗೆ?

[ಸಖಿಯರೂ ಎದುರು ಬರುವರು.]

ಸಖಿಯರು:– ಮುನೀಂದ್ರಾ ವಂದಿಸುವೆವು.

ನಾರದ:– ಒಹೋಹೋ! ಎಲ್ಲರೂ ಬಂದಿರುವಿರಿ, ನೋಡಿ, ಕೊಂಡು ಹೋಗಲು.

ಮಂಡೋದರಿ:– ದೇವರ್ಷೀ, ಬಂದು ಬಹಳ ಹೊತ್ತಾಯಿತು. ಹೋಗುವೆವು. ಅಪ್ಪಣೆಯಾಗಲಿ.

ನಾರದ:– (ನಕ್ಕು.) ಈಗ ತಾನೇ ಪಾತಾಳ ಲೋಕದ ನೆನಪಾಯಿತೆಂದು ತೋರುತ್ತಿದೆ. ಆಗಲಿ. ಬಹಳ ಸಂತೋಷ. ಮನೋರಥ ಫಲ ಪ್ರಾಪ್ತಿರಸ್ತು. ಹೋಗಿರಿ. (ಹೋಗುವರು.) ಹುಂ. ಇನ್ನು ನಾನೂ ತೆರಳುವೆನು. (ಆದಿಯ ಹಾಡನ್ನೆ ಹಾಡುತ್ತಾ ಹೋಗುವನು.)

ಎರಡನೇ ದೃಶ್ಯ.

ಪಾರ್ವತೀ ದೇವಿಯ ಅಂತಃಪುರ.

[ಪಾರ್ವತಿಯು ತನ್ನ ಸಖಿಯರೊಂದಿಗೆ ಪಗಡೆಯಾಡುತಿದ್ದವಳು, ಅವರನ್ನು ತಾನು ಸೋಲಿಸಿದೆನೆಂಬ ಭಾವದಿಂದ.]

ಪಾರ್ವತಿ:– ಸಖಿಯರೇ! ಇನ್ನೂ ನಿಮ್ಮ ಹಟವನ್ನು ಬಿಡುವುದಿಲ್ಲವೆ? ಆಗಲಿ. ಇನ್ನೊಮ್ಮೆ ನೋಡೋಣ. ಆಗ ತಿಳಿಯುವುದು ಯಾರು ಸೋಲುವರೆಂದು.

೧ನೆ ಸಖಿ:– ಹೌದು. ನೋಡೋಣ.

೨ನೆ ಸಖಿ:– ಯಾತಕ್ಕೆ? ತಿಳಿದೇ ಇದೆ. ನಾವೇ ಸೋಲುವೆವು. ದೊಡ್ಡವರು ಯಾವಾಗಲೂ ಸೋಲುವುದೆಂತಲೇ ಇಲ್ಲ.

ಪಾರ್ವತಿ:– ಸಖೀ! ಅದು ತಾನಾಗಿಯೇ ತಿಳಿಯುವುದಷ್ಟೆ ಆಡಿದರೆ? ಸುಮ್ಮನೆ ನಂಜಿನ ನುಡಿಯಿಂದೇನು ಫಲ? ಹುಂ. ಆರಂಭಿಸಿರಿ. (ಆಟಕ್ಕೆ ಪ್ರಾರಂಭವಾಗಿ–ಅದು ಭರದಿಂದ ಸಾಗಿ–ಅದರಲ್ಲಿ ಪಾರ್ವತಿಯು ತನ್ಮಯಳಾಗುವಳು.)

ನಾರದ– (ಪ್ರವೇಶಿಸಿ.) ಜಯ ಜಯ ಜಗಜ್ಜನನೀ! (ಪಾರ್ವತಿ ಸುಮ್ಮನಿರುವಳು.) ನಾರಾಯಣಾ! ಈ ಹಾಳು ಪಗಡೆಯಾಟದಲ್ಲಿ ಮುಳು

ಗಿದ ಪಾರ್ವತೀ ದೇವಿಗೆ ನನ್ನ ಬಿರೋಣವೂ, ನಮಸ್ಕಾರವೂ ಕಣ್ಣಿಗೆ ಬಿದ್ದ ಹಾಗೇ ತೋರುವುದಿಲ್ಲವಲ್ಲಾ! (ಪ್ರಕಾಶ) ತಾಯಿಾ! ಏನಿದು ವಿಪರೀತವು? (ಸಖಿಯರು ತೆರಳುವರು.) (ಪಾರ್ವತಿಯು ನಾರದನನ್ನು ನೋಡಿ ಆಗ ಕಂಡವಳಂತೆ.)

ಪಾರ್ವತಿ:– ಓಹೋ ನೀನೋ? ನಾರದಾ! ಇದು ಪಗಡೆಯಾಟ.

ನಾರದ:– ಅಹುದು. ನಿನಗೆ ಪಗಡೆಯಾಟ. ನಿನ್ನ ಮಕ್ಕಳಿಗೆ ಗೋಳಾಟ.

ಪಾರ್ವತಿ:– ಅದೇಕೆ ಹಾಗೆ ಹೇಳುವೆ?

ನಾರದ:– ಮತ್ತೇನೆನ್ನಲಿ ತಾಯೇ? ತನ್ನ ಮಕ್ಕಳ ನೆನಪೇ ಜನನಿಗಿಲ್ಲದಾಗಿದೆ.

ಪಾರ್ವತಿ:– ನಾರದಾ! ನಿನ್ನ ಮಾತಿನ ಅರ್ಥವೇ ನನಗಾಗುವುದಿಲ್ಲವಲ್ಲ!

ನಾರದ:– ಅರ್ಥವೆಲ್ಲಿಂದಾಗಬೇಕು? ಎಲ್ಲವೂ ಅನರ್ಥವೇ.

ಪಾರ್ವತಿ:– ಅದೇತರಿಂದ?

ನಾರದ:– ಮತ್ತೇತರಿಂದ? ಲೋಕ ಜನನೀಜನಕ ದಂಪತಿಗಳಿಂದ. ನಿಮ್ಮಿಂದ.

ಪಾರ್ವತಿ:– (ಚಕಿತಳಾಗಿ.) ನಮ್ಮಿಂದ?

ನಾರದ:– ಅಹುದು ನಿಮ್ಮಿಂದಲೇ. ನಿಮ್ಮ ಭಕ್ತ ವತ್ಸಲತೆಯೇ ಇಷ್ಟೆಲ್ಲ ಅನರ್ಥಕ್ಕೆ ಕಾರಣ.

ಪಾರ್ವತಿ:– ಭಕ್ತಾಭೀಷ್ಟವನ್ನು ಸಲಿಸುವುದು ನಮ್ಮ ವಿಧಿಯಷ್ಟೆ ನಾರದಾ?

ನಾರದ:– ಆ ದುರ್ವಿಧಿಯಿಂದಲೇ ಲೋಕವು ಹಾಳಾಯಿತು. ತಾಯಿಾ! ವರಗಳನ್ನು ಕರುಣಿಸುವಾಗ ಯುಕ್ತಾಯುಕ್ತತೆಗಳನ್ನು ವಿಮರ್ಶಿಸಿ ಪಾತ್ರಾಪಾತ್ರಗಳ ತುಲನೆಯನ್ನು ಮಾಡಬೇಕೋ ಬೇಡವೋ? ಅದೇನಿಲ್ಲ. ಭಕ್ತನ ಸೋಗಿನಿಂದ ವ್ಯಕ್ತಿಯೊಂದು ಬಂದರೆ ಸರಿ. ಏನನ್ನು ಕೇಳಲಿ! 'ಇಲ್ಲ' ಎನ್ನುವ ರೂಢಿಯನ್ನೇ ಇಟ್ಟುಕೊಂಡಿಲ್ಲವಲ್ಲಾ ಸತಿಪತಿಯರು!

ಪಾರ್ವತಿ:– ಅದಿರಲಿ ನಾರದಾ! ಈಗ ಬಂದಿರುವ ಪ್ರಸಂಗವಾದರೂ ಏನು?

ನಾರದ:– ಪ್ರಸಂಗವೇ? ಅಧಿಕಪ್ರಸಂಗ! ಕೈಲಾಸವೇ ಹೋಗುವ ಅಧಿಕತರವಾದ ಪ್ರಸಂಗವೇ ಬಂದಿದೆ.

ಪಾರ್ವತಿ:– ಹಾಂ! ಕೈಲಾಸ?

ನಾರದ:– ಅಲ್ಲದೆ ಮತ್ತೇನು? ಆತ್ಮಲಿಂಗವಿದ್ದಲ್ಲೇ ಕೈಲಾಸ.

ಪಾರ್ವತಿ:– ಆತ್ಮಲಿಂಗವು ಹೋಗುವುದೇ? ನಾರದಾ! ಎಲ್ಲಿಗೆ?

ನಾರದ:– ನೆಟ್ಟಗೆ ಭೂಲೋಕಕ್ಕೆ.

ಪಾರ್ವತಿ:– ಯಾರು ಅಪಹರಿಸಿಕೊಂಡು ಹೋಗುವರು?

ನಾರದ:– ಬೇರೆ ಯಾರು? ಇರುವನಲ್ಲಾ ನಿಮ್ಮ ಆ ಮಹಾ ಭಕ್ತ ಶಿರೋಮಣಿ? ಲಂಕಾಧಿಪ? ಆತನೆ.

ಪಾರ್ವತಿ:– ನಾರದಾ! ಅವನಿಗೇಕಾಯಿತು ಈ ದುರಾಗ್ರಹ?

ನಾರದ:– ಯಾಕಾಗಬಾರದು ಅದನ್ನು ಕೈಗೂಡಿಸುವವರಿದ್ದರೆ? "ಆತ್ಮಲಿಂಗ ಬೇಕಪ್ಪಾ ಮಗನೆ ನನಗೆ". ಎಂದಳಂತೆ ಆತನ ತಾಯಿ. "ಅದು ಮಾತ್ರ ಸಾಕೆ? ಇನ್ನೇನಾದರೂ ಬೇಕೇ?" ಎಂದವನೇ ಹೊರಟನಂತೆ ಈ ಮಹಾ ಪುತ್ರ. ಇನ್ನೇನು? ಆತನ ದಾರುಣವಾದ ತಪಸ್ಸಂತೂ ನಡೆಯುವುದು. ಸ್ವಲ್ಪ ಕಾಲವಲ್ಲಿಯೇ ನಿಮ್ಮ ಭಕ್ತವತ್ಸಲತೆಯು ಪರೀಕ್ಷಾ ಕಾಲವೂ ಬರುವುದು.

ಪಾರ್ವತಿ:– (ಗಾಬರಿಯಿಂದ.) ಇದಕ್ಕೇನು ಮಾಡಲಿ ನಾರದಾ?

ನಾರದ:– (ಕೊಂಕಿನಿಂದ.) ಮಾಡುವುದೇನು? ಕೊಟ್ಟು ಬಿಡಿರಿ. ಪಾಪ ಭಕ್ತನಲ್ಲವೆ?

ಪಾರ್ವತಿ:– ಅಯ್ಯೋ! ಆ ಮೇಲೆ?

ನಾರದ:– ಆ ಮೇಲೇನು ಲಂಕೇಶ್ವರನೇ ಲೋಕೇಶ್ವರನಾಗುವನು. ಅಷ್ಟೆ.

ಪಾರ್ವತಿ:– ಶಿವ ಶಿವ! ಹಾಗಾದರೆ?

ನಾರದ:- ಲೋಕದಲ್ಲೆಲ್ಲಾ ಉತ್ಪಾತವುಂಟಾಗುವುದು. ಮತ್ತೇನು? ಶಿವನೂ ಇಲ್ಲ. ನೀನೂ ಇಲ್ಲ. ಆ ಮೇಲೆ ಈ ಬೆಟ್ಟ ಹತ್ತುವ ಕೆಲಸ ನನಗೂ ಇಲ್ಲ.

ಪಾರ್ವತಿ: ನಾರದಾ! ಸತ್ಯವು. ಇದಕ್ಕೇನು ಉಪಾಯ ಮಾಡೋಣ.

ನಾರದ:- ದೇವೀ ಅದನ್ನು ನಾನೆಂತು ನಿರ್ಣೈಸಲಿ? ನೀನು ಸರ್ವಜ್ಞನ ರಾಣಿ! ಸರ್ವ ತಂತ್ರ ಸ್ವತಂತ್ರಿಣಿ! ಏನಾದರೊಂದು ಸಂಧಿಯನ್ನು ನೀನೇ ಸಾಧಿಸಿ, ಲೋಕ ಕ್ಷೇಮವನ್ನುಂಟುಮಾಡು ನಾನು ತಿಳಿದುದನ್ನು ಅರಿಕೆ ಮಾಡಿಕೊಂಡಿರುವೆನು. ನಾನಿನ್ನು ಹೋಗಿ ಬರುವೆನು. ನಮಸ್ತೇ ಜನನೀ! (ಹೋಗುವನು.)

ಪಾರ್ವತಿ:- ಅಕಟಾ! ಈ ಅನರ್ಥವನ್ನು ಹೇಗೆ ತಪ್ಪಿಸಲಿ? ಪ್ರಾಣೇಶ್ವರನಲ್ಲಿ ಹೇಳಿದರೆ, ಕರುಣಾ ಪೂರ್ಣನಾದ ಆತನು ಭಕ್ತನು ಕೋರಿದ್ದನ್ನು ಕೊಡದಿರುವನೆ? ಕೊಡದಿರಬಹುದೆ? ಸಾಧ್ಯವಲ್ಲವದು. ಹಾಗಾದರೆ ಇನ್ನೇನು ದಾರಿ. ಹುಂ. ಸರಿ ಲೀಲಾನಾಟಕ ಸೂತ್ರಧಾರಿಯಾದ ಶ್ರೀ ಹರಿಯೇ ಇದಕ್ಕೆ ಗುರಿಯನ್ನು ಕಲ್ಪಿಸಬೇಕಷ್ಟೆ. ಅವನನ್ನೇ ಮರೆಹೊಗುವೆನು.—ಹೇ! ದೀನಬಂಧೋ! ದಯಾ ಸಿಂಧೋ! ಕಾಪಾಡು. – (ಧ್ಯಾನಾಸಕ್ತಳಾಗುವಳು. ಸ್ವಲ್ಪ ಸಮಯದಲ್ಲಿ — ಅಶರೀರವಾಣಿಯಾಗುವುದು.

॥ **ಕಂದ** ॥

ಮರುಕವ ಬಿಡುಬಿಡು ಮನದೊಳು।
ಗಿರಿವರ ಸುಕುಮಾರಿ ಹೇ ಸಹೋದರಿ ನೀ ಕೇಳ್ ॥
ದುರುಳನ ಮಾಯಾ ಸೂತ್ರದಿ ।
ನೆರೆ ಬಗಿಯುತ ಲೋಕ ಸೌಖ್ಯವೀವೆಂ, ಸತ್ಯಂ ॥ ೧ ॥.)

ಪಾರ್ವತಿ:- (ಕಣ್ತೆರೆದು.) ಅದೋ! ನನ್ನ ಪ್ರಾರ್ಥನೆಯನ್ನು ಶ್ರೀ ಹರಿಯು ಮನ್ನಿಸಿದನು. ಇನ್ನೇಕೆ ಮರುಕ? ಮುಂದೇನಾಗುವುದೋ ನೋಡೋಣ.

[ತೆರೆ ಬೀಳುವುದು]

ಮೂರನೆಯ ದೃಶ್ಯ

ತಪೋವನ

[ರಾವಣನು ಯೋಗಾಸನದಲ್ಲಿ ಕುಳಿತು ಧ್ಯಾನಿಸುತ್ತಿರುವನು.]

ಪದ್ಯ ೯

(ಕಣ್ಮುಚ್ಚಿ ಧ್ಯಾನ ಮಗ್ನನಾಗುವನು ತೆರೆಯಲ್ಲಿ:—"ಮಾಯಾದೇವಿಯೇ ಸಾವಕಾಶವೇಕೆ? ಹುಂ ರಾವಣನನ್ನು ಆವರಿಸಿಬಿಡು." ಎಂದು ಕೇಳಿಸುವುದು. ಸ್ವಲ್ಪ ಹೊತ್ತಿನಲ್ಲಿ ಪಾರ್ವತೀ ಸಹಿತ ಶಿವನು ಪ್ರತ್ಯಕ್ಷನಾಗಿ)

ಶಂಕರ:—ರಾವಣೇಶ್ವರಾ! ನಿನ್ನ ತಪಃಶಕ್ತಿಗೆ ಮೆಚ್ಚಿದೆನು. ಈ ಘೋರತಪಸ್ಸನ್ನು ಬಿಟ್ಟೇಳು. ನಿನ್ನ ವಾಂಛಿತವೇನೋ ಅದನ್ನು ಹೇಳು. ಏನೇ ಆದರೂ ಅದನ್ನು ಕೊಡಬಲ್ಲೆನು.

ರಾವಣ:—(ಕಣ್ತೆರೆದು) ಶಂಭೋ ಶಂಕರ ಮಹಾದೇವ! (ಪಾರ್ವತಿಯನ್ನು ನೋಡಿ, ಸ್ವಗತ) ಆಹಾ! ಏನಿದು ಲೋಕ ಮೋಹಕರೂಪ? ಈಕೆಯನ್ನು ನೋಡಿದರೆ, ಜಗತ್ತಿನಲ್ಲಿ ಈಕೆಯ ವಿನಹ ಬೇರೇನೂ ಬೇಡವೆನಿಸುತ್ತಿರುವುದಲ್ಲಾ! ಈ ಜಟಾಧಾರಿಗೆ ಈ ಸುಂದರಿಯನ್ನು ಬಿಗಿದ ವಿಧಿಗೆ ಹುಚ್ಚು ಹಿಡಿದಿರಬಹುದೇ?

ಶಂಕರ:—ರಾವಣಾ! ಏಕೆ ಸುಮ್ಮನಿರುವೆ? ಹುಂ ಹೇಳು. ಅನುಗ್ರಹಿಸುವೆನು.

ರಾವಣ:—ದೇವಾ! ಜಗತ್ತಿನಲ್ಲಿ ನೀನಲ್ಲವೆ ಧನ್ಯನು! ಮಾನ್ಯನು? ಭಕ್ತಾಭೀಷ್ಟ ಪ್ರದಾಯಕನೆಂದು ನಿನ್ನನ್ನು ಲೋಕವೇ ಹೊಗಳುತ್ತಿದೆಯಲ್ಲವೆ? ಶಂಕರಾ! ನನ್ನಿಚ್ಛೆಯನ್ನು ಹೇಳಲೆ?

ಶಂಕರ:—ಅನುಮಾನವೇಕೆ?

ರಾವಣ:—ದೇವಾ! ನೀನು ಸ್ಮಶಾನವಾಸಿಯು, ನಿರಾಕಾರನು! ನಿರಂಜನನು! ಕಾಮನನ್ನು ಸುಟ್ಟ ನಿನಗೆ ಈ ಕಾಮಿನಿಯಿಂದೇನು ಪ್ರಯೋಜನ? ನನ್ನಂಥಹ ರಾಜಾಧಿರಾಜನಿಗೆ–ಮಹಾ ವೈಭವಶಾಲಿಗೆ ಈ ಮೋಹನಾಂಗಿಯು ಪಟ್ಟದರಸಿಯಾಗಲು ತಕ್ಕವಳು. ಆದುದರಿಂದ ಮಹದೇವನೇ ಈ ಮಂಗಳಗಾತ್ರೆಯನ್ನು, ಈ ಶೈಲಜಾತೆಯನ್ನು, ನನಗೆ----

ಶಂಕರ:—(ಸಿಟ್ಟಿನಿಂದ) ಅಸಭ್ಯವು! ಅಭದ್ರವು!! ಅಮಂಗಲವು!!! ರಾವಣಾ ಈ ದುರಾಗ್ರಹವು ಬೇಡ. ಇದು ನಿನಗೆ ಕ್ಷೇಮಕರವಲ್ಲ. ಜಗತ್ತಿಗೆ ಆಧಾರ ಸ್ವರೂಪಿಣಿಯಾದ ಈ ಆದಿಶಕ್ತಿಯನ್ನು ಮೋಹಿಸುವುದೆಂದರೇನು? ದಶಕಂಠಾ! ಇದು ಅನುಚಿತವು. ನೀನಾರು? ನಾನಾರು? ಈಕೆ ಯಾರು? ಎಂಬ ವಿವೇಕವಿಲ್ಲದೆ ಮನಸ್ಸೀನುಡಿಯುವುದೆಂದರೇನು? ಏನು ಅವಿಧೇಯತನವಿದು?

ರಾವಣ:—ಶಂಕರಾ! ಇದೇ ಏನು ನೀನು ಅನುಗ್ರಹಿಸುವ ಕ್ರಮವು? ಸ್ವಲ್ಪ ಯೋಚಿಸಿ ನೋಡು. ಈ ತ್ರಿಲೋಕ ಸುಂದರಿಯು ಗಜಚರ್ಮಾಂಬರ ಧಾರಿಯಾದ ನಿನಗೆ ಹೆಂಡತಿಯಾಗ ಬೇಕಾದವಳೆ? ನಾಗವೇಣಿಯಾದೀಕೆಗೆ ಜಟಾಧಾರಿಯಾದ ನೀನು ಪತಿಯಾಗಬಹುದೇ? ಬೂದಿಬಳಿದಿರುವ ನಿನ್ನೀ ಹೊಲಸು ದೇಹವೇ ಈ ನಿರ್ಮಲಾಂಗಿಯ ಪ್ರೇಮಾಲಿಂಗನಕ್ಕೆ? ಅಕಟಾ! ಅಸಭ್ಯವೂ, ಅಭದ್ರವೂ, ಅಮಂಗಲವೂ, ಅನುಚಿತವೂ, ಇದು ದೇವ.

ಶಂಕರ:—ಸಾಕು. ಗೊತ್ತಿದೆ. ಬಾಯ್ಮುಚ್ಚು. ಎಚ್ಚರ ತಪ್ಪಿ ದುಡುಕಿದರೆ ಪರಿಣಾಮವು ನೆಟ್ಟಗಾಗದು.

ರಾವಣ:—ದೇವಾ! ಆಡಿತಪ್ಪದಿರು. ಭಕ್ತವತ್ಸಲನೆಂಬ ಹೆಸರಿಗೆ ಕಲಂಕವನ್ನು ಹಚ್ಚಿಕೊಳ್ಳದಿರು. ಕೊಡುವ ಮನವಿದ್ದರೆ ಈ ಜಗನ್ಮೋಹಿನಿಯನ್ನು ಕೊಡು. ಈಕೆಯನ್ನು ಬಿಟ್ಟರೆ ನಿನ್ನಲ್ಲಿ ನಾನು ಬೇಡತಕ್ಕದ್ದು ಬೇರೇನೂ ಇಲ್ಲ.

ಶಂಕರ:—ಇದೇಕೆ ಈ ಹಟವು ನಿನಗೆ?

ರಾವಣ:—ಹಟವಲ್ಲ. ಇದು ದಿಟ. ಬೇಕಾದುದನ್ನು ಕೊಡುವೆನೆಂದೆಯಲ್ಲ ಮೊದಲೆ? ಮತ್ತೇಕೆ ಬೇಕಿತ್ತು ಈ ಉಪಚಾರ? ಬೇಕಾದುದನ್ನೇ ನಾನೀಗ ಕೇಳಿರುವೆನು. ನೀನೆಂದ ಮಾತನ್ನು ಉಳಿಸಿಕೊಳ್ಳುವೆಯೋ ಈಕೆಯನ್ನು ಕೊಡು. ಇಲ್ಲವೋ ಹೊರಡು, ಒತ್ತಾಯವಿಲ್ಲ.

ಶಂಕರ:—(ಸ್ವಗತ) ಛೆ! ಏನು ಪ್ರಮಾದವಾಯಿತು? ಹುಂ ಆಗಲಿ! (ಪ್ರಕಾಶ) ಪಾರ್ವತೀ! ಇದೋ ಈ ನನ್ನ ಭಕ್ತನೊಂದಿಗೆ ನೀನೀಗಲೇ ಹೋಗತಕ್ಕದು.

ಪಾರ್ವತಿ:—ಎಲ್ಲಿಗೆ?

ರಾವಣ:—ನಾನೆಲ್ಲಿಗೆ ಬರಬೇಕೆನ್ನುವೆನೋ ಅಲ್ಲಿಗೆ.

ಶಂಕರ:—ಗೌರೀ! ವಾದಿಸಿ ಪ್ರಯೋಜನವಿಲ್ಲ. ಈತನನ್ನು ಪರಿಗ್ರಹಿಸು.

ಪಾರ್ವತಿ:—ನಿನ್ನಾಜ್ಞೆಯಂತಾಗಲಿ (ರಾವಣನ ಹಿಂದೆ ನಿಲ್ಲುವಳು.)

ರಾವಣ:—(ತೃಪ್ತಿಯಿಂದ) ದೇವಾದಿ ದೇವಾ!

ಪದ್ಯ ೧೦

ಸಂತೋಷವಾಯಿತು. ಹೋಗಿ ಬರಲೇ? ಅನುಜ್ಞೆಯಾಗಲಿ.

ಶಂಕರ:—ಅಸ್ತು. ಹೋಗಿ ಬಾ. (ಅಂತರ್ಧಾನ ಹೊಂದುವನು.)

ರಾವಣ:—ದೇವೀ! ಭುವನೈಕ ಸುಂದರೀ! ಇನ್ನು ಹೊರಡೋಣವೆ? (ಸ್ವಗತ) ಆಹಾ! ಏನಿವಳ ಸೊಬಗು? ಏನು ಬೆಡಗು? ಈ ಶೃಂಗಾರದ ಗನಿ! ಸೌಭಾಗ್ಯದಕಣಿ! ಲಂಕೆಗೆ ತಲಪುವ ತನಕ ಯಾರ ದೃಷ್ಟಿಗೂ ಬೀಳಕೂಡದು. (ಯೋಚಿಸಿ) ಅದಕ್ಕೆಂದೇ ಹೀಗೆ ಮಾಡೋಣ. (ಪ್ರಕಾಶ) ಲೋಕಮೋಹಿನೀ! ಈ ಉತ್ತರೀಯವನ್ನು ಮೈ ತುಂಬಾ ಹೊದೆದುಕೋ (ಅಂತೆಯೇ ಮಾಡುವಳು.) ಹುಂ! ಇನ್ನು ನನ್ನನ್ನೇ ಅನುಸರಿಸಿ ನಡೆ. (ಹೊರಡುವನು. ಪಾರ್ವತಿ ಹಿಂಬಾಲಿಸುವಳು.)

ಎರಡನೆ ಅಂಕ ಮುಗಿದುದು.

ಮೂರನೆಯ ಅಂಕ

ಮೊದಲನೆಯ ದೃಶ್ಯ

— ಮಾರ್ಗ —

[ನಾರದನು ಹಾಡುತ್ತಾ ಪ್ರವೇಶ]

ಪದ್ಯ ೧೧

ಅಲ್ಲ? ಭಕ್ತಾಭೀಷ್ಟ ಪ್ರದಾಯಕತ್ವವು ಇಲ್ಲಿಗೂ ಮುಟ್ಟಿತೆ? ನಾರಾಯಣ! ಭಕ್ತರೆಲ್ಲ ಇಂಥಹ ದಾರಿಯನ್ನೇ ಹಿಡಿಯುತ್ತ ಬಂದರೆ, ಪರಶಿವನು ಅದೆಷ್ಟು ಮಂದಿ ಸ್ತ್ರೀಯರನ್ನು ವರಿಸಬೇಕಾಗುವುದೋ ಕಾಣೆ. ಪರಮಾತ್ಮನು ಭಕ್ತರನ್ನು ಪರೀಕ್ಷಿಸುವುದಕ್ಕೆ ಬದಲು, ಆತನನ್ನೇ ಭಕ್ತರು ಪರೀಕ್ಷಿಸುವ ಕಾಲವೂ ಬಂತೆ? ಇಂತಹ ಮಹಾಭಕ್ತರು "ಏನನ್ನು ಕೇಳಿದರೂ ಕೊಡುವೆ"

ನೆಂದು ಇರುವ ಈ ಪರಮೇಶ್ವರನು, ನನ್ನಂತೆ ಅಜನ್ಮ ಬ್ರಹ್ಮಚಾರಿಯಾಗಿ ಯಾದರೂ ಇರಬಾರದಿತ್ತೆ? (ಆಲೋಚಿಸಿ) ಆಗಲಿ ಲೋಕಮಾತೆಯಾದ ಪಾರ್ವತಿಯು ಆ ದುಷ್ಟ ರಾವಣನಿಗೆ ಹೇಗೆ ದಕ್ಕುವಳೋ ನೋಡುವೆನು.

(ಹಾಡುತ್ತಾ ಹೋಗುವನು.)

[ತೆರೆ ಏಳುವುದು. ಒಳಗೆ ಅರಣ್ಯ ಮಾರ್ಗದ ತೆರೆ ಇರುವುದು]

ಎರಡನೆಯ ದೃಶ್ಯ

— ಅರಣ್ಯ ಮಾರ್ಗ —

[ರಾವಣನು ಮುಸುಕು ಹಾಕಿಕೊಂಡಿದ್ದ ಪಾರ್ವತಿಯೊಂದಿಗೆ ಪ್ರವೇಶ]

ರಾವಣ:— ಹುಂ! ಸಾಹಸಿಗೆ ಜಗತ್ತಿನಲ್ಲಿ ಸಾಧಿಸಲು ಬಾರದ ಕಾರ್ಯ ವಾವುದೂ ಇಲ್ಲ. ಯಃಕಶ್ಚಿತ್ ದಾನವನು ನಾನೆಲ್ಲಿ? ಮಹಾದೇವನಾದ ಶಂಕರ ನೆಲ್ಲಿ? ಆತನ ರಾಣಿಯಾದ ಈ ಜಗನ್ಮೋಹಿನಿಯೆಲ್ಲಿ? ಹೇಗೆ ಸಾಧಿಸಿಬಿಟ್ಟೆನು ಈಕೆಯನ್ನು? ಇದಲ್ಲವೆ ಸಾಹಸ? ಇದಲ್ಲವೆ ಕೌಶಲ? ಎಂಥಹ ಭಕ್ತನಿಗಾ ದರೂ ಸ್ವಾಮಿಯಲ್ಲಿ ಆತನ ಅರ್ಧಾಂಗವನ್ನು ಕೇಳುವ ಧೈರ್ಯವು ಬಂದೀತೆ? ಭಲೇ ರಾವಣಾ! ನೀನೇ ಭಾಗ್ಯಶಾಲಿಯು. ಈ ಸೌಂದರ್ಯ ಮರೀಚಿಯ ಮುಂದೆ ಶಚಿಯೆಷ್ಟರವಳು? ರತಿಯೆಷ್ಟರವಳು? ಪರಮೇಶ್ವರನ ಸತಿಯನ್ನು ಪಟ್ಟಮಹಿಷಿಯಾಗಿ ಮಾಡಿಕೊಂಡ ಲಂಕೇಶ್ವರನಿಗೆ ಇನ್ನು ಜಗತ್ತಿನಲ್ಲಿ ಸಮಾ ನನಾರು?— ದೇವೀ! ಬಾ, ಬೇಗನೇ ಲಂಕಾಪುರಿಗೆ ಹೋಗಿ ನನ್ನ ಮಾತೆಗೆ, ನಿನ್ನ ಅತ್ತೆಗೆ ಆನಂದವನ್ನುಂಟು ಮಾಡೋಣ. (ಇಷ್ಟರಲ್ಲಿ ತೆರೆಯಲ್ಲಿ 'ನಾರಾ ಯಣ' ಎಂಬ ಸೊಲ್ಲು ಕೇಳಿಸುವುದು.)—(ಸ್ವಗತ) ಅದೋ ಬಂದೇಬಿಟ್ಟನು ಆ ನಾರದನು. ಯಾವಾಗಲೂ ಇಂತಹ ಆನಂದದ ಹೊತ್ತಿನಲ್ಲಿಯೇ ಗಂಟು ಬೀಳುವುದು ಈತನ ಹುಟ್ಟುಗುಣವಾಗಿ ಬಿಟ್ಟಿದೆ. ಈಗ ನಾನು ಈ ಸಂತೋಷ ಸಾಗರದ ತಡಿಯಲ್ಲಿ ಸುತ್ತಾಡುತ್ತಿರುವೆನೆಂದು, ಯಾರು ಓಲೆ ಬರೆದರೋ ಈತನಿಗೆ? ಆಯಿತು. ಹೇಳಿಕಳುಹಿಸಿ ಬಂದಂತೆ ಪುಣ್ಯಾತ್ಮ ಬಂದರೂ ಥಕ್ಕನೇ ಹೊರಟಾದರೂ ಹೋಗಬೇಕಲ್ಲ? ಅದುಬಿಟ್ಟು, ತಲೆತುಂಬಾ ಹರಟೆ, ಎಲ್ಲವನ್ನೂ ತಿಳಕೊಳ್ಳಬೇಕೀ ನಾರದನಿಗೆ. ಇನ್ನು ಈ ಲೋಕಮೋಹಿನಿಯು ಈ ಬಾಲಬ್ರಹ್ಮಚಾರಿಯ ದೃಷ್ಟಿಗೆಬಿದ್ದರೆ ಮತ್ತೇನೆಲ್ಲ ಆಗುವುದೊ? (ಪಾರ್ವತಿ ಯೊಡನೆ) ದೇವೀ! ನೀನೀಗ ಸ್ವಲ್ಪ ಆ ಮರಗಳೆಡೆಯಲ್ಲಿ ಮರೆಯಾಗು. ನಾನಿಲ್ಲೇ ಈ ಶಿಲಾಗ್ರದಲ್ಲಿ ಸ್ವಲ್ಪ ಮಂಡಿಸಿಕೊಳ್ಳುವೆನು. (ಪಾರ್ವತಿ ಮರೆ ಯಾಗುವಳು)— ನಾರದನು ಪ್ರವೇಶಿಸುವನು.

ರಾವಣ:—(ಕುಳಿತಲ್ಲಿಂದಲೇ) ಓಹೋ, ನಾರದರೋ? ನಮಸ್ಕಾರವು.

ನಾರದ:—ಯಾರದು? (ನಗಾಡಿ) ಹ್ಹಹ್ಹ! ಲಂಕೇಶ್ವರನೊ?

ರಾವಣ:—ಅಹುದಯ್ಯಾ ನಾರದರೆ ಹೌದು. ಲಂಕೇಶ್ವರನು! ದಾನವ ಚಕ್ರವರ್ತಿಯು! ಲೋಕೈಕವೀರನು!

ನಾರದ:—ನಿಜವಯ್ಯಾ ನಿಜವು, ಮಹಾಪ್ರಭುವು. (ಪಾರ್ವತಿಯು ಮರೆಯಾದ ಕಡೆಗೆ ನೋಡುವನು.)

ರಾವಣ:—(ನಾರದನಿಗೆ ಅಡ್ಡಬಂದು.) ಏನು? ಆ ಕಡೆ ಯಾರನ್ನು ನೋಡುತ್ತಿರುವಿರಿ?

ನಾರದ:—ಅವರನ್ನೇ, ಅವರೆಲ್ಲಿ?

ರಾವಣ:—ಅವರು! ಯಾರವರು? ಎಲ್ಲಿಯವರು?

ನಾರದ:—ಆ ಅವರೇ. ನಿನ್ನ ಜೊತೆಯಲ್ಲಿದ್ದವರು.

ರಾವಣ:—ಜೊತೆಯಲ್ಲಿದ್ದವರು? ಯಾರಿದ್ದರು ನನ್ನೊಂದಿಗೆ? ಇದೇನು ನಾರದರೇ ವಿಚಿತ್ರವಾಗಿ ನುಡಿಯುತ್ತಿರುವಿರಲ್ಲಾ!

ನಾರದ:—ಜಗತ್ತಿನಲ್ಲಿ ಈಗ ಎಲ್ಲವೂ ವಿಚಿತ್ರವೇ. ನೋಡು, ನೀನು ಮಹಾಪ್ರಭು, ಚಕ್ರವರ್ತಿ! ಹೀಗಿರುವಾಗ ನಿನ್ನೊಂದಿಗೆ ಮಂದಿ ಮಾರ್ಬಲಗಳೆಲ್ಲ ಹಿಂಬಾಲಿಸಿಕೊಂಡು ಬಂದಿರಲೇ ಬೇಕಷ್ಟೆ? ರಾಜನಾದ ನೀನೇನು ಏಕಾಂಗಿಯಾಗಿ ಬರುವೆಯಾ? ಆದುದರಿಂದ ಅವರೆಲ್ಲಿ ಎಂದು ಕೇಳಿದೆನು. ಇದರಲ್ಲಿ ತಪ್ಪೇನಯ್ಯಾ? ಪ್ರಕೃತ ಯಾರೂ ಬಂದಿಲ್ಲವೇನೋ?

ರಾವಣ:—ನಾರದರೇ! ಈಗ್ಗೆ ನಾನೂ ಬರುತ್ತಿರುವುದು ತಪೋವನದಿಂದಲ್ಲವೆ? ಆದುದರಿಂದ ಏಕಾಂಗಿಯಾಗಿ ಬರುತ್ತಿರುವೆನು?

ನಾರದ:—ಓಹೋ! ಮರೆತೇ ಬಿಟ್ಟಿದ್ದೆನು. ಶಿವನ ಆತ್ಮಲಿಂಗ ತರಲೆಂದು, ಅಂದು ಹೋದವನು ನೀನಲ್ಲವೆ? ಸರಿಸರಿ. ಹೇಗೆ ಕಾರ್ಯದಲ್ಲಂತೂ ಜಯಿಸಿರುವೆಯಷ್ಟೆ?

ರಾವಣ:—(ಸ್ವಗತ) ತೊಡಗಿದನಲ್ಲಾ ಹರಟಲಿಕ್ಕೆ! (ಪ್ರಕಾಶ) ಅದಿರಲಿ, ಪ್ರಕೃತ ತಾವೆಲ್ಲಿಂದ ಬರುತ್ತಿರುವಿರಿ?

ನಾರದ:— ಎಲ್ಲಿಂದೆನ್ನಲಿ? ಸದಾ ತಿರುಗಾಡುತ್ತಿರುವುದೇ ರೂಢಿಯಷ್ಟೆ ನನಗೆ? ಸರದಿಯಂತೆ ನನ್ನ ಸುತ್ತು ಇಲ್ಲಿಗೆ ತಲಪಿದಾಗ ಆಯಿತು ನಿನ್ನದರ್ಶನ ಮುಂದಿನ್ನು ಎಲ್ಲಿಗೋ ಹೋಗುತ್ತಿರುವೆನು—ಅದಿರಲಿ, ಈಗೇನು ನೀನು ಗುರಿ ಸಾಧಿಸಿದೆಯೋ ಹೇಗೆ?

ರಾವಣ:— ಒಳ್ಳೆ ಬಿಕ್ಕಟ್ಟಿನ ಪ್ರಸಂಗ ಬಂತಲ್ಲಾ! (ಪ್ರಕಾಶ) ನಾರದರೇ! ಹೇಳಿದ ಹಾಗೆ ಕೈಲಾಸದಲ್ಲೇನೋ ವಿಚಿತ್ರ ಚರಿತ್ರೆಯೊಂದು ನಡೆಯಿತೆಂದು ಕೇಳಿದೆ. ಅದು ನಿಜವಿರಬಹುದೇ?

ನಾರದ:— ವಿಷಯವೇನೆಂದು ಹೇಳದೆ "ನಿಜವೋ ಸುಳ್ಳೋ ಎಂದು ಪ್ರಶ್ನಿಸಿದರೆ ಏನು ಹೇಳಲಯ್ಯಾ ನಾನು? ಏನು ವಿಚಿತ್ರಕಥೆ ನಡೆಯಿತಂತೆ ಕೈಲಾಸದಲ್ಲಿ? ಅದನ್ನು ಹೇಳು.

ರಾವಣ:— ಬೇರೇನೂ ಅಲ್ಲ. ಆ ಪಾರ್ವತಿಗೂ ಶಂಕರನಿಗೂ ಪರಸ್ಪರ ಜಗಳವುಂಟಾಗಿ, ಕೊನೆಗೆ ಪಾರ್ವತಿಯು ಸಿಟ್ಟಿನಿಂದ ಕೈಲಾಸವನ್ನು ಬಿಟ್ಟು ಹೋದಳೆಂದು ಕೇಳಿದೆ. ಈ ವಿಚಾರವೇನಾದರೂ ತಮಗೆ ಗೊತ್ತಿರಬಹುದೇ ಎಂದು ಪ್ರಶ್ನಿಸಿದೆನಷ್ಟೆ.

ನಾರದ:— (ಸ್ವಗತ) ಪುಣ್ಯಾತ್ಮಾ! ಹೇಗೆಲ್ಲಾ ಕವಿತೆ ಹೆಣೆಯುತ್ತಿರುವನು? ಹುಂ ಆಗಲಿ, ನೋಡೋಣ. (ಪ್ರಕಾಶ) ರಾವಣಾ! ನೀನೆಂದುದರಲ್ಲಿ ನಿಜಾಂಶವು ಇಲ್ಲವೆಂದಿಲ್ಲ. ಬಹು ಅಂಶ ಅಬದ್ಧವಾಗಿದೆ.

ರಾವಣ:— ಯಾವುದು ಅಬದ್ಧ?

ನಾರದ:— ಪಾರ್ವತಿ ಪ್ರಕೃತ ಕೈಲಾಸದಲ್ಲಿ ಇಲ್ಲವೆಂಬುದು ಸತ್ಯ. ಮಿಕ್ಕವೆಲ್ಲವೂ ಸತ್ಯವಲ್ಲದೇ ಇದ್ದ ಮತ್ತೊಂದು.

ರಾವಣ:— ಹಾಗಿದ್ದರೆ ಸುಮ್ಮನೇ ಕೈಲಾಸವನ್ನು ಏಕೆ ತ್ಯಜಿಸಿದಳು?

ನಾರದ:— ಆಕೆಯು ತಾನಾಗಿ ಮನವಿದ್ದು ಬಿಟ್ಟುದಲ್ಲ. ಪ್ರಸಂಗವಶಾತ್ ಬಿಡಬೇಕಾಯಿತು.

ರಾವಣ:— ಅದೇಕೆ?

ನಾರದ:— ಓರ್ವ ದುರಾತ್ಮನ ದುರಾಗ್ರಹಕ್ಕೆ.

ರಾವಣ:— ಅಂದರೆ?

ನಾರದ:—ರಾವಣಾ! ಆವನೋ ಓರ್ವ ಮಹಾಭಕ್ತನು ಪರಶಿವನನ್ನು ತಪಸ್ಸಿನಿಂದ ಆರಾಧಿಸುತ್ತಿದ್ದನಂತೆ. ಆ ಸದಾಶಿವನು ಮಹಾಜ್ಞಾನಿಯಲ್ಲವೆ ಭಕ್ತನು ತನ್ನ ಅರ್ಧಾಂಗಿಯನ್ನೇ ಕೇಳಲಿಕ್ಕಿರುವನೆಂದು ತಿಳಿದ ಆತನು, ಪಾರ್ವತಿಯು ಸ್ವಲ್ಪ ಕಾಲ ಕೈಲಾಸವನ್ನು ಬಿಟ್ಟು ತೆರಳಲೇ ಬೇಕೆಂದು ಆಜ್ಞಾಪಿಸಿದನಂತೆ. ಇದಕ್ಕಾಗಿ ಅವಳು ನಿರ್ವಾಹವಿಲ್ಲದೆ ಹೊರಟು ಹೋದಳಂತೆ. ಹೀಗೆಂದು ನಾನು ಕೇಳಿದುದು.

ರಾವಣ:—ಭಲಾ ನಾರದರೇ! ಆ ಮಹಾಭಕ್ತನು ಕೊನೆಗೆ ಪಾರ್ವತಿಯನ್ನೇ ಕೇಳಿದನೇನೋ!

ನಾರದ:—ಕೇಳದೆ ಬಿಡುವನೆ? ಕೇಳಿಯೇ ಬಿಟ್ಟನು.

ರಾವಣ:—ಮಹಾದೇವನೇನು ಮಾಡಿದನು ಆಗ?

ನಾರದ:—ಮಾಡುವುದೇನು ಕೊಟ್ಟೇ ಬಿಟ್ಟನು.

ರಾವಣ:—ಏನನ್ನು?

ನಾರದ:—ಭಕ್ತನು ಕೇಳಿದುದನ್ನು.

ರಾವಣ:—ಪಾರ್ವತಿಯಿಲ್ಲದ ಮೇಲೆ ಆಕೆಯನ್ನು ಹೇಗೆ ಕೊಟ್ಟನು?

ನಾರದ:—ಇದೇನಯ್ಯಾ ಏನೂ ಅರಿಯದ ಗಾವಿಲರಂತೆ ಪ್ರಶ್ನಿಸುವೆಯಲ್ಲಾ! ಭಕ್ತನು ಏನನ್ನು ಕೇಳಲಿಕ್ಕಿರುವನೆಂದು, ಮೊದಲೇ ತಿಳಿದಿದ್ದ ಶಂಕರನು, ಇದಕ್ಕೊಂದು ಹಂಚಿಕೆಯನ್ನು ಮಾಡದೆ ಉಳಿದಿರಬಹುದೇ ಭೂತನಾಥನಲ್ಲವೆ ಅವನು? ಒಂದು ಹೆಣ್ಣು ಭೂತವನ್ನು ತನ್ನ ಬಳಿಯಲ್ಲಿ ಇರಿಸಿಕೊಂಡನು. ಆ ಭಕ್ತ ಶಿಖಾಮಣಿಯು ಆಕೆಯನ್ನೇ ಕೋರಿದನು. ಶಿವನು ಅಸ್ತು ಎಂದನು.

ರಾವಣ:—ನಾರದರೇ! ಇದೆಲ್ಲವೂ ನಿಮ್ಮ ವಿನೋದ ಪ್ರಸಂಗಾವಧಾನವು. ಜಗನ್ಮೋಹಿನಿಯಾದ ಪಾರ್ವತಿಯನ್ನು ಬಿಟ್ಟು ಆ ಹೆಣ್ಣು ಭೂತವನ್ನು ಕೊರಳಿಗೆ ಕಟ್ಟಿಕೊಳ್ಳಲು, ಆ ಭಕ್ತನಿಗೇನು ಹುಚ್ಚು ಹಿಡಿದಿರಬಹುದೆ?

ನಾರದ:—ಇರಬಹುದು. ಇಲ್ಲದಿದ್ದರೆ ಆ ಭೂತವನ್ನೇ ಪಾರ್ವತಿಯೆಂದು ಭ್ರಮಿಸಿ, ಅದನ್ನು ಕಟ್ಟಿಕೊಂಡು ಹೊರಟು ಬರುತ್ತಿದ್ದನೇ?

ರಾವಣ:—ನಾರದರೇ! ನಿಮ್ಮ ಅಂಬೋಣವೆಲ್ಲ ಸುಳ್ಳು. ಶಂಕರನು ಹಾಗೆ ಮಾಡಿಯೂ ಇಲ್ಲ. ಭಕ್ತನು ಭೂತವನ್ನು ತಂದೂ ಇಲ್ಲ. ಪಾರ್ವತಿಯನ್ನೇ ತಂದಿರುವನು. ಇನ್ನು ಅನುಮಾನವೇಕೆ? ಆ ಭಕ್ತನೇ ನಾನು. ಈಗ ತಿಳಿಯಿತೆ?

ನಾರದ:—ನನಗೆ ಎಲ್ಲವೂ ತಿಳಿದೇ ಇದೆ.

ರಾವಣ:—ಮತ್ತೇಕೆ ಹೀಗೆಲ್ಲಾ ನುಡಿದಿರಿ?

ನಾರದ:—ನೀನೇಕೆ ಜಾಣನಂತೆ ಹಾಗೆಲ್ಲಾ ಪ್ರಶ್ನಿಸಿದೆ?

ರಾವಣ:—ಕ್ಷಮಿಸಿರಿ. ಏನೋ ಹುಡುಗಾಟದಿಂದ ಹೀಗೆಲ್ಲಾ ಕೇಳಿದೆನು. ಅದನ್ನು ಮನಸ್ಸಿಗೆ ಹಚ್ಚಿಕೊಳ್ಳಬೇಡಿರಿ.

ನಾರದ:—ಹುಡುಗಾಟವೇ ರಾವಣಾ! ಅದಕ್ಕಿದು ಕಾಲವೆ? ನೀನು ಆಳಬೇಕಾದ ಕಾಲವಿದು. ನಾನು ನಿಜವನ್ನೇ ಹೇಳಿರುವೆನು. ಖಂಡಿತವಾಗಿಯೂ ನೀನು ಮೋಸಹೋಗಿರುವೆ.

ರಾವಣ:—ಇಲ್ಲ. ನಿಶ್ಚಯವಾಗಿಯೂ ನಾನು ಮೋಸಹೋಗಿಲ್ಲ. ಪಾರ್ವತಿಯನ್ನೇ—ಆ ಶಂಕರನ ಪತ್ನಿ ಪಾರ್ವತಿಯನ್ನೇ ತಂದಿರುವೆನು.

ನಾರದ:—ಇಲ್ಲ. ಖಂಡಿತವಾಗಿಯೂ ಇಲ್ಲ.

ರಾವಣ:—ನಾರದರೇ! ಈ ವಿಷಯದಲ್ಲಿ ವಾದ ವಿವಾದವೇಕೆ? ಈಗಲೇ ನಾನು ಆ ಪಾರ್ವತಿಯನ್ನು ಪ್ರತ್ಯಕ್ಷ ಇಲ್ಲೇ ತೋರಿಸಿ ಕೊಡಲೆ?

ನಾರದ:— ಅದು ಅಸಂಭವ!

ರಾವಣ:— ಏಕೆ? ಪಂಥವಿದೆಯೆ?

ನಾರದ:— ನಿಜವಾಗಿಯೂ ಪಂಥವಿದೆ. ಪ್ರತ್ಯಕ್ಷ ಪಾರ್ವತೀ ದೇವಿಯನ್ನು, ಇಲ್ಲಿ ನೀನು ಈಗ ತೋರಿಸಿ ಕೊಟ್ಟೆಯಾದರೆ, ಆಕೆಗೆ ಮಾತ್ರವಲ್ಲ; ನಿನಗೆ, ಯಾಕೆ? ನಿನ್ನ ಸೇವಕರಿಗೆ ಸಮೇತ 'ನಮೋ ನಮಃ' ಎಂದು ಸಾಷ್ಟಾಂಗ ಪ್ರಣಾಮವನ್ನು ಮಾಡುವೆನು.

ರಾವಣ:— ಯಾಕೆ? ಪಾಪ! ನೀವೆಲ್ಲಾದರೂ ತಿರುಗಾಡಿ ಕೊಂಡಿರಬಾರದೆ? ಈ ಲಂಕೇಶ್ವರನಲ್ಲಿ ಏಕೀ ಪಂಥವು? ನಾನು ಅಜೇಯನೆಂದು ಗೊತ್ತಿಲ್ಲವೆ?

ನಾರದ:– ಅದು ಗೊತ್ತೇ ಇದೆಯಷ್ಟೆ? ಎದ್ದರೂ, ಬಿದ್ದರೂ, ಜಯ ವೆಂಬ ಶಬ್ದವನ್ನು ಉಪಯೋಗಿಸುವ ಅಧಿಕಾರವು ನಿಮ್ಮಂಥವರದ್ದೇ ತಾನೆ? ಯಾಕಯ್ಯ ಅದೆಲ್ಲ? ಈಗ ತೋರಿಸು ಆ ಪಾರ್ವತಿಯನ್ನು. ಆ ಮೇಲೆ ಮುಂದಿನ ವಿಚಾರ.

ರಾವಣ:– ಸರಿ ದೇವೀ ಹೀಗೆ ಬಾ. (ಮುಸುಕು ಹಾಕಿದ ಭದ್ರ ಕಾಳಿ ಬರುತ್ತಿರುವಳು.) ನಾರದರೇ! ನೋಡಿ.

ನಾರದ:– ಯಾರಯ್ಯ ಇವಳು?—(ನಕ್ಕು) ಪಾರ್ವತಿ! ಹ್ಹಹ್ಹಹ್ಹ! ಪಾರ್ವತಿ! ಭಲೇ! ಪಾರ್ವತೀ ದೇವೀ!!

ರಾವಣ:– ಮುನೀಂದ್ರಾ! ಅದೇನು ಹುಚ್ಚು ನಗು?

ನಾರದ:– ನಿನ್ನ ಹುಚ್ಚುತನಕ್ಕಾಗಿ. ರಾವಣಾ! ನಿನ್ನ ದೃಷ್ಟಿಗಳಿ ಗೇನೋ ದೋಷವಿದೆ. ನಾರಾಯಣ! ಈ ಘೋರಾಕಾರದ ಭೂತವನ್ನು ಪಾರ್ವತಿಯೆಂದು ಹೇಳುತ್ತಿರುವೆಯಲ್ಲಾ! ಜಾಣನಯ್ಯಾ ಬಹು ಜಾಣನು ನೀನು.

ರಾವಣ:– ಬಾಲ ಬ್ರಹ್ಮಚಾರಿಯಾದ ನಿಮಗೆ ಸೌಂದರ್ಯದ ವಿಚಾ ರವು ಹೇಗೆ ತಿಳಿದೀತು? ಸುಮ್ಮನೆ ಏಕೀ ಹಟವು? ಈಕೆಯೇ ಪರಶಿವನ ಸತಿ ಯೆಂಬುದು ಸತ್ಯ. ಇದೋ! (ಆಕೆಯ ಮುಸುಕನ್ನು ತೆಗೆಯುವನು. ಭದ್ರ ಕಾಳಿಯು ತೋರುವಳು. ಅಚ್ಚರಿಯಿಂದ) ಅಃ! ನಾರದರೇ! ಏನಿದು?

ನಾರದ:– (ವ್ಯಂಗ್ಯದಿಂದ) ಲಂಕೇಶ್ವರ! ತಿಳಿಯದೆ? ಇದು ಜಗ ನ್ಮೋಹನಾಕಾರ!

ರಾವಣ:– ಆ ಲಾವಣ್ಯವೇನಾಯಿತು? ಅಕಟಾ! ಇದೆಲ್ಲಿಯದು ಪಿಶಾಚಿ?

ನಾರದ:– ಛೆ! ಛೆ! ಪಿಶಾಚಿಯೇ? ನೋಡು. ಬಂಧುರವೀಚಿ! ಸೌಂದರ್ಯ ಮರೀಚಿ! ಭಲೇ! ರಾವಣಾ! ಯಾವಾಗಲೂ, ಯಾರಿಂದಲೂ ಅಜೇಯನಪ್ಪಾ ನೀನು. ಶಂಕರನನ್ನೂ ಜಯಿಸಿದೆಯಲ್ಲವೆ? ಶಹಬಾಸ್. ಹೀಗಿರಬೇಕು ಭಕ್ತಿ ಶಕ್ತಿಗಳೆಂದರೆ. ಬೇಡಿದರೆ ಬೇಡ ಬೇಕಯ್ಯಾ ಇಂತಹ ಎಲ್ಲಿಯೂ ದೊರಕದ ಅಮೂಲ್ಯ ವಸ್ತುವನ್ನೇ.

ರಾವಣ:- ಹಾ! ಶಂಕರಾ! ನಿನ್ನ ವರ ಪ್ರಸಾದವೋ ಇದು? ಪಾರ್ವತಿಯುನ್ನು ಅತಗಿಸಿ, ಈ ಪಿಶಾಚಿಯುನ್ನು ನನ್ನ ಕೊರಳಿಗೆ ಕಟ್ಟಿದೆಯಾ? ನಾರದರೇ! ಇನ್ನೇನು ಗತಿ?

ನಾರದ:- ಗತಿಯೇನು? ಈಕೆಯುನ್ನು ಕರಕೊಂಡು ಹೋಗಿ, ಸುಖದಲ್ಲಿ ಲಂಕೆಯುನ್ನಾಳು. ದೇವರು ಕೈಯೆತ್ತಿಕೊಟ್ಟ ಅನರ್ಘ್ಯ ನಾರೀ ರತ್ನವಲ್ಲವೆ? ಹೋಗು. ಸಂತೋಷದಿಂದ ಈಕೆಯೊಂದಿಗೆ ರಾಜ್ಯಕ್ಕೆ ಹೋಗು.

ರಾವಣ:—ನಾರದರೇ ಅದೆಂದಿಗೂ ಆಗದು. ಅಕಟಾ! ತಿಳಿಯದೆ ಮೋಸ ಹೋದೆನು.

ನಾರದ:—ತಿಳಿಸಿದರೆ ನೀನು ಒಪ್ಪುವುದೂ ಇಲ್ಲವಲ್ಲ?

ರಾವಣ:—ಇಲ್ಲ ನಾರದರೇ ಒಪ್ಪಿದೆನು. ಖಂಡಿತವಾಗಿಯೂ ನಾನು ಸೋತೆನು. ಈ ಪೀಡೆ ತಪ್ಪಿಹೋಗುವ ಬಗೆ ಹೇಗೆ? ಇದಕ್ಕೊಂದು ಉಪಾಯವನ್ನು ದಯಮಾಡಿ ತಿಳಿಸುವಿರಾ?

ನಾರದ:—ಹಾಗಿದ್ದರೆ ಇದೋ! ಈಕೆಯುನ್ನೀಗಲೇ ಕೈಲಾಸಕ್ಕೆ ಕರಕೊಂಡು ಹೋಗಿ, ಆ ಶಂಕರನಿಗೇ ಕೊಟ್ಟು ಹಿಂತಿರುಗಿ ಬಾ.

ರಾವಣ:—ನಾರದರೇ! ಈಕೆಯುನ್ನು ಕೊಟ್ಟು, ಬಾಯ್ಮುಚ್ಚಿಕೊಂಡು ಹಾಗೆಯೇ ಬರಲೆ! ಅದು ಮಾತ್ರ ನನ್ನಿಂದ----

ನಾರದ:—ಅದನ್ನೂ ಹೇಳಿಕೊಡಬೇಕಾಯಿತೆ? ಆಡತಕ್ಕ ನಾಲ್ಕು ಮಾತುಗಳನ್ನು ಚೆನ್ನಾಗಿ, ಆತನೆದುರು ಆಡಿ ಬಂದುಬಿಡು. ಭಕ್ತಶಿರೋಮಣಿಯಾದ ನಿನಗೆ ಈ ರೀತಿ ಮೋಸಮಾಡಿದ ಆ ಶಂಕರನ ಹಂಗೇನಯ್ಯಾ ನಿನಗೆ?-ಹಾಗೆಯೇ ಮಾಡು ಹೋಗು.

ರಾವಣ:—ನೀವು?

ನಾರದ—ನಾನೇಕಯ್ಯಾ ನಿನಗೆ? ಈ ಅಮೂಲ್ಯವಸ್ತುವನ್ನು ಇತ್ತವನು ಮಹಾದೇವನು, ಬೇಡಿದವನು ನೀನು. ನಿಮ್ಮೊಳಗಿನ ವಿವಾದದಲ್ಲಿ ನಾನೇಕಯ್ಯಾ? ಆದುದರಿಂದ ನೀನು ತೆರಳು. ನಾನು ಹೀಗೆ ತಿರುಗುತ್ತಾ ಸಂದರ್ಭಾನುಸಾರ ಬೇರೆ ದಾರಿಯಿಂದ ಅಲ್ಲಿಗೆ ಬರುವೆನು. ಶಿವಸನ್ನಿಧಿಗೆ ಹೋಗುವುದು ಬರುವುದೇನೂ ನನಗೆ ಹೊಸತಲ್ಲ :—ಇರಲಿ ನೀನೀಗ ತಡ ಮಾಡಬೇಡ ಹುಂ.

ರಾವಣ:—ಸರಿ, ಏ ಭೂತವೇ ನಡೆ.

ಭದ್ರಕಾಳಿ:—ಅಹ್ಹಹ್ಹ! ನಾನು ಮೊದಲೇ ಸಿದ್ಧವಾಗಿರುವೆನು; ನನ್ನನ್ನು ನಿನ್ನ ಭುಜಗಳ ಮೇಲೆ ಕುಳ್ಳಿರಿಸಿಕೊಂಡು ನಡೆ.

ನಾರದ:—ರಾವಣಾ! ರೂಪಮಾತ್ರವಲ್ಲ ಮನೋಹರ! ಕಂಠ ಸ್ವರವು ಕೇವಲ ವೀಣಾನಾದವೇ. ಪಾಪ! ಸುಕುಮಾರಿ ಸುಮಕೋಮಲೆ. ಕಾಲು ತೆಗೆದಿಡಲಾರಳು. ಹುಂ ಭುಜಗಳ ಮೇಲೆ ಕುಳ್ಳಿರಿಸಿಕೊ! ರಾವಣಾ!

ರಾವಣ:—ಆಗಲಿ! ಹೇಗೂ ಈ ಪೀಡೆಯು ತಪ್ಪಿದರೆ ಸಾಕು. ಹೊತ್ತುಕೊಳ್ಳುವನು. (ಹೆಗಲೇರುವಾಗ ನಿಜವಾದ ಪಾರ್ವತಿಯೇ ಆಗಿರುವಳು. ರಾವಣನು ಹೋಗುವನು.)

ನಾರದ:—ನಾರಾಯಣ! ನಿನ್ನ ಮಾಯಾವಿಲಾಸವೇ; ಈತನು ಸಂಪೂರ್ಣ ಕುರುಡನೇ ಆಗಿರುವನಲ್ಲಾ! ಇಂಥವರಿಗೆ ಹೀಗೆಲ್ಲ ಆಗಬೇಕಾದುದೇ ವಿಹಿತವು. ಇನ್ನು ನಾನೂ ಆ ಪರಶಿವನಲ್ಲಿಗೆ ತೆರಳಿ, ಈ ಮಾಯಾಂಧನಿಗೆ ಇನ್ನಷ್ಟು ಹುಚ್ಚು ಹಿಡಿಸಿ, ಆ ಮೂಲಕ ಶಂಕರನನ್ನು ಕೆರಳಿಸಿ, ಇವನಿಗೆ ಬುದ್ಧಿ ಕಲಿಸುವೆನು. ನೋಡೋಣ—(ಹೋಗುವನು. ತೆರೆ ಬೀಳುವುದು.)

ಮೂರನೆಯ ದೃಶ್ಯ

ಮಂಡೋದರಿಯ ಮಹಾಲ್.

ಮಂಡೋದರಿ:—(ರಾವಣನ ಚಿತ್ರವನ್ನು ಬರೆಯುತ್ತಾ ಹಾಡುತ್ತಿರುವಳು.)

ಪದ್ಯ ೧೨

ಮನೋಹರಾ! ನಿನ್ನನ್ನೆಂದು ನೋಡಿದೆನೋ ಆ ಆನಂದದ ಶುಭದಿನವಿನ್ನು ನನ್ನ ಜೀವಮಾನದಲ್ಲಿ ಮತ್ತೊಮ್ಮೆ ಬರಬಹುದೆ? ಆ ನಿನ್ನ ಮನೋಹರಾಕಾರ! ಮುಖದಲ್ಲಿನ ಆ ಗಂಭೀರ ಭಾವ! ಆ ನಡಿಗೆ! ನೋಟ! ಇವೆಲ್ಲ ನನ್ನ ಹೃತ್ಪಟಲದಿಂದ ಮಾಯವಾಗದೇ ಇರುವವಲ್ಲಾ! ಹಾಳುನಾಚಿಕೆಯೊಂದು ಅಡ್ಡಬಾರದೆ ಉಳಿದಿದ್ದರೆ, ಆ ಹೊಯಿಗೆಯ ದಿಣ್ಣೆಯ ಮರೆಯಲ್ಲೇ ಇದ್ದು ಇನ್ನೂ ಚೆನ್ನಾಗಿ ನಿನ್ನ ಸೌಂದರ್ಯದ ಸಾಸ್ವಾದನವನ್ನು ಮಾಡುತ್ತಿದ್ದೆನು. ಖಂಡಿತವಾಗಿ ಇನ್ನು ನಾಚುವುದಿಲ್ಲವೆಂದು, ಮನಸ್ಸನ್ನು ಬಿಗಿಹಿಡಿದು. ಸಿದ್ಧಳಾಗುವಷ್ಟರಲ್ಲಿ ನೀನು ಮರೆಯಾಗಿ ಬಿಟ್ಟೆಯಲ್ಲವೆ? ಯಾವಾಗಲೂ ಉಬ್ಬಿದ್ದ ಮಾತುಗಳನ್ನು ಬೆಳಸುತಿದ್ದ ನಾರದರೂ ಅಂದು ಅಷ್ಟು ಬೇಗನೇ "ಕಲ್ಯಾಣ

ಮಸ್ತು" ಎಂದು ಹರಸಿ, ನಿನ್ನನ್ನು ಬೀಳ್ಕೊಟ್ಟರೇಕೋ! (ನಿಟ್ಟುಸಿರುಬಿಟ್ಟು) ಇನ್ನೆಲ್ಲಿ ನಿನ್ನ ದರ್ಶನ? ದೇವಾ ನನ್ನ ಪ್ರಾರ್ಥನೆಯನ್ನು ಸಫಲಮಾಡಲಾರೆಯಾ? (ಚಿತ್ರವನ್ನು ಎದೆಗವಚಿಕೊಂಡು) ನಾಥಾ ನಿನಗೂ ಈ ದಾಸಿಯಲ್ಲಿ ದಯೆಯು ಬಾರದೆ? (ಆನಂದ ಪರವಶಳಾಗಿ ಮೈಮರೆದು ಪಲ್ಲಂಗದಲ್ಲಿ ಒರಗುವಳು.)

೧ನೆ ಸಖಿ:- (ಪ್ರವೇಶಿಸಿ, ಇದನ್ನು ಕಂಡು, ಸ್ವಗತ.) ಯಾವ ಮುಹೂರ್ತದಲ್ಲಿ ಬಂದನೋ ಅಂದು ಗೋದಾವರೀ ತೀರಕ್ಕೆ ಆ ಲಂಕೇಶ್ವರನು? ಬಂದು ನಿಂದುದೋ ನಮ್ಮಾ ದೇವಿಯು ಎಲ್ಲಿ ಮರೆಯಾಗಿದ್ದಳೋ ಅಲ್ಲೇ, ಸಮಾಪದಲ್ಲೇ. ಇವಳ ನೋಟವು ಆತನ ಮೇಲೆಯೇ. ಆಗಲೇ ಎಣಿಸಿದ್ದೆ ಏನಾದರೊಂದು ಅನರ್ಥವು ಬಾರದೆ ಹೋಗದೆಂದು. ಈಗ ಅದರ ಫಲಗಳು ಗೊತ್ತಾಗ ತೊಡಗಿವೆ. ಈಕೆಗೆ ಗೆಳತಿಯರ ಕೂಟ ಬೇಡವೆಣಿಸಿದೆ. ಊಟ ಉಪಚಾರಗಳೂ ಬೇಡವೆನಿಸಿವೆ. ನಿದ್ರೆಯಂತೂ ಬಾರದು. ಒಂದು ವೇಳೆ ಸ್ವಪ್ನಾವಸ್ಥೆಯುಂಟಾದರೂ, ನೀರ, ಮನೋಹರ ಎಂದೆಲ್ಲಾ ಕನವರಿಸುವುದೇ ಪದ್ಧತಿಯಾಗಿ ಬಿಟ್ಟಿದೆ. ಈ ಅವಸ್ಥೆಯನ್ನೆಲ್ಲಾ ನೋಡಿದರೆ, ನನಗೇ ಮನಸ್ಸಿಗೆ ಬಹಳ ನೋವಾಗುತ್ತಿರುವುದು. ಆದರೂ ಇವಳ ಜನನೀ ಜನಕರು ಇನ್ನೂ ತಮ್ಮಮಗಳು ಎಳೆಮಗುವಾಗಿಯೇ ಇರುವಳೆಂದು ತಿಳಿದಿರುವರಲ್ಲಾ! ಮೃಷ್ಟಾನ್ನ ಉಂಡವರಿಗೆ ಹಸಿವಿನ ಅನುಭವ ಹೇಗುಂಟಾಗಬೇಕು. (ಸಮೀಪಕ್ಕೆ ಹೋಗಿ.) ಇಷ್ಟು ದಿನಗಳಲ್ಲಿ ಈಗೇನೋ ಸ್ವಲ ನಿದ್ರೆಯು ಬಂದಂತಿದೆ. ಆಗಲಿ! ಸ್ವಲ್ಪ ವಿಶ್ರಮಿಸಿಕೊಳ್ಳಲಿ. (ಬೀಸಣಿಗೆಯಿಂದ ಬೀಸುತ್ತಾ ಕುಳಿತುಕೊಳ್ಳುವಳು.)

೨ನೆ ಸಖಿ:- (ಸುಗಂಧ ದ್ರವ್ಯಗಳ ಹರಿವಾಣವನ್ನು ಹಿಡಕೊಂಡು ಪ್ರವೇಶ.—೧ನೆ ಸಖಿಯನ್ನುದ್ದೇಶಿಸಿ:—) ಇದೇನೇ ದೇವಿಗೆ ಅಕಾಲದಲ್ಲಿ ನಿದ್ರೆ? ಅದಕ್ಕನುಕೂಲವಾಗಿಯೇ ನಿನ್ನ ಉಪಚಾರಗಳು ನಡೆಯುತ್ತವೆಯಲ್ಲಾ?

೧ನೆ ಸಖಿ:- ಏ! ಬಾಯ್ಮುಚ್ಚಿಕೊಂಡಿರಬಾರದೆ? ಬರುವಾಗಲೇ ಸುಂಟರಗಾಳಿಯಂತೆ ಬಂದುದಲ್ಲದೆ, ಅದರ ಮೇಲೆ ಗುಡುಗಿನ ಧ್ವನಿಯಲ್ಲೇ ನುಡಿಯುತ್ತಿರುವೆಯಲ್ಲಾ! ಶಿಷ್ಟ ಸಂಪ್ರದಾಯವು ಒಂದಿಷ್ಟೂ ತಿಳಿದಂತಿಲ್ಲ ನಿನಗೆ.

೨ನೆ ಸಖಿ:– ಆಹುದಪ್ಪಾ ನೀನು ಮಾತ್ರ ಅದನ್ನೆಲ್ಲ ತಿಳಿದವಳು. ನಡು ಹಗಲಲ್ಲಿ ನಿದ್ರಿಸುತ್ತಿರುವುದು ಶಿಷ್ಟಸಂಪ್ರದಾಯದ ಕೊನೆಯ ಮೆಟ್ಟಲು ತಾನೆ? ಆಗಲಿ, ನನಗೇನು? ನಾನು ಸುಮ್ಮನಿರುವೆನು.

೧ನೆ ಸಖಿ:– ಸಾಕು. ಸದ್ಯಕ್ಕೆ ಅಷ್ಟೊಂದು ಉಪಕಾರವನ್ನು ಮಾಡು.

ಮಂಡೋದರಿ:– (ಕನವರಿಸುತ್ತ) ಏನು? ಇನ್ನೂ ಬಂದಿಲ್ಲವೆ?

೨ನೆ ಸಖಿ:– ದೇವೀ! ಆಗಲೇ ಬಂದಿರುವೆನಲ್ಲಾ!

ಮಂಡೋದರಿ:– (ಉತ್ಸಾಹದಿಂದ ಎದ್ದು ಕುಳಿತು.–ಇದಿರಿದ್ದ ಆ ಸಖಿಯನ್ನು ಕಂಡು ಆಶಾ ಭಂಗದ ರೀತಿಯಲ್ಲಿ) ನೀನೋ? (ನಿಟ್ಟುಸಿರು ಬಿಡುವಳು.)

೨ನೆ ಸಖಿ:– (ಸ್ವಗತ) ಮತ್ತಾರು ಬರಬೇಕಾಗಿದ್ದಿತೋ! ಹುಂ. (ಪ್ರಕಾಶ) ದೇವೀ! ಇದೋ ಈ ನೂತನ ಮಾಲ್ಯ ಗಂಧಾದಿಗಳನ್ನು ಸ್ವೀಕರಿಸು. ಅಭರಣಗಳನ್ನೆಲ್ಲ ಧರಿಸಿ, ಒಮ್ಮೆ ಸಿಂಗರಿಸಿಕೊ!

ಮಂಡೋದರಿ:– ನನಗಾಗುವುದೂ ಬೇಡ. ಸಖೀ! ನನಗೀಗ ಇದ್ದ ಶೃಂಗಾರವೇ ಸಾಕಮ್ಮ.

೨ನೆ ಸಖಿ:– ಅದೇಕೆ ಅಷ್ಟೊಂದು ಉದಾಸೀನ?

ಮಂಡೋದರಿ:– ಸಖೀ!

ಪದ್ಯ ೧೩.

೧ನೆ ಸಖಿ:– ದೇವೀ! ಸುಮ್ಮನೇ ಹಂಬಲವೇಕೆ? ದೈವ ಯೋಗದಿಂದ ಆ ಸುವರ್ಣ ಸಂಧಿಯು ಬೇಗನೇ ಬಾರದಿರದು.

೨ನೆ ಸಖಿ:– ಅನುಮಾನವಿಲ್ಲ. ಖಂಡಿತವಾಗಿಯೂ ಆ ಶುಭದಿನವು ಶೀಘ್ರವೇ ಬರುವದು. ಪರಮಾತ್ಮನ ಕಿವಿಯೇನು ಕಿವುಡೆ? ದೀನರ ಪ್ರಾರ್ಥನೆಯು ಆತನಿಗೆ ಕೇಳಿಸದೆ ಇರುವುದೇ ಇಲ್ಲ. ಈಗ ಸ್ವಲ್ಪ ಸಂತೈಸಿಕೊ.

ಮಂಡೋದರಿ:– ಏನೋ! ಎಂತೋ! (ದೀರ್ಘವಾದ ಉಸಿರನ್ನು ಬಿಡುವಳು.)

೧ನೆ ಸಖಿ:– (ಸ್ವಗತ.) ಎಷ್ಟೆಂದರೂ ಈಕೆಗೆ ಶಾಂತಿಯಿಲ್ಲ ಪಾಪ ಹೇಗಾಗಬೇಕು ಶಾಂತಿ! (ಪ್ರಕಾಶ) ದೇವೀ ಒಮ್ಮೆ ಹೊರಗೆ ಗಾಳಿಗೆ ಸುತ್ತಾಡಿಕೊಂಡು ಬರೋಣವೆ? ಏನು. ಆಗದೆ?

ಮಂಡೋದರಿ:– ಹುಂ. ಯಾವ ಕಡೆಗೇ ಹೋಗೋಣ?

೧ನೆ ಸಖಿ:– ನಿನಗೆ ಹಿತವಿದ್ದ ಕಡೆಗೇ ಹೋಗೋಣ.

ಮಂಡೋದರಿ:– ಆ ಗೋದಾವರೀ - - - -

೧ನೆ ಸಖಿ:– ಏಕಾಗಬಾರದು? ಅವಶ್ಯವಾಗಿ ಅಲ್ಲೇ ತಿರುಗಾಡಿ ಕೊಂಡು, ಸೊಬಗನ್ನು ನೋಡಿ, ಹಿಂತಿರುಗುವಾ.

ಮಂಡೋದರಿ:– (ಸ್ವಗತ) ಸೊಬಗು: - - - ಆ ಸೊಬಗು ಇಂದೂ ಇರಬಹುದೆ? ಅಲ್ಲಿ?

೧ನೆ ಸಖಿ:– ದೇವೀ! ಇನ್ನು ಸಾವಕಾಶವೇಕೆ? ಹೊರಡೋಣವೆ?

ಮಂಡೋದರಿ:– ಹುಂ.

[ತೆರೆ ಬೀಳುವುದು.]

ನಾಲ್ಕನೆಯ ದೃಶ್ಯ.

ಕೈಲಾಸ.

(ಶಿವನು ಮಂಡಿಸಿರುವನು. ಶಿವಭಕ್ತರು ಉಲ್ಲಾಸದಿಂದ)

ಎಲ್ಲರೂ:– ನಮಃ ಪಾರ್ವತಿ ಪತಯೇ ಹರಹರ ಮಹಾದೇವ! ಹೇ ಭಕ್ತ ವತ್ಸಲಾ! - - - - -

ರಾವಣ:– (ಪ್ರವೇಶಿಸುತ್ತಾ) ಅನ್ನಲಾಗದು ಹಾಗೆ. (ಪಾರ್ವತಿ ಯನ್ನು ಹೆಗಲಿಂದ ಇಳಿಸಿ.) ಭಕ್ತ ವತ್ಸಲಾ, ಅಂತೆ. ಇವನೇ ಏನು ಭಕ್ತ ವತ್ಸಲನು?

ಎಲ್ಲರೂ:– ಸಂದೇಹವೇನು? ಈ ಆದಿ ದೈವವೇ.

ರಾವಣ:– (ಅಣಕಿಸುತ್ತಾ.) ಈ ಆದಿದೈವವೇ! – ಅಃ! ಇವನೊಬ್ಬ ದೈವ! ನೀವಿವನ ಪೂಜಾರಿಗಳು! ಹುಂ! ನಂಬಿದರೆ ನಂಬಬೇಕು ಇಂಥಹ ದೈವವನ್ನು!

ಎಲ್ಲರೂ:– ಶಿವ ಶಿವ! ಶಾಂತಂ ಪಾಪಂ.

ರಾವಣ:– (ಅಣಕಿಸಿ.) 'ಶಾಂತಂ ಪಾಪಂ' — ಈತನು ಮಾಡಿದ ವಿಶ್ವಾಸಘಾತುಕತನವನ್ನು ಕೇಳಿದರೆ ಸಾವಿರ ಬಾರಿ ಶಾಂತಂ ಪಾಪಂ, ಎನ್ನ ಬೇಕಾಗುವುದು.

ಎಲ್ಲರೂ:– ಅದೇನಂತಹ ಘಾತುಕತನ? ಹೇಳಬಾರದೆ?

ರಾವಣ:– ನಿಮ್ಮಲ್ಲಿ ಹೇಳುವುದೇನನ್ನು? ಆತನೊಡನೆ ನಾನೀಗ ಆಡಿದ ತಕ್ಕ ಮಾತುಗಳಿಂದಲೇ ತಿಳಿದುಕೊಳ್ಳಿರಿ ಬೇಕಾಗಿದ್ದರೆ. — (ಶಿವನ ಕೂಡೆ.) ಎಲೈ ಭೂತಪತಿಯೇ! ಮೊದಲು ಈ ನಿನ್ನ ಭೂತವನ್ನು ಸ್ವೀಕರಿಸಿಕೊ. (ಪಾರ್ವತಿಯನ್ನು ಶಿವನ ಬಳಿಗೆ ದೂಡುವನು.)

ಶಂಕರ:– ರಾವಣಾ! ಅದೇಕೆ? ಈಕೆ ನಿನಗೆ ಬೇಡವೆ? ಹಾಗಿದ್ದರೆ ಬೇರೇನು ಬೇಡುವೆ?

ರಾವಣ:– ಜಗತ್ತಿಗೆಲ್ಲಾ ದೊಡ್ಡವನಪ್ಪಾ ನೀನು! ಕೊಡುವವನೂ ನೀನೇ. ಬೇಡುವವನೂ ನೀನೆ. ಗೊತ್ತೇ ಇದೆ. ಈಗ ನನಗೆ ಮಾತ್ರ ನೀನು ಕೊಡುವುದೂ ಬೇಡ, ನಾನು ನಿನ್ನಲ್ಲಿ ಬೇಡುವುದೂ ಬೇಡ. ನಿನ್ನ ದಯೆ ಇದ್ದರೆ ಸಾಕು ದೂರದಿಂದ. ನಮೋ ನಮಃ ನಿನಗೆ ಸಾವಿರ ಬಾರಿ.

ನಾರದ:– (ಪ್ರವೇಶಿಸುತ್ತಾ.) ನಾರಾಯಣ. ಹರಹರ ಮಹಾದೇವ!

ಶಂಕರ:– ನಾರದಾ – ಸಂತೋಷ! ಹೀಗೆ ಬಾ.

ನಾರದ:– ದೇವಾ ಧನ್ಯನಾದೆನು. (ರಾವಣನನ್ನು ನೋಡಿದವನಂತೆ.) ಓಹೋ ಲಂಕೇಶ್ವರನೋ! ಇದೇನಯ್ಯಾ ಇಲ್ಲಿಗೆ ಯಾವಾಗ ಬಂದೆ?

ರಾವಣ:– ಈಗ ತಾನೆ ಬಂದೆ. ಅದಿರಲಿ. ನಾರದರೇ ಭಕ್ತರಿಗೆ ದೇವನು ಎಂದಾದರೂ ಮೋಸ ಮಾಡಬಹುದೆ?

ನಾರದ:– ಛೆ ಛೆ! ಎಂದಿಗೂ ಆಗದು.

ರಾವಣ:– ಕೇಳಿದೆಯಾ ಶಂಕರ? ಹೀಗೆ ಮೊದಲು ಎಷ್ಟು ಜನರನ್ನು ವಂಚಿಸಿರುವೆ? ಆದರೆ, ಈ ಲಂಕೇಶ್ವರನಲ್ಲಿಯೂ ನಿನ್ನಾಟ ನಡೆಯುವುದೆಂದೆಣಿಸಿದೆಯಾ?

ಶಂಕರ:– ಸ್ವಲ್ಪ ನಿಧಾನಿಸು ರಾವಣ! ಹೀಗೆಲ್ಲಾ ಏಕೆ ಹೇಳುವೆ? ಈಕೆಯೇನು ನಿನ್ನಾಜ್ಞಾನುಸಾರವಾಗಿ, ನಾನೆಂದಂತೆ ನಡೆಯದೆ ಹೋದಳೆ?

ನಾರದ:– ಅಹುದಹುದು. ರಾವಣಾ! ಅದನ್ನು ಹೇಳು. ಭಕ್ತ ಪಕ್ಷಪಾತಿಯೆನಿಸಿದ ಶಂಕರನು ಯಾವಾಗಲೂ ತನ್ನ ಭಕ್ತರ ಪರಾಭವವನ್ನು ಸಹಿಸುವುದೇ ಇಲ್ಲ. ಅನುಮಾನ ಪಡಬೇಡ. ಧೈರ್ಯದಿಂದ ನಿಜಾಂಶವನ್ನು ಹೇಳು.

ಶಂಕರ:– ನಿಜವು. ಈಕೆ ನನ್ನಾಜ್ಞೆಗೆ ಅವಿಧೇಯಳಾಗಿ ನಡೆದಿದ್ದರೆ. ಈ ಕ್ಷಣ ನಿನ್ನಿದಿರಿನಲ್ಲೇ ಇವಳನ್ನು ಸುಟ್ಟು ಬೂದಿ ಮಾಡಿಬಿಡುವೆನು. ಅನುಮಾನವೇಕೆ? ಹೇಳು. ಏನು ಮಾಡಿದಳೆಂದು.

ರಾವಣ:– ಶಂಕರಾ! ನೀನಿವಳನ್ನು ಜೂಜಿ ಮಾಡು, ಇಲ್ಲವೆ ಅರೆದು ಪಾನಕ ಮಾಡು. ಅದರಿಂದ ನನಗೆ ತೋಷವೂ ಇಲ್ಲ, ಕ್ಲೇಷವೂ ಇಲ್ಲ.

ಶಂಕರ:– ಮತ್ತೇನಾಗಬೇಕು ನಿನಗೆ? ನಿಷ್ಕಾರಣವಾಗಿ ಕಾಲ ಕಳೆಯುತ್ತಿರುವುದೇಕೆ? ನನ್ನಿಂದ ನಿನಗೇನು ಅಪಕಾರವಾಯಿತೋ ಅದನ್ನು ಹೇಳು.

ರಾವಣ:– ಇನ್ನೇನು ಅಪಕಾರವಾಗಬೇಕು? ನಿಜವಾದುದನ್ನು ಮರೆಸಿಟ್ಟು, ಕೃತಕವಾದುದನ್ನು ಕೊಟ್ಟು, ಲಾಭ ಹೊಂದಬೇಕೆಂಬ ಕಾಳಸಂತೆಯ ಕಳ್ಳ ವ್ಯಾಪಾರ ಮಾಡಿದುದು ಸಾಲದೆ? ಈಕೆಯನ್ನು ನನ್ನ ಕುತ್ತಿಗೆಗೆ ಬಿಗಿದೆಯಲ್ಲಾ? ಇದೇ ಏನು ನಿನ್ನ ಭಕ್ತ ವತ್ಸಲತೆ? ಏಕೆ ನಾರದರೇ ಸುಮ್ಮನಿರುವಿರಿ? ನಿಮ್ಮ ದೇವರಿಗೆ ಸ್ವಲ್ಪ ಹೇಳಬಾರದೆ?

ನಾರದ:– ನಿಜವು ದೇವಾ! ಇವನಂತಹ ಭಕ್ತ ಶಿರೋಮಣಿಗೆ ಈಕೆಯನ್ನು ಕೊಡಬಾರದಿತ್ತು.

ರಾವಣ:– ಭಲಾ ನಾರದರೇ! ಹಾಗೆನ್ನಿರಿ.

ಶಂಕರ:– ಏನು ಮಾಡಲಿ ನಾರದ? ಈತನು ಕೇಳಲೇ ಬಾರದಾಗಿತ್ತು; ಕೇಳಿದನು. ನೀತಿಯನ್ನು ಹೇಳಿದರೂ ಇವನು ತನ್ನ ಹಟವನ್ನು ಬಿಡಲಿಲ್ಲ. ನಿರ್ವಾಹವಿಲ್ಲದೆ ಕೊಟ್ಟುಬಿಟ್ಟೆನು.

ರಾವಣ:– ಅಹಹಾ! ಎಷ್ಟು ಚಂದದಿಂದ ಬಣ್ಣಿಸುತ್ತಿರುವನು? ನಾನು ಕೇಳಿದುದು ಪಾರ್ವತಿಯನ್ನು. ಈ ಭೂತವನ್ನಲ್ಲ.

ಶಂಕರ:– ರಾವಣಾ! ನಿನಗೇನೋ ವಿಚಾರ ಶಕ್ತಿಯು ಕೆಟ್ಟಂತಿದೆ. ಈ ಗಿರಿ ರಾಜಪುತ್ರಿಯನ್ನು ಭೂತವೆಂದು ಹೇಳುವ ನಿನ್ನ ಮಾತುಗಳಿಂದ, ನನಗೆ ಏನೇನೋ ಅನುಮಾನ ಉಂಟಾಗುತ್ತಿರುವುದು.

ರಾವಣ:– ಕೇಳಿದಿರಾ ನಾರದರೆ? ಆ ಭೂತವೇ ಪಾರ್ವತಿಯಂತೆ. ನನಗೆ ಬುದ್ಧಿ ಕೆಟ್ಟಿರುವುದೋ ಎಂಬ ಶಂಕೆಯಂತೆ ಈ ಶಂಕರನಿಗೆ.–ಹೇಗೆ?

ನಾರದ:– ನನಗಿದರಲ್ಲಿ ವಿಮರ್ಶೆಗೆ ಎಡೆಯೇ ಇಲ್ಲ, — ದೇವಾ ಈ ರಾವಣನ ಬಾಯಿಯನ್ನೊಮ್ಮೆ ಬೇಗನೇ ಮುಚ್ಚಿಸಬಾರದೆ? ಪಾಪ!

ರಾವಣ:– ಶಂಕರಾ! ಕೇಳಿದೆಯೋ ನಾರದರ ವಾಕ್ಯಗಳನ್ನು?

ಶಂಕರ:– ಕೇಳಿದುದು ಮಾತ್ರವಲ್ಲ. ಅರ್ಥವನ್ನೂ ಮಾಡಿಕೊಂಡೆನು. ಈಗೇನು? ಈಕೆಯನ್ನೇ ಪಾರ್ವತಿಯೆಂದು ನಂಬುವುದಾದರೆ ನಂಬು. . ಇಲ್ಲ

ವಾದರೆ. ನನ್ನಿದಿರಿಗೆ ನಿಲ್ಲದೆ ಹೊರಡು. ವ್ಯರ್ಥಾಲಾಪದಿಂದೇನು ಪ್ರಯೋಜನ?

ರಾವಣ:— ಜಾಣ್ಮೆಯ ಮಾತುಗಳೋ ಇವು? ನೀನೆಂದುದನ್ನು ಒಪ್ಪಿಕೊಳ್ಳಲೇ ಬೇಕಲ್ಲವೆ?—ಕೆದರಿದ ಜಡೆ, ಕರಾಳ ಮುಖ, ಕಪಾಲ ಮಾಲಿಕೆ— ಇವುಗಳನ್ನೆಲ್ಲ ಧರಿಸಿ ಭಯಂಕರಾಕಾರದಿಂದಿರುವವಳೇ ಪಾರ್ವತಿ ಅಲ್ಲವೆ? 'ದೇಹೀ' ಎಂದ ಶರಣರ ಕೈಗೆ ಕೊಡಲು ಇಂತಹ ವಸ್ತುಗಳನ್ನು ಮೊದಲೇ ಸಂಗ್ರಹಿಸಿ ಇಟ್ಟುಕೊಂಡಿರುವಿಯೇನು? ಭಲೇ ಭೂತನಾಥಾ! ಒಳ್ಳೆ ಉಪಾಯವಿದು. ಭಿಕ್ಷಾ ಪಾತ್ರವನ್ನು ಹಿಡಿದುಕೊಂಡು, ಮನೆಮನೆ ತಿರಿದುಣ್ಣುವ ನಿನಗೆ ಶರಣುಬಂದ ನಾನೇ ನಿನ್ನ ಅಂಬೋಣದಂತೆ ಬುದ್ಧಿಕೆಟ್ಟವನು ಹೌದು. ದೇಹಧಾರಿಯಾದ ನಿನ್ನ ಪಾದಕ್ಕೆ ಶಿರಬಾಗುವುದರ ಬದಲು "ನಮಃಶಿವಾಯ" ಎಂದು ಒಂದು ಬಂಡೆಕಲ್ಲಿಗೆ ಎರಗಿದ್ದರೆ, ಇಷ್ಟರಲ್ಲೇ ಸರ್ವೇಶ್ವರನಾಗುತ್ತಿದ್ದೆನು. ಹುಂ ಆಗಲಿ! ನನಗೆ ನಿನ್ನ ಈ ಪಾರ್ವತಿಯೂ ಬೇಡ. ನೀನೂ ಬೇಡ. ನಿನ್ನ ಮುಖಾವಲೋಕನವೂ ಕೂಡಾ ನನಗಿನ್ನು ಸಲ್ಲದು! (ವಿಮುಖನಾಗುವನು.)

ಶಂಕರ:—ರಾವಣ! ಏನು ಅಧಿಕಪ್ರಸಂಗವಿದು! ಛೀ! ನಿನ್ನಂಥವರನ್ನು ಮನೆಬಾಗಿಲ ಬೀದಿಯಲ್ಲೂ ಬರಲು ಬಿಡಬಾರದು. ಹುಂ ಹೊರಡು. ಇಲ್ಲವಾದರೆ ಸುಟ್ಟು ಬೂದಿ ಮಾಡಿ ಬಿಡುವೆನು.

ರಾವಣ:—ಶಂಕರಾ! ಬೆದರಿಕೆಯನ್ನು ಹುಟ್ಟಿಸುವುದಕ್ಕೋ ಈ ಮಾತುಗಳು? ಈ ರಾವಣನನ್ನು ನೀನಿನ್ನೂ ಅರ್ಥ ಮಾಡಿ ಕೊಂಡಿಲ್ಲ. ಹಾಗಿದ್ದರೆ ನಿನ್ನ ಕ್ರೋಧವು ನನ್ನನ್ನೇನು ಮಾಡಬಲ್ಲುದು? ನಿನ್ನ ಶಕ್ತಿಯೋ ಮೇಲು? ನನ್ನ ಅಂತರಂಗದ ಭಕ್ತಿಯೋ ಮೇಲು? ಅದನ್ನು ಭವಿಷ್ಯವು ನಿರ್ಣಯಿಸಲಿಕ್ಕಿದೆಯೆಂದು ತಿಳಿ. ಹಾಗೆ ಮಾಡಿದೆನಾದರೆ ನಾನು ರಾವಣ! ನಾನಂತೂ ಹೇಗಾದರೂ ಈಗ ಹೋಗುವವನೇ!—ನಾರದರೇ! ಹೊರಡಿರಿ. ನಮ್ಮಂಥವರಿಗಿಲ್ಲಿ ಸಲ್ಲದು.

ನಾರದ:—ಹೊರಡಯ್ಯಾ. ನಾನು ತಕ್ಷಣವೇ ಬರುವೆನು.

(ರಾವಣನು ಹೋಗುವನು.)

ನಾರದ:—ದೇವಾ! ಈ ಧೂರ್ತನ ಕೈಯಿಂದ ಜಗಜ್ಜನನಿಯನ್ನು ತಪ್ಪಿಸುವ ಯತ್ನದಲ್ಲಿ, ನನ್ನಿಂದೇನಾದರೂ ಅಪರಾಧವಾಗಿದ್ದರೆ ಕ್ಷಮಿಸಬೇಕು.

ಶಂಕರ:—ನಾರದಾ! ಇದರಲ್ಲಿ ಕ್ಷಮಿಸಲಿಕ್ಕೇನಿದೆ? ಎಲ್ಲವೂ ವಿಹಿತವೇ ಆಯಿತು. ದೈವವು ಹೊನ್ನಿನ ಗಟ್ಟಿಯನ್ನಿತ್ತರೂ, ದುರಾತ್ಮನಿಗದು ಮಣ್ಣಿನ ಹೆಂಟೆಯಾಗಿ ಪರಿಣಮಿಸುವುದು. ಅಲ್ಲವೇ ನಾರದಾ?

ನಾರದ:—ಏನೋ! ದೈವಚಿತ್ತ!

ಪಾರ್ವತಿ:—ನಾಥಾ! ಈ ನಾರದನ ತಂತ್ರದಿಂದಲೇ. ನನಗೆ ಪುನಃ ಈ ಪಾವನ ಪಾದಗಳ ಸೇವೆಯ ಭಾಗ್ಯವು ದೊರೆಯಿತು. ನಾರದಾ! ನಿಶ್ಚಿಂತನಾಗಿ ತಿರುಗಾಡುತ್ತಿದ್ದ ನಿನಗೆ ವ್ಯರ್ಥವಾಗಿ ಶ್ರಮವಾಯಿತು, ಪಾಪ!

ನಾರದ:—ಜನನೀ! ನನ್ನಿಂದೇನಾಯಿತು? ಇವೆಲ್ಲವೂ ಆ ವಿಷ್ಣು ಮಾಯಾ ವಿಲಾಸದ ಪ್ರಭಾವವು. ನಿಮಿತ್ತ ಮಾತ್ರವಾಗಿ ನಾನೇನೋ ಸ್ವಲ್ಪಾಂಶವನ್ನು ಪರಿಯಾಜ್ಞೆಯೆಂದು, ಕರ್ತವ್ಯವನ್ನು ಮಾಡಿದೆನಷ್ಟೆ? ನೀವಿದ್ದರೆ ತಾನೆ ನಾವು?—ಇರಲಿ. ಆ ರಾವಣನನ್ನು ನಾನು ಈಗಲೇ ಬಿಟ್ಟು ಬಿಡಬಾರದು. ಸ್ವಲ್ಪ ಕಾಲ ಇವನನ್ನು ಹಿಂಬಾಲಿಸತಕ್ಕದ್ದಿದೆ. ಪ್ರಕೃತ ನನಗೆ ಅಪ್ಪಣೆಯೆ?

ಶಂಕರ ಪಾರ್ವತಿಯರು:—ಅಸ್ತು. ಕಾರ್ಯದಲ್ಲಿ ಜಯವುಂಟಾಗಲಿ.

(ನಾರದನು ಮುಂದೆ ಬರುವನು. ಹಿಂದಿನ ತೆರೆ ಬೀಳುವುದು.)

ನಾರದ:—ಇನ್ನೆಲ್ಲಿಗೆ ಮುಟ್ಟಿದನೋ ಆ ರಾವಣನು? ಹುಂ, ಆಗಲಿ. ಹೇಗೂ ಅವನನ್ನು ಸಂಧಿಸಿಯೇ ಬಿಡುವೆನು.

ಪದ್ಯ ೧೪

ಮೂರನೆಯ ಅಂಕ ಮುಗಿದುದು,

***

ನಾಲ್ಕನೆಯ ಅಂಕ

ಮೊದಲನೆಯ ದೃಶ್ಯ

--- ಗೋದಾವರಿ ತೀರ —

[ಮಂಡೋದರಿ ಸಖಿಯರೊಂದಿಗೆ ಪ್ರವೇಶಿಸಿ.]

ಮಂಡೋದರಿ:—ಸಖಿಯರೇ! ಇಲ್ಲವು. ಇಲ್ಲಿಯೂ ನನಗೆ ಶಾಂತಿಯಿಲ್ಲವು. ಈ ವನದೇವಿಗೂ ಅಂದಿನ ಆ ಪ್ರಶಾಂತತೆಯಿಲ್ಲವು. ಹೇಗೆ ನನ್ನ ಅಂಜಿಕೆಯು ಸತ್ಯವಲ್ಲವೆ? ಈ ಬದಲಾವಣೆಯ ಕಾರಣವನ್ನು ಹೇಳಬಲ್ಲಿರೆ?

೧ನೆ ಸಖಿ:—ದೇವೀ! ಇದಕ್ಕೆಲ್ಲಾ ನಿನ್ನ ಮನಸ್ಸೇ ಕಾರಣವೆಂದು ನನ್ನ ಅಭಿಪ್ರಾಯ. ಸುಖ ದುಃಖ, ಪುಣ್ಯ ಪಾಪ, ಇವುಗಳಿಗೆಲ್ಲಾ ಮನಸ್ಸೇ ಕಾರಣವೆಂದಲ್ಲವೇ ದೊಡ್ಡವರ ಅಂಬೋಣ? ನೀನೀಗ ಮನಸ್ಸಿನ ಶಾಂತಿಯನ್ನು ಕಳಕೊಂಡು, ಒಂದು ತರದ ತಾಪದಿಂದ ಕುದಿಯುತ್ತಿರುವೆಯಾದ್ದರಿಂದ, ಹಿಮದ ಗಟ್ಟಿಯೂ ನಿನಗೆ ಬಿಸಿಯಾಗಿ ಕಂಡರೆ ತಪ್ಪಲ್ಲವು. ಎಂದರೇನೇ ನಿನ್ನ ಪ್ರಶ್ನೆಗೆ ಸಮರ್ಪಕ ಉತ್ತರವಾದೀತಷ್ಟೆ.

ಮಂಡೋದರಿ:—ಹಾಗಿದ್ದರೆ ನಿನ್ನ ದೃಷ್ಟಿಯಲ್ಲಿ ಅಂದಿನ ಸೊಬಗೇ ಇಂದೂ ಈ ವನದೇವಿಗಿದೆಯೆ?

೨ನೆ ಸಖಿ:—ಇಲ್ಲವು ದೇವಿ. ಅಂದಿನ ಆ ವಸಂತಮಾಧವನ ಒಡನಾಟದ ಸೊಬಗೊಂದು ಮಾತ್ರ ಇಂದಿಲ್ಲವು.

೧ನೆ ಸಖಿ:—ನಿಜವಿರಬಹುದು. ಆದರೂ ಅಂದಿಗೆ ಅದು ಸುಖ, ಇಂದಿಗೆ ಇದು ಸುಖ.

ಮಂಡೋದರಿ:—ಹುಂ. ಬಹಳ ಚೆನ್ನಾಯಿತು. ದುಃಖಕ್ಕೂ ಸುಖಕ್ಕೂ ಸಮಾನ ಅರ್ಥವನ್ನು ಕಲ್ಪಿಸುವೆಯಾ? ಸಖಿ! ಹಾಗಿದ್ದರೆ ನಿನ್ನ ಭಾವನೆಯಲ್ಲಿ ದುಃಖವೆಂಬ ಶಬ್ದವೇ ಇಲ್ಲವೆ? ಬಹುದೊಡ್ಡ ಪಂಡಿತೆಯಾಗಿ ಬಿಟ್ಟಿರುವೆ ನೀನು ವೇದಾಂತದಲ್ಲಿ.

(ನಾರದನ ಪ್ರವೇಶ. ಇವರನ್ನು ನೋಡಿ—ಸ್ವಗತ.)

ನಾರದ:—ಹುಂ. ಸರಿಯಾದ ಸಂಧಿಯೇ ದೊರಕಿತು. ರಾವಣನ ಹುಚ್ಚಿಗೆ ಯೋಗ್ಯ ಔಷಧಿಯು ಅನಿರೀಕ್ಷಿತವಾಗಿ, ಅನಾಯಾಸದಿಂದ ಕಾಲ ಬುಡದಲ್ಲೇ ಸಿಕ್ಕಿದಂತಾಯಿತಲ್ಲಾ! (ಪ್ರ) ಓಹೋ! ಇದಾರು?

ಸ್ತ್ರೀಯರೆಲ್ಲರೂ:—ಪೂಜ್ಯರೇ! ಆಶೀರ್ವದಿಸಬೇಕು. (ಶಿರಬಾಗುವರು.)

ನಾರದ:—ನಾರಾಯಣ! ಮತ್ತೊಮ್ಮೆ ಬಂದಿರುವಿರಲ್ಲಾ ನೋಡಿ. ಕೊಂಡು ಹೋಗಲು! ಆಗಲಿ, ಮನೋರಥ ಸಿದ್ಧಿರಸ್ತು.

ರಾವಣ:—(ಅವಸರವಾಗಿ ಪ್ರವೇಶಿಸುತ್ತಾ) ನಾರದರೇ!----(ಸ್ತ್ರೀಯರನ್ನು ಕಂಡು ಅವರನ್ನೇ ನೋಡಲು ತೊಡಗುವನು. ಮಂಡೋದರಿಯು ಕದ್ದು ನೋಡುತ್ತಿರುವಳು.)

ಸ್ತ್ರೀಯರೆಲ್ಲರೂ:—ದೇವರ್ಷಿ, ನಾವು ಹೋಗಿ ಬರುವೆವು.

ನಾರದ:—ಹುಂ, ಹೋಗಿರಿ. (ಸಖಿಯರೂ ಮಂಡೋದರಿಯೂ ಹೋಗುವರು. ಮಂಡೋದರಿಯು ಎಡವಿದಂತೆ ನಟಿಸಿ, ನೆವನದಿಂದ ರಾವಣನನ್ನು ನೋಡುತ್ತಾ, ನೋಡುತ್ತಾ ಹೋಗುತ್ತಿರುವಳು.)

ನಾರದ:—(ಕಪಟ ಕ್ರೋಧದಿಂದ) ರಾವಣಾ! ನಿನ್ನಂಥಹ ತಾಳ್ಮೆಕೆಟ್ಟ ಜೀವಿಯನ್ನು ನಾನು ಎಲ್ಲೂ ಕಂಡಿಲ್ಲ. ಇಲ್ಲವಾದರೆ ಸ್ವಲ್ಪಹೊತ್ತು ಮನಸ್ಸನ್ನು ಕಲ್ಲುಮಾಡಿ, ಅಲ್ಲೇ ಕುಳಿತಿದ್ದರೆ ಏನಾಗುತ್ತಿತ್ತಯ್ಯಾ ನಿನಗೆ? ಇಷ್ಟರಲ್ಲಿ ಒಂದು ರಸಾಭಾಸ ಮಾಡಿಬಿಟ್ಟೆಯಲ್ಲಾ?

ರಾವಣ:—ನಾರದರೇ! ನಿಮ್ಮ ರಸವೋ ಆಭಾಸವೋ ನನಗೊಂದೂ ತಿಳಿಯದು. ಆ ಶಂಕರನು ಮಾಡಿದ ಮೋಸಕ್ಕೆ ಪ್ರತಿಕ್ರಿಯೆ ಮಾಡದೆ ನನಗೆ ನೆಮ್ಮದಿಯೂ, ಸಹನೆಯೂ ಇಲ್ಲವು.

ನಾರದ:—ಅದು ಸರಿಯಯ್ಯಾ! ಆದರೆ ಇಲ್ಲಿಗೆ ಇಷ್ಟರಲ್ಲಿ ನೀನು ಬಂದುದು ಮಾತ್ರ ಸರಿಯಾಗಲಿಲ್ಲ ನೋಡು.

ರಾವಣ:—ದೇವರ್ಷಿ, ನನ್ನನ್ನು ಆ ಮರದಡಿಯಲ್ಲಿ ಕುಳ್ಳಿರ ಹೇಳಿ ಹೊರಟು ಬಂದ ತಮ್ಮನ್ನೇಕೆ ಕಾಣುವುದಿಲ್ಲವೆಂದು ಹುಡುಕುತ್ತಾ ಬರುವಷ್ಟರಲ್ಲಿ ಕೆಲಜನ ಸ್ತ್ರೀಯರೊಂದಿಗೆ, ನೀವಿದ್ದುದು ಭಾಸವಾಯಿತು. ಶೀಘ್ರವೇ ನಾನೀ ಕಡೆಗೆ ಧಾವಿಸಿದುದರಿಂದ ನಿಮಗೆ ಆಭಾಸವೂ ಆಯಿತು. ನಾನೇನು ಮಾಡಲಿ?

ನಾರದ:—ನನಗೇನಯ್ಯಾ ರಾವಣ? ಆಭಾಸವೂ ಇಲ್ಲ, ಆವೇಶವೂ ಇಲ್ಲ. ನೀನು ಬಂದುದರಿಂದ ನಿನಗೇ ಮೋಸವಾಯಿತು ಅಷ್ಟೆ.

ರಾವಣ:—ಅದಿರಲಿ. (ವಿನಯದಿಂದ) ಸ್ವಾಮಿ! ಆ ಸ್ತ್ರೀಯರು ಯಾರು?

ನಾರದ:—ಉಳಿದವರು ಸಖಿಯರು. ಆದರೆ ಅವರ ಮಧ್ಯದಲ್ಲಿದ್ದವಳು

ರಾವಣ:—ಹಂ! ಆ ಮಿಂಚಿನ ಬಳ್ಳಿಯು!—ಆಕೆ ಯಾರು ನಾರದರೇ?

ನಾರದ:—ಅವಳೇ ನೀನು ಬಯಸಿದ ಆ----

ರಾವಣ:—ಹಾಂ? ಪಾರ್ವತಿ! ಆ ಶಿವನ ಸತಿ??

ನಾರದ:—ಅಹುದು. ಆ ಶಿವಸತಿ! ಗಿರಿಪುತ್ರಿ!

ರಾವಣ:—ಅಯ್ಯೋ ನಾರದರೇ! ಅವಳನ್ನು ನೀವು ಇಷ್ಟರಲ್ಲೇ ಬಿಟ್ಟುದು ಸರಿಯಾಗಲಿಲ್ಲವಲ್ಲ!

ನಾರದ:—ಅದಕ್ಕೇ ಹೇಳಿದೆನು. ನೀನು ಇಷ್ಟರಲ್ಲೇ ಬಂದುದು ಸರಿಯಾಗಲಿಲ್ಲವೆಂದು. ಹೇಗಾದರೂ ಯುಕ್ತಿ ಪ್ರಯುಕ್ತಿಗಳಿಂದ ಸಖಿಯರನ್ನೂ ಆಕೆಯನ್ನೂ ಬೇರ್ಪಡಿಸಿ, ಮೆಲ್ಲಗೆ ಅವಳೋರ್ವಳನ್ನೇ ನೀನಿದ್ದಲ್ಲಿಗೆ ಕರಕೊಂಡು ಬಂದು, ನಾನು ಅದೃಶ್ಯನಾಗಿ ಬಿಟ್ಟರೆ---ಎಂದೆಲ್ಲಾ ನಾನು ಮನಸ್ಸಿನಲ್ಲೇ ಗುಣಿಸಿ, ಅವಳೊಡನೆ ಹೀಗೇ ಹರಟೆ ಹೊಡೆಯಲು ತೊಡಗಿದ್ದೆನಷ್ಟೆ! ಆದರೆ ದೈವಹೀನನಾದ ನೀನು ಅವಸರವಾಗಿ ಬಂದುಬಿಟ್ಟೆ. ಇಷ್ಟಾಗುವಾಗ ಆ ಸ್ತ್ರೀಯರೆಲ್ಲ ಹೊರಟೇ ಬಿಟ್ಟರು. ನಿನ್ನನ್ನು ಕಂಡರೆ ಅವರು ಎಂದಾದರೂ ನಿತ್ತಾರೆ?

ರಾವಣ:—ಪೂಜ್ಯರೆ! ಕಾರ್ಯವು ಮಿಂಚಿಹೋಯಿತು. ಆದರೂ ಪಾರ್ವತೀ ಪ್ರಾಪ್ತಿಗಾಗಿ ಮುಂದೆಯೂ ಯತ್ನಿಸಲೇ ಬೇಕು. ಅದಕ್ಕೆ ಏನು ಮಾಡೋಣ ನಾರದರೆ?

ನಾರದ:—ರಾವಣಾ! ಮಾಡೋಣ ಅರಣ್ಯರೋದನ!! ಅಂತೂ ನಿನ್ನ ಸಹವಾಸವು ಸಾಕಾಗಿ ಹೋಯಿತು ನನಗೂ. ಶನಿಯು ವಿಷಮ ಸ್ಥಾನದಲ್ಲಿ ನಿಂತು ಜನರನ್ನು ಊರೂರು ಸುತ್ತಾಡಿಸಿ, ಬಳಲಿಸುವಂತೆ, ಪುಣ್ಯಾತ್ಮ ನೀನೊಬ್ಬ ನನಗೆ ಗಂಟು ಬಿದ್ದು, ಕಲ್ಲು ಮುಳ್ಳುಗಳನ್ನು ತುಳಿಸಿ, ಮನೆ ಮನೆ ತಿರುಗಿಸಿ, ದಣಿಸಿದೆ. ಆದರೂ ಚಿಂತೆಯಿದ್ದಿಲ್ಲ ನಿನ್ನ ಇಷ್ಟವಾದರೂ ಕೈಗೂಡಿದ್ದರೆ!—ಆಯಿತು. ಶಿವನ ಅರಸಿ ಎಲ್ಲಿರುವಳೆಂದು ಅರಸಿ, ಅರಸಿ, ಕೊನೆಗೆ ಪೂರ್ವಪುಣ್ಯದಿಂದ ಅವಳೀಗ ಕಣ್ಣಿಗೆ ಬಿದ್ದಳೆನ್ನುವಾಗ ಅಲ್ಲಿಗೂ ಬಂದೆಯಲ್ಲಾ ನೀನು ಏಳೂವರೆ ಶನಿಯಂತೆ!—ಆದುದರಿಂದ ಮಹಾರಾಯಾ! ದಯಮಾಡಿ ಒಮ್ಮೆ ಒಪ್ಪಿ ಬಿಡು. ನಾನು ನನ್ನಷ್ಟಕ್ಕೆ ಇದ್ದುಬಿಡುತ್ತೇನೆ.

ರಾವಣ:—ನಾರದರೇ ಪ್ರಮಾದದಿಂದ ಅಪರಾಧವಾಯಿತು. ಕ್ಷಮಿಸಿರಿ ತಾವೂ ಕೈಬಿಟ್ಟರೆ ನನ್ನ ಗತಿಯೇನು? ನೀವೇ ನನ್ನ ದೈವವು. ದೇವರ್ಷೀ ಶರಣು! ನೀವೇ ನನ್ನನ್ನು ಅನುಗ್ರಹಿಸಿ, ಉದ್ಧರಿಸಬೇಕು. (ಕರ ಜೋಡಿಸುವನು.)

ನಾರದ:—ಬೇಡವಯ್ಯಾ ರಾವಣ! ಬೇಡ. ನಿನ್ನಂಥವರು ಎಷ್ಟಾದರೂ ಅಷ್ಟೆ. ಘಟಿಯಂತ್ರವು ತಲೆಬಾಗಿದರೂ ನೀರು ಸಿಕ್ಕಿದ ಕೂಡಲೇ ಮೇಲಕ್ಕೇಳುವುದು ಸ್ವಾಭಾವಿಕವಷ್ಟೆ? ನಿನ್ನಂಥವರ ಅವಸ್ಥೆಯೂ ಅಷ್ಟೆ. ಆದುದರಿಂದ ನಾನು ನಿನಗೆ ದೈವವಾಗುವುದೂ ಬೇಡ ನೀನು ನನ್ನ ಭಕ್ತನಾಗುವುದೂ ಬೇಡ.

ರಾವಣ:—ಸ್ವಾಮಿ! ತಾವು ಹೀಗೆನ್ನಲಾಗದು. ನಾನು ಸರ್ವಸ್ವ ನೀವೆಂದು ನಂಬಿರುವೆನು.

ನಾರದ:—ರಾವಣಾ! ಆದರೆ ನಾನು ಬಾಲಬ್ರಹ್ಮಚಾರಿ ಎಂಬುದನ್ನು ಮಾತ್ರ ಮರೆಯಲಾರೆಯಷ್ಟೆ? ಆ ಮೇಲೆ ಹಾಗೆ-ಹೀಗೆ ಎಂದರೆ ಮಾತ್ರ?----

ರಾವಣ:—ಛೆ! ಎಂದಿಗೂ ಇಲ್ಲ.

ನಾರದ:— ಹಾಗಿದ್ದರೆ ಕೇಳು. ಶಿವನೆಂಥಹ ಮಾಯಾವಿ ಎಂಬುದನ್ನು ನೀನೇ ಪ್ರತ್ಯಕ್ಷ ಅನುಭವದಿಂದ ತಿಳಿದಿರುವೆಯಷ್ಟೆ? ಶೈವನಾದವನು ಯಾವ ಕಾಲಕ್ಕೂ ವೈಷ್ಣವನ ಮನೆಯನ್ನು ತುಳಿಯನೆಂಬ ಭಾವನೆಯಿಂದ ಪಾತಾಳದಲ್ಲಿ ವಿಷ್ಣುಭಕ್ತನಾದ ಮಯಾಸುರನ ಗೃಹದಲ್ಲಿ ಪಾರ್ವತಿಯನ್ನು ಮರೆಸಿಟ್ಟು ನಿಶ್ಚಿಂತನಾಗಿರುವನು. ಇದನ್ನು ನಾನೀಗ ತಿಳಿದಿರುವೆನು. ಆದರೆ---

ರಾವಣ:—ಆದರೇನು?

ನಾರದ:—ರಾವಣಾ! ಶಿವನ ಉಪದೇಶವು ಪಾರ್ವತಿಗೂ—ಮಯಾಸುರನಿಗೂ ಚೆನ್ನಾಗಿ ಆವಂತಿರುವುದು.

ರಾವಣ:—ಅಂದರೆ?

ನಾರದ:—ಅಂದರೆ, ಆಕೆಯು ಈಗ ತನ್ನ ಹೆಸರು ಮಂಡೋದರಿ ಎಂದೆನ್ನುತ್ತಿರುವಳು. ಪಾರ್ವತಿ ಎಂದು ಯಾವಾಗಲೂ ಒಪ್ಪಿಕೊಳ್ಳುವುದೇ ಇಲ್ಲ. ಮಯಾಸುರನೂ "ತನ್ನ ಮಗಳೇ ಈಕೆ"ಯೆಂದು ಹೇಳುತ್ತಿರುವನೇ ಹೊರತು ನಿಜಾಂಶವನ್ನು ಹೊರಗೆಡಹುವುದಿಲ್ಲ. ಇದು ಆ ಶಂಕರನ ಉಪದೇಶ ಪ್ರಭಾವ. ಆದುದರಿಂದ ಅವಳೀಗ ಪಾರ್ವತಿಯಲ್ಲ. ಮಯಪುತ್ರಿ ಮಂಡೋದರಿ. ಇನ್ನು ಮುಂದೆ ವ್ಯವಹಾರದಲ್ಲೂ ಮಂಡೋದರಿಯೇ ಆಕೆ. ಈ ವಿಷಯವನ್ನು ಮಾತ್ರ ಚೆನ್ನಾಗಿ ನೀನು ನೆನಪಿನಲ್ಲಿಟ್ಟುಕೊಳ್ಳಬೇಕು. ತಿಳಿಯಿತೆ?

ರಾವಣ: – ಎಲ್ಲವೂ ತಿಳಿಯಿತು. ಹಾಗಿದ್ದರೆ, ಇನ್ನು ಸಾವಕಾಶವೇಕೆ? ಈಗಲೇ ಪಾತಾಳಕ್ಕೆ ಹೋಗಿ, ಆ ಮಯನನ್ನು ಸೆರೆಹಿಡಿದು, ಆ ಪಾರ್ವತಿಯನ್ನು ----

ನಾರದ: — ಹಾಂ?

ರಾವಣ: — ಅಲ್ಲಲ್ಲ! ಆ ಮಂಡೋದರಿಯನ್ನು, ತಂದೇ ತೀರೋಣ.

ನಾರದ: — ರಾವಣಾ! ಹೀಗೆ ದುಡುಕುವ ಸ್ವಭಾವ ಕೆಟ್ಟದು. "ನಿಧಾನ" ವೆಂಬ ಶಬ್ದವನ್ನು ಅವಸರದಿಂದ ನುಡಿದರೆ ಅದು "ನಿಧನ"ವೆಂದು ರೂಪಾಂತರ ಹೊಂದುವುದಷ್ಟೆ! ಆದುದರಿಂದ ಸಮಾಧಾನದಿಂದ ಆಲೋಚಿಸಿ; ಕಾರ್ಯಕ್ಕೆ ಕೈಹಚ್ಚಬೇಕು ಆರಂಭ ಶೂರತನದಲ್ಲಿ ಏನಿದೆ ಜಾಣ್ಮೆ? ಕಾರ್ಯಾಂತ್ಯದಲ್ಲಿ ಪಡೆಯಬೇಕು ಮೇಲ್ಮೆ. ಇದೀಗ ಸರಿಯಾದ ದಾರಿ. ಸ್ವಲ್ಪ ಸೈರಿಸು. ಮೊದಲು ನಾನು ಮಯಾಸುರನ ಆಸ್ಥಾನವನ್ನು ಪ್ರವೇಶಿಸಿ, ಸಾಮೋಪಾಯದಿಂದ ಆಕೆಯನ್ನು ನಿನ್ನ ಸ್ವಾಧೀನಪಡಿಸಲು ಬರುವುದೋ ಹೇಗೆಂದು ನೋಡುವೆನು. ಅದು ಸಾಧಿಸದಿದ್ದರಲ್ಲವೇ ನಿನ್ನ ದಂಡೋಪಾಯದ ಅವಶ್ಯಕತೆಯು? ರಾವಣಾ! ನೀನು ಸ್ವಲ್ಪ ಹಿಂದಾಗಿ ಬಾ. ಆದರೆ ಮಂಡೋದರಿ ಎಂದೇ ಅಲ್ಲಿ ಹೇಳುತ್ತಿರಬೇಕೇ ವಿನಹ ಎಲ್ಲಾದರೂ ಅಪ್ಪಿತಪ್ಪಿ——

ರಾವಣ: – ಛೆ! ಹಾಗೆಂದಿಗೂ ಆಗದು. ಮಂಡೋದರಿ ಎಂದೇ ಹೇಳೋಣ. ಆಕೆಯು ದೊರೆತ ಮೇಲೆ ಪಾರ್ವತಿ ಎಂದೋ ಹೈಮಾವತಿ ಎಂದೋ ಬೇಕಾದಂತೆ ಸಂಬೋಧಿಸಿಕೊಳ್ಳ ಬಹುದಷ್ಟೆ! ಹೆಸರಲ್ಲೇನಿದೆ? ಹೇಗಾದರೂ ಆಕೆ ನನಗೆ ದೊರೆತರೆ ಸರಿ. ಅಷ್ಟು ಮಾಡಿರಿ.

ನಾರದ: — ಸರಿ. ಹಾಗಿದ್ದರೆ ನಾನಲ್ಲಿಗೆ ಹೋಗುವೆನು. ಸ್ವಲ್ಪ ಹೊತ್ತಿನಲ್ಲಿ ನೀನೂ ಬಂದು ಬಿಡು. ಮುಂದೆ ಎಲ್ಲವೂ ಸರಿ ಹೋಗುವುದು.

ರಾವಣ: — ಅಪ್ಪಣೆಯಂತಾಗಲಿ.

ನಾರದ: — ಆದರೆ ಮಾತ್ರ, ಈ ಬೈರಾಗಿ ವೇಷವನ್ನು ಕಟ್ಟಿಕೊಂಡು ಬರಬೇಡ!

ರಾವಣ: — ಆಗಲಿ. ನಿಜವಾದ ವೇಷಭೂಷಣಗಳಿಂದಲೇ ಬರೋಣ. ಅದಕ್ಕೇನು? ಕಾಮರೂಪಿಗಳಲ್ಲವೇ ನಾವು?

ನಾರದ:—ಭಲೇ! ಹಾಗಿದ್ದರೆ----

ರಾವಣಾ:—ತಾವು ಹೊರಡಿರಿ.

ನಾರದ:—ಆಗಲಿ-(ಮುಂದೆ ಬರುವನು. ಹಿಂದಿನ ತೆರೆ ಬೀಳುವುದು) ನಾರಾಯಣ! ಈ ರಾವಣನ ಹುಚ್ಚಿದು ಸಾಮಾನ್ಯ ವೈದ್ಯರಿಂದ ನಿವಾರಿಸಲು ಬರುವಂಥಹುದಲ್ಲ. ಪ್ರಕೃತ ಮದ್ದನ್ನು ಅರಿದಾಯಿತು. ಕುಡಿಸಲಿಕ್ಕೆ ಸ್ವಲ್ಪ ಕಾಲ ಮಾತ್ರ ಉಳಿದಿದೆ. ಅಷ್ಟಾದರೆ ಈತನ ತಲೆತಿರುಗುವಿಕೆಯು ನಿಲ್ಲು ವುದು. ನನಗೂ ಈ ತಿರುಗುವಿಕೆಯು ಸ್ವಲ್ಪ ಕಡಿಮೆಯಾಗುವುದು. ಮಯಾ ಸುರನಲ್ಲಿಗೆ ಹೋಗಿ, "ನಿನ್ನ ಪುತ್ರಿಯಾದ ಮಂಡೋದರಿಯನ್ನು ಲಂಕೇಶ್ವರ ನಿಗೆ ಕೊಟ್ಟು ಲಗ್ನ ಮಾಡಿ ಬಿಡು" ಎಂದರಾಯಿತು. ಆತನು ಕೊಟ್ಟೇ ಬಿಡು ವನು. ಮಂಡೋದರಿಯಂತೂ ಮನಸಾ ರಾವಣನನ್ನು ಪ್ರೀತಿಸುತ್ತಲೇ ಇರುವಳು. ರಾವಣನನ್ನು, ಆಕೆಯೇ ಪಾರ್ವತಿಯೆಂದು ಒಪ್ಪಿಸಿಯೂ ಆಯಿತು-ಇನ್ನೇನು? ಎಲ್ಲವೂ ಬೇಕಾದಂತೆಯೇ ಆಗುವುದು. ನಾರಾಯಣಾ!

ಪದ್ಯ ೧೫

ಸರಿ. ಇನ್ನು ಮುಂದಿನ ವಿಷಯಕ್ಕೆ ಕೈ ಹಚ್ಚೋಣ: (ಹೋಗುವನು)

ಎರಡನೆಯ ದೃಶ್ಯ

ಮಯನ ದರ್ಬಾರ್

[ಮಯನೂ, ನಾರದನೂ ಕುಳಿತುಕೊಂಡು ಮಾತಾಡುತ್ತಿರುವರು.]

ನಾರದ:—ದೈತ್ಯರಾಜಾ! ನಿನ್ನ ಆತಿಥ್ಯದಿಂದ ಅತ್ಯಾನಂದವಾಯಿತು.

ಮಯ:—ಧನ್ಯನಾದೆನು.

ನಾರದ:—ಮಯಾಸುರನೇ! ಬಾಲ್ಯದಲ್ಲಿ ಜನಕನಿಂದಲೂ, ಯವ್ವನ ದಲ್ಲಿ ಪತಿಯಿಂದಲೂ, ಮುಪ್ಪಿನಲ್ಲಿ ಮಕ್ಕಳಿಂದಲೂ, ಪಾಲಿಸಲ್ಪಡಬೇಕಾಗಿದ್ದ ಸತ್ಕುಲ ಪ್ರಸೂತೆ, ನಿನ್ನ ಜಾತೆಯು ಪತಿಗೃಹವನ್ನು ಸೇರುವ ಕಾಲವು ಬಂದಿ ದ್ದರೂ, ಆ ಕಡೆಗೆ ನೀನಿನ್ನೂ ಉದಾಸೀನನಾಗಿಯೇ ಇರುವೆಯಲ್ಲಾ? ಅದೇಕೆ ಹಾಗಾಯಿತು?

ಮಯ:—ಮಹರ್ಷೀ ಉದ್ದೇಶ ಪೂರ್ವಕನಾಗಿ ನಾನು ಉದಾಸೀನ ನಾದುದಲ್ಲ. ಜಗತ್ತಿನಲ್ಲಿ ಗೋಪಾಲಾದಿ ಭೂಪಾಲಾಂತ ಕನ್ಯಾಪಿತೃತ್ವಪ್ರ

ನಗಳ ಕಷ್ಟದಾಯಕವಾದುವಲ್ಲವೆ? ಕುಲಗೋತ್ರ ವಿದ್ಯಾಬುದ್ಧಿಗಳಲ್ಲಿ ಸಮ ಯುಳ್ಳವರಲ್ಲೇ ನಡೆಯ ಬೇಕಲ್ಲವೇ ಬಾಂಧವ್ಯವು? ಈ ಕಟ್ಟಳೆಯ ಕಟ್ಟಿಗೊ ಳಪಟ್ಟು ನಾನೂ ಕುವರಿಯನ್ನು ಅವಿವಾಹಿತೆಯನ್ನಾಗಿಯೇ ಉಳಿಸ ಬೇಕ ಾಯಿತು.

ನಾರದ:—ದೈತ್ಯೇಂದ್ರಾ! ನೀನೀ ವಿಷಯದಲ್ಲಿ ದೀರ್ಘಾಲೋಚ ಮಾಡಿದುದು ಸಾಕಾಗಲಿಲ್ಲ. ನಿನಗೆ ಲಂಕೇಶ್ವರನ ನೆನಪು ಬಂದಿಲ್ಲವೇನು?

ಮಯ:—ಬಂದಿತ್ತು. ಆದರೆ,—

ನಾರದ:—ಏನು ಆತನು ಒಪ್ಪದೆ ಹೋದನೆ?

ಮಯ:—ಹಾಗಲ್ಲ, ನಾವು ವೈಷ್ಣವರು. ಆತನು ಶೈವನು.

ನಾರದ:—ಇದೇನಯ್ಯಾ ಮಯನೇ! ಜನಸಾಮಾನ್ಯರಂತೆ ಈ ರೀತಿಯ ಸಂಕುಚಿತ ಭಾವವು ನಿನ್ನಲ್ಲೂ ಇದೆಯೆ? ಈ ತರದ ಜಾತೀಯತೆಯು ಪ್ರತಿ ಯಿಂದಲೇ ಲೋಕವು ಹಾಳಾಯಿತು. ಶೈವರಲ್ಲೇನು ಕಡಿಮೆಯೋ! ವೈಷ್ಣ ರಲ್ಲೇನು ಹೆಚ್ಚಿನ್ನೇ ತಿಳಿಯದು ಅಸುರಾಧಿಪಾ! ಈ ಹೋರಾಟದಲ್ಲಿ ಯಾರ ಈ ವರೆಗೆ ಉದ್ಧಾರವಾದುದು ನನ್ನ ತಿಳುವಳಿಕೆಯಲ್ಲಿಲ್ಲ. ಜಗತ್ತಿಗೆಲ ದೇವರು ಒಬ್ಬನೇ ಆದಾಗ, ಅವನ ಮಕ್ಕಳಾದವರಲ್ಲಿ ಶೈವ ವೈಷ್ಣವಾದಿ ಭ ತ್ವಕ್ಕೆ ಎಡೆ ಎಲ್ಲಿ? ಸುಮ್ಮನೇ ಆ ಜಾತಿ ಈ ಜಾತಿ, ಎಂದು ಗೊಂದಲ ಹಚ್ಚ ವಿಜಾತೀಯ ಪದ್ಧತಿಗೆ ಸೇರದೆ, ಮಹಾತ್ಮರ ದಾರಿಯಲ್ಲಿ ಹೆಜ್ಜೆಯನ್ನೇಕೆ ಹಾಕದು ನೀನು?

ಮಯ:—ದೇವರ್ಷಿ ತಮ್ಮ ಉಪದೇಶದಿಂದ ನನ್ನ ಅಜ್ಞಾನವು ದೂ ರಾಯಿತು. ಆದರೆ ಆ ಲಂಕೇಶ್ವರನಿಗೂ ಈ ತಿಳುವಳಿಕೆ ಬರಬೇಕಲ್ಲಾ?

ನಾರದ:—ಅವನಿಗೆ ಈ ತಿಳುವಳಿಕೆಯನ್ನು ನಿನ್ನ ಮಗಳ ಸೌ ದರ್ಯವೇ ಮಾಡಿಕೊಡ ಬಲ್ಲದು—ಏಕೆ? ಮಾಡಿಕೊಟ್ಟೇ ಇರುವುದು.

ಮಯ:—ಏನು? ಮಂಡೋದರಿಯನ್ನು ಆತನು ಈ ನೋವಲೇ ಯುವನೆ?

ನಾರದ:—ಇನ್ನೇಕಯ್ಯಾ ಗುಟ್ಟು, ನನಗೆ ಗೊತ್ತಿರುವಷ್ಟನ್ನೂ ಹೇ ಳುವೆನು ಕೇಳು. ಕೆಲದಿನಗಳ ಮೊದಲು, ಏನೋ ದೈವಯೋಗದಿಂದ, ಗ ಹಾನದೀ ತೀರದಲ್ಲಿ ರಾವಣನಿಗೂ ನಿನ್ನ ಮಗಳಿಗೂ ಭೇಟಿಯಾಯಿತು.

ಎಲ್ಲಿಂದ ಎಲ್ಲಿಗೋ ಹೋಗುತ್ತಿದ್ದ ನಾನೂ ದೈವಪ್ರೇರಣೆಯಿಂದ ಇಲ್ಲಿಗೆ ಬಂದೆ. ಇಷ್ಟರಲ್ಲೇ ಸಖೀ ಸಮೇತಳಾದ ಮಂಡೋದರಿಯು ಆ ಪ್ರದೇಶದಿಂದ ಹೊರಟು ಬಿಟ್ಟಳು. ರಾವಣನಂತೂ ಅಂದಿನಿಂದ ನಿನ್ನ ಕುಮಾರಿಯ ಪಾಣಿಗ್ರಹಣ ಫಲಪ್ರಾಪ್ತಿಗಾಗಿ ನನ್ನ ಬೆನ್ನು ಬಿಟ್ಟಿಲ್ಲ. ಮಂಡೋದರಿಗೂ ಅಂದಿನಿಂದ ಚಿತ್ತ ಸ್ವಾಸ್ಥ್ಯವಿಲ್ಲ.

ನಾರದ:—ಪೂಜ್ಯರೇ! ಹಾಗಿದ್ದರೆ ಇದು ಇನ್ನೂ ನನ್ನ ಅವಗಾಹನೆಗೆ ಏಕೆ ಬಂದಿಲ್ಲ?

ನಾರದ:—ನೀನು ಇನ್ನೂ ನಿನ್ನ ಬುದ್ಧಿಯನ್ನು ಆ ಕಡೆಗೆ ಹರಿಯಲು ಬಿಟ್ಟಿಲ್ಲ. ಇನ್ನಾದರೂ ಮನಸ್ಸಿನಲ್ಲಿ ಒಂದಾದ ಆ ಅವಿವಾಹಿತರು ವಿಧ್ಯುಕ್ತವಾಗಿ ಒಂದಾಗಲಿ.

ಮಯ:—ಅವಶ್ಯವಾಗಿಯೂ ಹಾಗೆಯೇ ಆಗಲಿ.

(ರಾವಣನು ಪ್ರವೇಶಿಸುವನು.)

ಮಯ:—ದಾನವ ಚಕ್ರವರ್ತಿಗೆ ಶುಭಾಗಮನವು ಈ ಪೀಠವನ್ನಲಂಕರಿಸಬೇಕು.

ರಾವಣ:—ಸಂತೋಷ. (ಕುಳಿತು) ಯಾರಿದು ನಾರದರೋ!

ನಾರದ:—ಏನಯ್ಯಾ ರಾವಣ! ಈಗಲೇ ಇಷ್ಟಕ್ಕೂ ಮುಟ್ಟಿತೆ? ಮಯಪುತ್ರಿಯು ನಿನಗೆ—

ರಾವಣ:—ಅಲ್ಲ ನಾರದರೇ ಪರ್ವತ ಪು----

ನಾರದ:—(ಸನ್ನೆಯಿಂದ ಹೆದರಿಸುವನು. ರಾವಣನು ಗಾಬರಿಯಿಂದ ನಾಲಿಗೆ ಕಚ್ಚುವನು.) ಮಯಪುತ್ರಿಯು ನಿನಗೆ ಪತ್ನಿಯಾಗುವಳೆಂದು ನಿಶ್ಚಯವಾದಾಗಲೇ ನಿನ್ನ ಕಣ್ಣುಗಳಿಗೆ ಹೀಗೆ ಪ್ರಕಾಶವು ಕಡಿಮೆಯಾದರೆ, ಪತ್ನಿಯಾದ ಮೇಲಂತೂ ಸಂಪೂರ್ಣ ಕುರುಡೇ ಆಗಿ ಬಿಡುವುದಲ್ಲಾ? ಏನಯ್ಯಾ, ಲೋಕವೇ ಮರೆತು ಹೋಯಿತೋ?

ರಾವಣ:—ಇಲ್ಲ ನಾರದರೇ ತಪ್ಪಾಯಿತು. ಕ್ಷಮಿಸಬೇಕು.

ನಾರದ:- ಸರಿಯಾಯಿತು. ಇದು ನಿತ್ಯಾಭ್ಯಾಸವಾಗಿ ಹೋಗಿದೆ ನಿನಗೆ. ತಪ್ಪು ಮಾಡುವುದು, ಆ ಮೇಲೆ ಕ್ಷಮೆಯಾಚಿಸುವುದು— ಅಲ್ಲವೆ?

ರಾವಣ:- ಖಂಡಿತವಾಗಿಯೂ ಇನ್ನು ಎಚ್ಚರತಪ್ಪೆನು.

ಮಯ:—ದೇವರ್ಷಿ! ಏನೋ ಬರುವ ಭರಕ್ಕೆ ತಾವು ಲಕ್ಷಕ್ಕೆ ಬರಲಿಲ್ಲ. ಅದಕ್ಕಾಗಿ ಈ ನನ್ನ ಬಂಧುವಿನಲ್ಲಿ ತಾವು ಆಗ್ರಹ ಮಾಡಲಾಗದೆಂದು ನನ್ನ ಪ್ರಾರ್ಥನೆ.

ನಾರದ:—ಚೆನ್ನಾಯಿತು. ಈಗಲೀ ಈರ್ವರೂ ಒಂದಾದಿರಲ್ಲ! ಜಗತ್ತಿನ ಹಣೆಬರಹವೇ ಹೀಗೆ. ಯಾರ ಮನೆಯಲ್ಲಿ ಹುಟ್ಟಿದ ಹೆಣ್ಣೋ, ಯಾವ ಊರ ಗಂಡೋ! ಮದುವೆಯ ಮಂಟಪದಲ್ಲಿ ತಮ್ಮ ಹೆಣ್ಣು ಆತನಿಗೆ ಮಾಲೆಯನ್ನು ಹಾಕಿದಳೋ ಇಲ್ಲವೋ, ಆ ಕ್ಷಣದಲ್ಲಿ ಅವನು ಆ ಹೆಣ್ಣಿನ ಕಡೆಯವರಿಗೆ ಅತ್ಯಂತ ಹತ್ತಿರದವನಾಗುವನು. ಆ ಮನೆಯೇ ಅವನದಾಗುವುದು. ಆ ಸ್ತ್ರೀಯ ತಾಯಿ ತಂದೆ ಬಂಧು ಬಳಗದವರಿಗೆ ಪ್ರತ್ಯಕ್ಷ ದೇವ ಸಮಾನನೇ ಆತನಾಗುವನು. ಅರೆಗಳಿಗೆಯ ಮೊದಲು ಪರಕೀಯನಾದವನು ಕ್ಷಣದಲ್ಲಿ ಸ್ವಕೀಯನಾಗುವ ಈ ಬದಲಾವಣೆಗೇನೆನ್ನಬೇಕೋ ತಿಳಿಯದು. ಹೀಗೆ ಮಾರ್ಪಾಟು ಹೊಂದುವ ಹೃದಯವು ಎಂಥಹ ಕಪಟದ ನೆಲೆಮನೆಯೊ? ಆಯಿತು, ಅಕಸ್ಮಾತ್, ತಮ್ಮ ಆ ಹೆಣ್ಣುಮಗಳು ಅಳಿದುಹೋದರೆ, ಅದೇ ಜನರಿಗೆ, ಅದೇ ಪುರುಷ ವ್ಯಕ್ತಿಯು ಯಾವ ಸಂಬಂಧಿಯೂ ಆಗಿರದೆ, ತಮ್ಮ "ಕಣ್ಣಿನ ಗೊಂಬೆ"ಯನ್ನು ಮುಕ್ಕಿದ ಮಾರಿಯೋ, ರಾಕ್ಷಸನೋ ಆಗುತ್ತಿರುವನಲ್ಲಾ? ನಾರಾಯಣ! ಏನು ವಿಚಿತ್ರ ಸಂಸಾರವಿದು? ಏನು ನಾಟಕರಂಗವಿದು? ಶ್ರೀಹರಿ! ಇವೆಲ್ಲವೂ ನಿನ್ನ ಮಾಯಾ ವಿಲಾಸದ ಪ್ರಭಾವವು. ಹುಂ—ದೈತ್ಯರಾಜಾ! ಇದೋ ನಾಳೆಯ ಸುಮುಹೂರ್ತದಲ್ಲೇ ವಿವಾಹ ಸಮಾರಂಭವು ನಡೆಯಲಿ. ನಾನಿನ್ನು ಹೋಗಿ ಬರುವೆನು.

ಮಯ:—ಮುನೀಂದ್ರಾ, ವಿವಾಹೋತ್ಸವವನ್ನು ಸಾಂಗಗೊಳಿಸಿ, ವಧೂವರರ ತಲೆ ಮೇಲೆ ನಾಲ್ಕು ಮಂತ್ರಾಕ್ಷತೆಯನ್ನು ಎರಚದೆ ತಾವು ಹೊರಡುವುದೇ?

ನಾರದ:—ನಿರ್ವಾಹವಿಲ್ಲವು. ನನ್ನ ಪ್ರಾರಬ್ಧವು ನಿನಗೆ ತಿಳಿಯದಲ್ಲವಷ್ಟೆ? ನಾಳೆ ಸಕಾಲಕ್ಕೆ ನಾನು ಬಂದೇ ಬರುವೆನು—ಕಲ್ಯಾಣಮಸ್ತು.

(ನಾರದನು ಮುಂದೆ ಬರುವನು. ತೆರೆಯು ಬೀಳುವುದು.)

ನಾರದ:—ನಾರಾಯಣ! ಸಾಕು ಸಾಕಾಯಿತು. ನನ್ನ ಎಷ್ಟೋ ಸಂವಾದಗಳ ಅನುಭವದಲ್ಲಿ ಇಂಥಹ ಸಂದಿಗ್ಧ ಪ್ರಸಂಗವು ನನಗೆ ಬಂದಿಲ್ಲವೆಂ

ವರೂ ಪೇಚ್ಚಲ್ಲ. ಇಲ್ಲವಾದರೆ ಸಾವಿರಬಾರಿ ಎಚ್ಚರಿಸಿದ್ದೇನೆ ಈ ಮೂರ್ಖನಿಗೆ—ಮಂಡೋದರಿಯೆಂದೇ ಒಪ್ಪಿಕೊಳ್ಳ ಬೇಕೆಂದು. ಆದರೂ ಪಾರ್ವತಿ! ಪಾರ್ವತಿ! ಎಂದೇ ಕೂಗುತ್ತಿರುವನಲ್ಲಾ! ಏನೋ ಪಾಪ! ಈತನು ನನ್ನನ್ನು ಅಲಕ್ಷಿಸಿದ್ದಕ್ಕಾಗಿ ನಾನು ರೇಗಿಕೊಂಡುದೆಂದು ಮಯನು ತಿಳಕೊಂಡದ್ದರಿಂದಾಯಿತು. ಇಲ್ಲದೆ ಹೋಗಿದ್ದರೆ, ಕನ್ಯಾರ್ಥಿಯಾಗಿ ಬಂದಿದ್ದ ಈ ರಾವಣನಿಗೂ ಮಧ್ಯಸ್ಥಿಕೆಯ ನನಗೂ, ಸರಿಯಾಗಿ ಮಂಗಳಾರತಿಯಾಗುತಿತ್ತು. ಹೇಗೂ ದೇವರ ದಯೆಯಿಂದ ಮಾನವುಳಿಯಿತು. ನಾಳೆಗೆ ವಿವಾಹದಲ್ಲಿ ಭಾಗಿಯಾಗಿ ಪತ್ನೀಸಮೇತನಾದ ಈ ರಾವಣನನ್ನು ಬೀಳ್ಕೊಟ್ಟು ಬಿಟ್ಟರೆ, ಒಮ್ಮೆಗೆ ನನಗೆ ಪೀಡೆ ತಪ್ಪಿದಂತಾಯಿತು. ಲೋಕಕ್ಕೂ ಸ್ವಲ್ಪ ಸುಖವಾದಂತಾಯಿತು. ಅಸ್ತು! ನಾರಾಯಣ. (ಹೋಗುವನು.)

— ಮೂರನೇ ದೃಶ್ಯ —

ದೇವರ ಗುಡಿ

[ಮಂಡೋದರಿಯೂ, ೧ನೇ ಸಖಿಯೂ ಇರುವರು. ಮಂಡೋದರಿಯು ವಿಗ್ರಹಕ್ಕೆ ಕರಜೋಡಿಸುತ್ತಾ.]

ಮಂಡೋದರಿ:— ಪದ್ಯ ೧೬

[ಆರತಿಯನ್ನು ಬೆಳಗಿ]

ಶ್ರೀಹರೀ! ಸದಾ ಶುಭವನ್ನೇ ನೀಡು. ಈ ಮಂಗಳಾರತಿಯನ್ನು ಸ್ವೀಕರಿಸಿ, ನಾನು ಎಂದೆಂದೂ ಸುಮಂಗಲಿಯಾಗಿ, ನಿತ್ಯ ಸೌಭಾಗ್ಯವನ್ನು ಅನುಭವಿಸುವಂತೆ ಕರುಣಿಸು. (ಎರಗುವಳು.)

೧ನೆ ಸಖಿ:—ದೇವೀ! ಬೇಗನೇ ಪೂಜೆಯನ್ನು ಮುಗಿಸಿಕೊಂಡು ಬರಬೇಕೆಂದು ಮಹಾರಾಜರು ಆಜ್ಞಾಪಿಸಿರುವರಲ್ಲವೆ? ಎಷ್ಟೋ ದಿನಗಳ ಮೊದಲು ಹುಟ್ಟಿದ, ಆಶಾಂಕುರವು ಹೆಮ್ಮರವಾಗಿ ಹೂ ಬಿಡುವ ಈ ಸುಮುಹೂರ್ತದಲ್ಲಿ, ಸಮಯದ ಬೆಲೆಯನ್ನು ಚೆನ್ನಾಗಿ ಲಕ್ಷ್ಯದಲ್ಲಿಡಬೇಡವೆ?

ಮಂಡೋದರಿ:—(ಎದ್ದು ಮುಂದಕ್ಕೆ ಬರುವಳು. ಸಖಿಯೂ ಹಿಂಬಾಲಿಸುವಳು. ಅವರ ಹಿಂದಿನ ತೆರೆಯು ಬೀಳುವುದು.)

ಮಂಡೋದರಿ: - ಸಖೀ! ನಿನ್ನೆಯಿಂದ ಪುನಹ ನನಗೆ ನೆಮ್ಮದಿ ಇಲ್ಲವು. ಇನ್ನು ಮುಂದೆ ನಾನೆಲ್ಲೋ ನೀವೆಲ್ಲೋ ಎಂಬ ವಿಚಾರವು ಮುಂದೆ ಮುಂದೆ

ಬಂದು ನನ್ನನ್ನು ಕಾದುತ್ತಿರುವುದು ನಿಮ್ಮೆಲ್ಲರ ವಿಯೋಗವು ನನಗೆ ಅಸಹನೀಯವಾಗಿರುವುದು ಗೆಳತೀ!

೧ನೆ ಸಖಿ:– ದೇವೀ ಹೀಗೆ ಹೇಳಬಾರದು. ಅನುಕೂಲ ಕಾಲದಲ್ಲಿ, ಬಯಸಿದ ಅನುರೂಪ ವರನನ್ನೇ ಹೊಂದುವ ಭಾಗ್ಯವನ್ನು ಪಡೆದ ನೀನು, ಕೇವಲ ಬಡ ದಾಸಿಯರ ವಿಯೋಗಕ್ಕಾಗಿ ಚಿಂತಿಸುವುದೇ? ಹೆಚ್ಚಿನ ಸುಖದ ಲಾಭಕ್ಕಾಗಿ, ಅಲ್ಪ ಸುಖವನ್ನು ತ್ಯಜಿಸ ಬೇಕಲ್ಲವೆ ದೇವೀ? ನೀನು ಲಂಕಾ ಸಾಮ್ರಾಜ್ಯದ ಮಹಾರಾಣಿಯಾಗಿ ಬಾಳುವ ನಾಳೆಯ ದಿನದಲ್ಲಿ ನಿನ್ನನ್ನು ನಮ್ಮಂಥವರು ಅದೆಷ್ಟು ಮಂದಿ ಓಲಗಿಸಲಿಕ್ಕಿಲ್ಲ? ಆದರೆ, ಲಂಕಾಧಿಪನೊಂದಿಗೆ, ಸಂಸಾರ ಸಾಗರದ ಆನಂದದ ಅಲೆಗಳನ್ನು ಎಣಿಸುತ್ತಿರಬಹುದಾದ, ಮಧುರ ಬೆಳದಿಂಗಳ ಹಬ್ಬದ ದಿನಗಳಲ್ಲಿ ಮಾತ್ರ ನಿನಗೆ ನಮ್ಮ ನೆನಪು ಉಳಿದಿರಲಿ. ದೇವೀ! ಬಡ ಸೇವಕಿಯರಿಗೆ ಇಷ್ಟೇ ಸಾಕು. ಈ ಪ್ರಾರ್ಥನೆಯನ್ನು ಮಾನ್ಯ ಮಾಡುವೆಯಾ? (ಖಿನ್ನಳಾಗುವಳು.)

ಮಂಡೋದರಿ:—ಗೆಳತೀ! ಸೇವೆಯಲ್ಲಿ ದಾಸಿಯರಂತೆ, ಪ್ರೀತಿಯಲ್ಲಿ ತಾಯಿಯಂತೆ, ಕಷ್ಟಸುಖಗಳಲ್ಲಿ ಜೀವದ ಗೆಳತಿಯರಂತೆ, ನೆರವಾಗುತ್ತಿದ್ದ ನಿಮ್ಮನ್ನು ಮರೆಯುವಷ್ಟು ಕೃತಘ್ನಳಾಗುವೆನೇ ನಾನು? ಅಂಥಹ ದೊಡ್ಡಸ್ಥಿಕೆಯನ್ನು ದೇವರು ನನಗೀಯದೇ ಇರಲಿ (ಕಣ್ಣೊರಸಿ) ಸಾಧ್ಯವಿದ್ದರೆ ನಿಮ್ಮನ್ನು ಅಲ್ಲಿಗೆ ಕರೆಸಿಕೊಳ್ಳುತ್ತಿದ್ದೆ. ಆದರೆ ತಾತನು ಮೊದಲೇ ನಿಶ್ಚೈಸಿದಂತೆ ಬರುವ ಸಪ್ತಮಿಯಂದು ನೀವೂ ನನ್ನಂತೆಯೇ----(ನಕ್ಕು) ಸಖೀ! ಸಾಧ್ಯವಿದ್ದರೆ ಅಂದಿನ ಕಲ್ಯಾಣೋತ್ಸವಕ್ಕೆ ಬಂದೇ ಬರುವೆನು. ಇದೋ ಈ ಮಾಲಿಕೆಯು ಅಂದಿನ ಉಡುಗೊರೆಯಾಗಿ ಇಂದೇ ನಿನ್ನ ಕತ್ತನ್ನಲಂಕರಿಸಲಿ. (ತನ್ನ ಕುತ್ತಿಗೆಯಿಂದ ತೆಗೆದು, ಆಕೆಯ ಕೊರಳಿಗೆ ಹಾಕುವಳು. ಮತ್ತೊಂದನ್ನು ತೆಗೆದು) ಇದೋ ಇದನ್ನು ನಿನ್ನ ಗೆಳತಿಗೆ ಕೊಡಬೇಕು ತಿಳಿಯಿತೆ?

೨ನೆ ಸಖಿ:—(ಪ್ರವೇಶಿಸಿ) ದೇವೀ! ಬೇಗನೇ ನೀವು ಬರಬೇಕೆಂದು ರಾಜರ ಅಪ್ಪಣೆಯಾಗಿದೆ. ಮುಹೂರ್ತವು ಸಮೀಪಿಸುತ್ತಿದೆಯೆಂದು ಶುಕ್ರಾಚಾರ್ಯರು ಎಚ್ಚರಿಸುತ್ತಿರುವರು.

೧ನೆ ಸಖಿ:—ದೇವಿ ನಡೆ. ಬೇಗನೇ ಹೋಗೋಣ. (ಹೋಗುವರು.)

ನಾಲ್ಕನೆಯ ದೃಶ್ಯ

ಲಗ್ನ ಮಂಟಪ

[ರಾವಣ, ನಾರದರು ಕುಳಿತಿರುವರು. ಸಖಿಯರು ಮಂಡೋದರಿಯು ಹಿಂದೆ ನಿಂತಿರುವರು. ಮಯನು ಮಗಳನ್ನು ಹತ್ತಿರ ನಿಲ್ಲಿಸಿಕೊಂಡು]

ಮಯ:—ಮಗಳೇ! ತಿಳಿಯಬೇಕಾದ್ದನ್ನೆಲ್ಲ ನೀನು ಮೊದಲೇ ತಿಳಿದಿರುವೆಯಾದರೂ ಈ ವೇಳೆಯಲ್ಲಿ ನನ್ನ ಕರ್ತವ್ಯವೆಂದು ಒಂದೆರಡು ಮಾತುಗಳನ್ನು ಹೇಳುತ್ತಿದ್ದೇನೆ--ಬಾಲೇ!

ಪದ್ಯ ೧೭

ಕುಮಾರೀ! ಅರುಂಧತಿ, ಸಾವಿತ್ರಿ, ಅನಸೂಯೆಯರಂತೆ, ಪತಿವ್ರತೆಯೆನಿಸಿ, ಲೋಕೈಕ ವೀರ ಸಂತಾನವನ್ನು ಪಡೆದು, ಕಲ್ಪಾಂತದ ವರೇಗೆ ಮನೆ ಮನೆಗಳಲ್ಲಿ ಆಬಾಲ ವೃದ್ಧ ಸ್ತ್ರೀಪುರುಷರು ನಿನ್ನ ಹೆಸರನ್ನು ಮರೆಯದಂಥ ಕೀರ್ತಿಯನ್ನು ಸಂಪಾದಿಸು.—ರಾವಣೇಶ್ವರಾ! ಪ್ರೇಮದಿಂದ ಸಲಹಿದ ಈ ನನ್ನ ಹೆತ್ತಕರುಳನ್ನು ಧರ್ಮಸಮ್ಮತವಾಗಿ ನಿನ್ನ ಉಡಿಯಲ್ಲಿ ಹಾಕಿರುವೆನು. ಅಗ್ನಿಸಾಕ್ಷಿಯಾಗಿ ನೀನು ನಾತಿಚರಾಮಿ, ಎಂದಂತೆ ಈಕೆಯನ್ನು ನಿನ್ನ ಸರ್ವಸ್ವವೆಂದು ತಿಳಿದು ಸಲಹು. (ಮಂಡೋದರಿ ಬಿಕ್ಕುವಳು. ಸಖಿಯರೂ ಕಣ್ಣೊರಸಿಕೊಳ್ಳುವರು.) ಮಗಳೇ! ಅಳುವ ಕಾಲವಲ್ಲವಿದು. ನೀನು ವಿಕ್ರಮೈಕ ದಾನವ ಚಕ್ರವರ್ತಿಯ ರಾಜ್ಞಿಯಾಗಿರುವೆ. ನಾನಂತೂ, ಹೆರವರು ನನ್ನ ಬಳಿಯಲ್ಲಿಟ್ಟಿದ್ದ ಹೊರೆಯನ್ನು ಪುನಹ ಅವರಿಗೇ ಒಪ್ಪಿಸಿಕೊಟ್ಟು, ಕೃತಾರ್ಥತೆಗೆ ಭಾಗಿಯಾಗಿರುವೆನು. ಅಮ್ಮಾ, ಪರಮಾತ್ಮನ ದಯೆಯಿಂದ, ಉಮೆಯ ಮಾಂಗಲ್ಯವೂ, ರಮೆಯ ಸೌಭಾಗ್ಯವೂ, ಭಾರತಿಯ ಚತುರತೆಯು ನಿನಗುಂಟಾಗಲಿ. ಅಸ್ತು. ಅದೋ! ನಮ್ಮುಭಯಕುಲಗಳಿಗೂ ಮಾನ್ಯರಾದ ನಾರದರು ನಮ್ಮ ಸುಕೃತ ವಿಶೇಷದಿಂದ ಇಲ್ಲಿಗೆ ಬಂದಿರುವರು ಅವರಿಗೆರಗಿ, ಆಶೀರ್ವಾದವನ್ನು ಪಡೆದು, ಇಹಪರಗಳಿಗೆ ಆಧಾರನಾದ ಪತಿಯೊಂದಿಗೆ ತೆರಳು.

ಮಂಡೋದರಿ:—(ನಾರದನಿಗೆ ಎರಗಿ,) ಪೂಜ್ಯರೇ! ಅನುಗ್ರಹಿಸಬೇಕು.

ನಾರದ:—ದೀರ್ಘಸುಮಂಗಲೀಭವ!

ಮಂಡೋದರಿ:—ಗೆಳತಿಯರೇ! ಹೋಗಿಬರಲೇ (ಸಖಿಯರು ಮಾತು ಬಾರದೆ ತಲೆಯಾಡಿಸುವರು.) ಅಪ್ಪಾ! ಈ ನನ್ನ ಗೆಳತಿಯರ ವಿವಾಹವನ್ನು ನಿನ್ನ ಮಗಳ ಮದುವೆಯ ವಿಜೃಂಭಣೆಯಿಂದಲೇ ಪೂರೈಸಬೇಕು. ತಿಳಿಯಿತೇ ಮರೆಯ ಬಾರದು ತಾತಾ!

ಮಯ:—ಅವಶ್ಯವಾಗಿಯೂ ಹಾಗೇ ನಡೆಸುವೆನು. ಆ ದಿನ ಪತಿ ಸಹಿತಳಾಗಿ ಬಂದ ನೀನೇ ಅದನ್ನು ನೋಡುವೆಯಂತೆ!

ನಾರದ:—(ಸ್ವಗತ) ಆಗ ಈ ಹತ್ತನೇ ಗ್ರಹವು ಯಾವ ರಾಶಿಯಲ್ಲಿರುವುದೋ ಏನೋ!

ಮಂಡೋದರಿ:—ಜನಕಾ! ಇನ್ನು ನಾನು ಹೋಗಿ ಬರುವೆನು. (ಕಾಲ್ಗೆರಗುವಳು.)

ಮಯ:—ಹೋಗುವ ಪಥವು ಸುಗಮವಾಗಲಿ.

ರಾವಣ:— ಮಾವಾ! ಹೋಗಿ ಬರಲೋ! (ಶಿರಬಾಗುವನು.)

ಮಯ:—ದೀರ್ಘಾಯುರಸ್ತು.

ರಾವಣ:— ನಾರದರೇ! ತಮ್ಮುಪಕಾರವನ್ನು ಹೇಗೆ ತೀರಿಸಲಿ?

ನಾರದ:—ಅದೇನೂ ಬೇಡವಯ್ಯಾ! ಹೋಗಿ ಬಾ.

(ರಾವಣ ಮಂಡೋದರಿಯರು ಹೋಗುವರು.)

ನಾರದ:—ದನುಜಾಧಿಪಾ! ನನ್ನ ಕೆಲಸವಾಯಿತು. ಇನ್ನು ನಾನೂ ತೆರಳುವೆನು.

ಮಯ:—ತಮ್ಮಿಚ್ಛೆ. (ಶಿರಬಾಗುವನು)

ನಾರದ:—ವಿಜಯೀಭವ! ನಾರಾಯಣ! (ಹೊರಡುವನು)

ತೆರೆ ಬೀಳುವುದು

ನಾಲ್ಕನೆಯ ಅಂಕವು ಮುಗಿದುದು.

ಐದನೆಯ ಅಂಕ

ಮೊದಲನೆಯ ದೃಶ್ಯ

— ಕೈಕಸೆಯ ಮಂದಿರ —

ಕೈಕಸೆ:— ಪರಶಿವನ ಆತ್ಮಲಿಂಗವನ್ನು ತರಲೆಂದು ಹೋದ ಕುಮಾರನು ಇನ್ನೂ ಬಂದಿಲ್ಲವಲ್ಲಾ? ಶಂಕರನು ಇನ್ನೂ ಅನುಗ್ರಹಿಸಿರಲಿಕ್ಕಿಲ್ಲವೇ?

(ರಾವಣನು ಮಂಡೋದರಿಯೊಂದಿಗೆ ಪ್ರವೇಶಿಸುವನು.)

ರಾವಣ:— ಅಮ್ಮಾ! ಆಶೀರ್ವದಿಸಬೇಕು.

ಕೈಕಸೆ:— ಮಗನೇ ಬಂದೆಯಾ? ಚಿರಕಾಲ ಬಾಳು. ಕುಮಾರಾ! ಕಾರ್ಯದಲ್ಲಿ ವಿಜಯಿಯಾದೆಯಷ್ಟೆ?

ರಾವಣ:— ಅಮ್ಮಾ! ಈ ನಿನ್ನ ಮಗನು ಸದಾ ವಿಜಯಿಯಲ್ಲವೆ?

ಕೈಕಸೆ:— ಸಂದೇಹವಿಲ್ಲ ಮಗೂ! ಎಲ್ಲಿದೆ ನೋಡೋಣ ನೀನು ತಂದ ಜ್ಯೋತಿರ್ಲಿಂಗವು? ನನ್ನ ಹಲವು ಕಾಲದ ಬಯಕೆಯು ಇಂದು ಕೈಗೂಡಿತು.

ರಾವಣ:—(ಸುಮ್ಮನಿರುವನು.)

ಕೈಕಸೆ:— ರಾವಣಾ! ಏತಕೀ ಸಂಕೋಚವು? ಕೊಡು. ನನಗಾಗಿ ತಂದುದಲ್ಲವೇ ನೀನದನ್ನು?

ರಾವಣ:— ಜನನೀ! ಹಾಳಾಯಿತು ಆ ಆತ್ಮಲಿಂಗವು.

ಕೈಕಸೆ:— ಅಯ್ಯೋ! ಹಾಗೆಂದರೇನು? ಶಿವನು ಕೊಡಲಿಲ್ಲವೆ? ಅಥವಾ ಎಲ್ಲಾದರೂ ಮರೆತು ಬಂದೆಯಾ? ಏನಾಯಿತು ಹೇಳಬಾರದೆ?

ರಾವಣ:— ಅಮ್ಮಾ ಆ ಆತ್ಮಲಿಂಗದಿಂದೇನು? ಅಂಥಹ ಕ್ಷುದ್ರವಸ್ತುಗಳನ್ನು ನಿನ್ನ ಮಗನು ಒಬ್ಬನಲ್ಲಿ ಯಾಚಿಸುವನೇ? ಯಾಚಿಸಬಹುದೆ? ಪ್ರತ್ಯಕ್ಷ ಆ ಶಿವನ ಅರ್ಧಾಂಗಿಯಾದ ಪಾರ್ವತಿಯನ್ನೇ ನನ್ನ ಪತ್ನಿಯನ್ನಾಗಿ ಮಾಡಿಕೊಂಡು ಬಂದಿರುವೆನು.—(ಮಂಡೋದರಿಗೆ) ದೇವೀ! ಇದೋ ನಿನ್ನ ಅತ್ತೆಗೆ ಎರಗಿ ಆಶೀರ್ವಾದವನ್ನು ಪಡೆದುಕೊ.

ಕೈಕಸೆ:— ಮೂರ್ಖನೇ ಏನು ಹೇಳಿದೆ? ಶಿವಶಿವಾ! ಆ ಶಂಕರನ ಪತ್ನಿಯನ್ನು! ನಿನ್ನ ಕುಲದೇವತೆಯನ್ನು!! ತಾಯಿಯನ್ನು!!! ಹಾಯ್! ಹೆಂಡತಿಯೆಂದು ಭಾವಿಸಿದೆಯಾ? ಛೀಛೀ. ಇವಳ ಪಾದ ಮೂಲದಲ್ಲಿ ಬಿದ್ದು,

ಕ್ಷಮಾಭಿಕ್ಷೆಯನ್ನು ಯಾಚಿಸಿಕೊ, ತಾಯೀ! ತಪ್ಪನ್ನು ಮನ್ನಿಸೆಂದು ಪ್ರಾರ್ಥಿಸಿಕೊ!!

ರಾವಣ:—ಅಮ್ಮಾ ಈಕೆ ನನ್ನ ಭಾವನಾ ಪತ್ನಿಯಲ್ಲ; ವಿಧಿ ಪೂರ್ವಕ ವರಿಸಿದ ಧರ್ಮ ಪತ್ನಿಯು. ಹೀಗಿರುವಾಗ ಇವಳಿಗೆ ನಾನು ನಮಸ್ಕರಿಸುವುದೆ? ಜನನೀ ಇದು ನಿನ್ನ ಮಗನಿಂದಾಗದು. ಬೇಕಾದರೆ ನೀನಿವಳನ್ನೇ ಕೇಳು. ನಾನೇನೂ ಈಕೆಯನ್ನು ಬಲಾತ್ಕರಿಸಲಿಲ್ಲ. ಇವಳಾಗಿಯೇ ನನ್ನನ್ನು ಮನವೊಪ್ಪಿ ವರಿಸಿ, ನನ್ನೊಂದಿಗೆ ಬಂದಿರುವಳು. ಹೀಗಿರಲು ನನ್ನ ತಪ್ಪೇನು?

ಕೈಕಸೆ:—ಅಕಟಾ! ನೀನೆಂಥಹ ಅವಿಚಾರಿಯೋ ತಿಳಿಯದು. ಅಮ್ಮಾ ನನ್ನೀ ಮಗನ ಪಶುವೃತ್ತಿಯನ್ನು ಕ್ಷಮಿಸಿ,ನಿನ್ನ ಕಿಂಕರರನ್ನು ಕಾಪಾಡು ತಾಯಿ!

(ಎಂದು ಮಂಡೋದರಿಗೆ ನಮಸ್ಕರಿಸಲು, ಮಂಡೋದರಿ ಹಿಂದಕ್ಕೆ ಸರಿದು.)

ಮಂಡೋದರಿ:—ಅಯ್ಯಯ್ಯೋ ಇದೇನು ವಿಪರೀತವು? ಹರಸಬೇಕಾದವರು ಕಾಲಿಗೆರಗುವುದೇ? ಅತ್ತೆಯವರೇ ಇದು ಅಮಂಗಲವಲ್ಲವೆ? (ಎರಗುವಳು.)

ಕೈಕಸೆ:—ತಾಯೀ! ನೀನು ನಮ್ಮ ಭಾಗ್ಯದ ಅಧಿದೇವತೆಯು. ನಾವು ನಿನ್ನ ಸಂಸಾರಿಗಳು. ಎಲ್ಲಕ್ಕೂ ಮೂಲಾಧಾರಳಾದ ನಿನಗೆ ಹರಸುವವಳು ನಾನಾಗಬಲ್ಲೆನೆ? (ಎಂದು ಪುನಹ ಎರಗುವಳು.)

ಮಂಡೋದರಿ:—ಅತ್ತೆಯವರೇ, ನನಗೆ ನಿಮ್ಮ ಮಾತುಗಳೇ ಅರ್ಥವಾಗುವುದಿಲ್ಲವಲ್ಲಾ! ನಾನು ನಿಮ್ಮ ಮಗನ ಹೆಂಡತಿಯು. ನಿಮಗೆ ಪುತ್ರಿ ಸಮಾನಳು. ಚರಣ ಸೇವಕಿಯು. ನನಗಿಂತಹ ಮಹತ್ವಿಕೆಯನ್ನು ಕಲ್ಪಿಸಬಾರದು. ಅತ್ತೆಯಿಂದ ಚಾಕರಿ ಮಾಡಿಸುತ್ತ, ಒಡತಿಯಾಗಿ ಮೆರೆಯಬೇಕೆಂಬ ಸೊಸೆಯಲ್ಲ ನಾನು. (ಕೈಕಸೆಗೆ ಎರಗುವಳು.)

ರಾವಣ:—(ಸ್ವಗತ.) ಒಳ್ಳೆಯ ಗ್ರಹಚಾರವಾಯಿತಲ್ಲಾ! (ಪ್ರಕಾಶ) ಅಮ್ಮಾ! ಊರಿಗೆ ಅರಸಾದರೂ ತಾಯಿಗೆ ಮಗನೇ ತಾನೆ? ಜಗದೀಶ್ವರಿಯಾದರೇನು? ನಿನಗೆ ಸೊಸೆಯಾದ ಮೇಲೆ, ಇವಳು ನಿನಗಧೀನಳೇ ಅದಳು. ಇನ್ನೂ ನಿನಗೆ ಚಿತ್ತ ಚಾಂಚಲ್ಯವೇಕೆ?

ಕೈಕಸೆ:—ಛೀ! ಕೃತಘ್ನನೇ! ಬ್ರಹ್ಮ ವಂಶದಲ್ಲಿ ಹುಟ್ಟಿದ ನೀನು, ಕುಲ ಕಂಟಕನಾದ ಬ್ರಹ್ಮರಾಕ್ಷಸನಾದೆಯಲ್ಲಾ? ನಿನ್ನಂಥವರು ಹುಟ್ಟಲೇ ಬಾರದು. ಹುಟ್ಟಿದರೂ, ನೆಟ್ಟಗಿರ ಬಾರದು.

ರಾವಣ:—ತಾಯಿ! ಏಕೀ ಆಗ್ರಹವು? ಜಗದೀಶ್ವರಿಯ ಕೈಯನ್ನು ಹಿಡಿದು, ಜಗದೀಶ್ವರನಾಗಿ ಬಂದ ತನ್ನ ಮಗನನ್ನು ಕೈಎತ್ತಿ ಹರಸಲಿಕ್ಕಾಗಿ, ಯಾವ ಮಾತೆಯು ಮುಂದರಿಯಲಿಕ್ಕಿಲ್ಲ? ಆನಂದದಿಂದ ನಲಿಯಬೇಕಾಗಿದ್ದ ಈ ಸುಮುಹೂರ್ತದಲ್ಲಿ ಹೀಗೇಕೆ ಸಂತಾಪವು?

ಕೈಕಸೆ:—ಪಾಪಿಯೇ! ಸಾಕು ನನಗೀ ಆನಂದವು. ಇನ್ನಾದರೂ ಈಕೆಯನ್ನು ಕರಕೊಂಡು ಹೋಗಿ, ತಂದಲ್ಲೇ ಬಿಟ್ಟು ಬಂದುಬಿಡು. ಅಷ್ಟಾದರೂ ಮಾಡು. ಹೋಗು.

ಮಂಡೋದರಿ:—ಶ್ರೀಹರೀ! ಅತ್ತೆಯವರೇ ನೀವು ಹೀಗೆ ಹೇಳಬಹುದೆ? ಅಗ್ನಿ ಸಾಕ್ಷಿಯಾಗಿ ಲಗ್ನವಾದ, ಧರ್ಮ ಪತ್ನಿಯನ್ನು ಬಿಡಬೇಕೆಂದು ಮಗನಿಗೆ ಬೋಧಿಸಬಾರದು ನೀವು. ಹಾಗೆ ಮಾಡಿದರೆ ನನ್ನ ಗತಿಯೇನು?

ರಾವಣ:—ಕೇಳಿದೆಯೋ ಅಮ್ಮಾ? ಇವಳಿಗೇ ನನ್ನನ್ನು ಬಿಟ್ಟು ಹೋಗಲು ಮನಸ್ಸಿಲ್ಲ. ನೀನು ಮಾತ್ರ ಹೀಗೆ ಕಾಡುತ್ತಿರುವೆ.

ಕೈಕಸೆ:—ಅಮ್ಮಾ ಪಾರ್ವತಿ - - - - - -

ಮಂಡೋದರಿ:—ಹಾಂ! ಪಾರ್ವತಿ? ನನ್ನ ಹೆಸರು ಮಂಡೋದರಿ ಎಂದು.

ಕೈಕಸೆ:—ಏನು? ಮಂಡೋದರಿ?

ರಾವಣ:—ಹೌದಮ್ಮ. ಮಂಡೋದರಿ ಎಂಬ ಪಾರ್ವತಿಯು.

ಕೈಕಸೆ:—ರಾವಣಾ! ನೀನು ಸ್ವಲ್ಪ ಸುಮ್ಮನಿರು. ಅಮ್ಮಾ ನೀನೇನೂ ಸಂಕೋಚ ಪಡಬೇಕಾದ್ದಿಲ್ಲವು. ಈ ರಾವಣನ ಮಾತಿದು ಸತ್ಯವೆ? ನೀನು ಪಾರ್ವತಿಯು ಹೌದಾಗಿದ್ದರೆ ನಿಜವನ್ನೇ ಹೇಳಮ್ಮಾ. ನನ್ನನ್ನು ವೃಥಾ ಗೋಳಾಡಿಸುವುದೇಕೆ?

ರಾವಣ:—ಹುಂ, ಹೇಳು. ಹೌದೆಂದು ನಿಜವನ್ನೇ ಹೇಳು.

ಮಂಡೋದರಿ:—ಅತ್ತೆಯವರೇ ನಾನು - - - -

ರಾವಣ: - (ನಡುವೆ ಬಾಯಿ ಹಾಕಿ.) ಗಿರಿರಾಜಪುತ್ರಿ! ಪಾರ್ವತಿ!!

ಮಂಡೋದರಿ:— ಅಲ್ಲ. ಮಯ ಪುತ್ರಿ, ಮಂಡೋದರಿ.

ಕೈಕಷೆ: — ಭಲೇ! ಮೂರ್ಖ, ದುರ್ಮದದಿಂದ ಇಲ್ಲಜ್ಜೆಲ್ಲ ಹೇಳಿ, ನನಗೆ ವೃಥಾ ಭಾಷೆಯನ್ನು ಕೊಟ್ಟು, ತಪ್ಪನ್ನು ಮುಚ್ಚಿಕೊಳ್ಳಲಿಕ್ಕಾಗಿ, ಹೀಗೊಂದು ಕಪಟನಾಟಕವನ್ನು ಹೂಡಿದೆಯಾ? ತಾಯಂದಿರಿಗೆ ಪ್ರಸವ ಕಾಲದಲ್ಲಾದ ವೇದನೆ ಸಾಲದುದಕ್ಕೆ, ಮತ್ತೂ ಮತ್ತೂ ನೋವನ್ನುಂಟುಮಾಡಲಿಕ್ಕಾಗಿಯೇ ನಿನ್ನಂಥವರ ಹುಟ್ಟು. ಹೋಗು! ನಿನ್ನ ಮುಖಾವಲೋಕನವೂ ಬೇಡಾಗಿದೆ. (ವಿಮುಖಳಾಗುವಳು)

ರಾವಣ:—(ಮಂಡೋದರಿಗೆ) ಬಾ! ಹುಂ ಹೀಗೆ ಬಾ.

ಮಂಡೋದರಿ:—(ಭಯದಿಂದ ಬರುವಳು.)

ರಾವಣ: (ಗಂಭೀರವಾಗಿ.) ನೀನು ಪಾರ್ವತಿಯಲ್ಲವೆ? ಹೇಳು. (ಶಾಂತತೆಯಿಂದ.) ಪ್ರಿಯೇ ಹೇಳು. ಹೌದೆಂದು ಸತ್ಯವನ್ನು ಹೇಳಿ ನನ್ನ ತಾಯಿಯ ಸಂದೇಹವನ್ನು ಪರಿಹರಿಸು.

ಮಂಡೋದರಿ:—ಅಲ್ಲದುದನ್ನು ಹೇಗೆ ಹೇಳಲಿ?

ರಾವಣ:—(ಕ್ರುದ್ಧನಾಗಿ) ಛಿ! ಏನಿದು ಅನಿಷ್ಟವು? ನೀನು ಪಾರ್ವತಿಯಲ್ಲದಿದ್ದರೆ, ನನಗಾವ ನಿನ್ನ ಸಂಬಂಧವೂ ಇಲ್ಲ. ನಿನ್ನಿಂದ ಪಡೆಯಬೇಕಾದ ಯಾವ ಪುರುಷಾರ್ಥವೂ ಇಲ್ಲ. ತೊಲಗಿಲ್ಲಿಂದ! ಹುಂ, ಈ ಕ್ಷಣ ತೊಲಗು!! (ಎಂದು ದೂಡುವನು.)

ಮಂಡೋದರಿ:—(ಅಳುತ್ತ ಬರುತ್ತಾ)

ಪದ್ಯ ೧೮.

ನಾಥಾ! ನನ್ನದೇನು ಅಪರಾಧವಾಗಿರುವುದು? ನಮ್ಮ ತಂದೆಯೇನಾದರೂ ನಿಮ್ಮನ್ನು ವಂಚಿಸಿಲ್ಲ. "ನನ್ನ ಮಗಳಾದ ಈ ಮಂಡೋದರಿಯನ್ನಿದೋ ನಿನಗೆ ಧಾರೆಯೆರೆದು ಕೊಟ್ಟೆನು." ಎಂದೇ ಆತನು ಹೇಳಿರುವನಲ್ಲವೆ? ನೀವು ಮಾತ್ರ ಏನು ಅಭಿಪ್ರಾಯವನ್ನು ಮಾಡಿಕೊಂಡು ನನಗೆ ಮಂಗಲ ಸೂತ್ರವನ್ನು ಕಟ್ಟಿದಿರೊ ಅದನ್ನು ನಾನು ಬಲ್ಲೆನೆ? ಅಥವಾ ಅದು ನನ್ನ ತಪ್ಪೆ? ಕಾಂತಾ! ದೈವ ಸಾಕ್ಷಿಯಾಗಿ ವಿವಾಹ ಮಂಟಪದಲ್ಲಿ ನಾಕಿ

ಜರಾಮಿ' ಎಂದು ನನ್ನ ಕೈ ಹಿಡಿದ ತಾವು ಈಗ ಪರಿತ್ಯಾಗ ಮಾಡಿದರೆ ನನ್ನ ಗತಿಯೇನು? ಹೋಗೆಂದು ದೂಡಿದರೆ ನಾನೆಲ್ಲಿ ಹೋಗಲಿ? ಈ ಪಾದವೇ ನನಗೆ ಆಶ್ರಯ ಸ್ಥಾನವು. (ಎಂದು ಎರಡೂ ಕಾಲುಗಳನ್ನು ಹಿಡಿದುಕೊಂಡು ಕಣ್ಣೀರಿಳಿಸುವಳು.)

ತೆರೆಯುಲ್ಲಿ:--ಮಾಯಾ ದೇವಿಯೇ! ಇನ್ನೀ ರಾವಣನನ್ನು ಬಿಟ್ಟು ಬಿಡು!

ರಾವಣ:—(ದೊಡ್ಡದೊಂದು ನಿಟ್ಟುಸಿರು ಬಿಟ್ಟು) ಹುಂ. ಏಳು ಚಿಂತಿಸ ಬೇಡ. (ಸ್ವಗತ) ಅಕಟಾ! ನಾನೆಂಥಹ ಭಾಗ್ಯ ಹೀನನು? ಪ್ರತ್ಯಕ್ಷ ಮಹಾದೇವನು ಅನುಗ್ರಹಿಸಲು ಕೈಯೆತ್ತಿ ನಿಂತಾಗ ಕೇಳಬಾರದ್ದನ್ನು ಕೇಳಿ,—ಕಡೆಗೆ ಆತನಲ್ಲಿ ಜಗಳಾಡಿ ಕೆಡಿಸಿಕೊಂಡೆನಲ್ಲಾ? ಅಯ್ಯೋ ನನ್ನಂಥಹರೂ ಜಗತ್ತಿನಲ್ಲಿ ಹುಟ್ಟಬೇಕೆ? ಹುಟ್ಟಿದರೂ ಬದುಕಿರಬೇಕೆ? ಬದುಕಿ ಇದ್ದರೂ ಹತ್ತು ಮಂದಿಯ ಎದುರು ತಲೆಯೆತ್ತಿ ನಡೆಯುತ್ತಿರಬೇಕೆ? ತಾಯಿಗಿತ್ತ ಮಾತನ್ನು ನಡೆಸಲಿಕ್ಕಾಗದ ನಾನೊಬ್ಬ ಲೋಕವನ್ನು ನಡುಗಿಸುವ ವೀರ ಕೇಸರಿ! ಸರ್ವಾಧಿಕಾರಿ!! ಥೂ! ಸಲ್ಲದು. ಹಾಯ್ ಏನು ಮಾಡಲಿ? ಹೇಗೆ ಮಾನವನ್ನುಳಿಸಿಕೊಳ್ಳಲಿ?—ಛೀ! ಏನಿದು? ನಾನೂ ಎದೆಗುಂದುವುದೇ? ಹೋಗಿ ಶಂಕರನನ್ನು ಭಜಿಸಿ, ಆತ್ಮಲಿಂಗವನ್ನು ಸಾಧಿಸಿಯೇ ಬರುವೆನು. ಸಂದೇಹವೇನು?—ಅಮ್ಮಾ ಮೊದಲು ಆದ ತಪ್ಪಿಗೆ ಕ್ಷಮಿಸು. ಇದೋ ಈಗಲೇ ಹೊರಟಿರುವೆನು. ಪುನಃ ಆತ್ಮಲಿಂಗ ಸಹಿತ ನಿನ್ನೀ ಮಗನ ದರ್ಶನವು ನಿನಗೆ ಈ ಜನ್ಮದಲ್ಲಿ; ಅದಿಲ್ಲದಿದ್ದರೆ ಕುಂಭಕರ್ಣ, ವಿಭೀಷಣರಿಬ್ಬರೇ ಮಕ್ಕಳು ನಿನಗಿನ್ನು ಮುಂದೆ. ಇದು ದೃಢ ನಿಶ್ಚಯವು. (ಎಂದವನೇ ಹೋಗುವನು.)

[ತೆರೆ ಬೀಳುವುದು.]

ಎರಡನೆಯ ದೃಶ್ಯ.

ತಪೋವನ.

ರಾವಣ:—(ಯೋಗಾಸನದಲ್ಲಿ ಕುಳಿತು.)

॥ ಕಂದ ॥

ಜಯ ಜಯ ಶಂಕರ ಗಿರಿವರ ।
ಜಯ ಜಯ ನತಜಾಲ ಪಾಲ ಪನ್ನಗ ಮಾಲಾ ॥
ಜಯ ಜಯ ಪುರಹರ ಶುಭಕರ ।
ಜಯ ಜಯ ಕರುಣಾಲವಾಲ ಕಾಳೀಲೋಲಾ ॥ ೧

ಪದ್ಯ ೧೯.

ಶಂಕರಾ! ಹಲವು ಕಾಲದಿಂದ, ಹಲವು ರೀತಿಯಿಂದ, ನಿನ್ನನ್ನು ಕೂಗಿ ಕರೆದರೂ ಬಾರದೆ ಹೋದೆಯಾ? ದೇವಾ! ಮಕ್ಕಳ ತಪ್ಪಿಗೆ ತಾಯಿ ಯೊಮ್ಮೆ ನೊಂದುಕೊಂಡರೂ, ಅವರು ಅತ್ಯಾಗ ರೋದನಕ್ಕೆ ಕಿವಿಗೊಟ್ಟು ಮತ್ತೂ ಬಾರದೆ ಉಳಿಯುವಳೇ? ಮಹದೇವಾ! ಭಕ್ತ ವತ್ಸಲಾ! ನೀನು ಬಾರದೆ ಹೋದರೆ, ಇದೋ ಈ ಪಂಚಭೌತಿಕ ದೇಹದಿಂದ ನನಗಿನ್ನಾವ ಪ್ರಯೋಜನವೂ ಇಲ್ಲ. ಭೂತನಾಥನಾದ ನಿನ್ನಿಂದ ಸೃಷ್ಟಿಸಲ್ಪಟ್ಟುದು! ಶಿವ ನಾದ ನಿನ್ನಿಂದ ಪಾಲಿಸಲ್ಪಡಬೇಕಾದುದು! ಹರನಾದ ನ್ನಿನ್ನಿಂದಲೇ ನಾಶವಾಗ ತಕ್ಕದ್ದು ಈ ದೇಹ! ದೇವಾ! ನೀನಾಗಿ ಸ್ವೀಕರಿಸದಿದ್ದರೂ, ನಾನಾಗಿ ಅರ್ಪಿ ಸುವಾಗ ನೀನೇನು ಮಾಡುವೆಯೋ ಅದನ್ನು ಮುಂದಿನ ಜನಾಂಗವು ಕಣ್ಣಾರೆ ಕಾಣಲಿ! (ಎಂದು ಕುತ್ತಿಗೆಗೆ ಕತ್ತಿಯನ್ನು ಬೀಸಿಕೊಳ್ಳುವಷ್ಟರಲ್ಲಿ.)

ಶಂಕರ:— ಲಂಕೇಶ್ವರಾ! ಸೈರಿಸು, ಸೈರಿಸು!!

ರಾವಣ: — ದೇವಾ! ಜಯ ಜಯ!! ಕಾಪಾಡು.

ಶಂಕರ: — ರಾವಣಾ! ಕಟ್ಟಕಡೆಗೂ ನೀನೇ ಜಯಿಸಿದೆ. ಏನನ್ನು ಬೇಡು ವೆಯೋ ಬೇಡು. ಕೊಡುವೆನು. ಅನುಮಾನಿಸಬೇಡ.

ರಾವಣ:— ಪ್ರಭೋ! ನಾನು ಕೃತಘ್ನನು.! ನೀನು ದಯಾಘನನು! ನಾನು ಪತಿತನು! ನೀನು ಪತಿತ ಪಾವನನು! ನಾನು ಕೈನೀಡುವವನು! ನೀನು ಭಕ್ತರು ಕೋರಿದ್ದನ್ನು ನೀಡುವವನು! ದೇವಾ! ನನ್ನ ಜನನಿಯು ಹಲವು ಕಾಲದಿಂದ, ನಿನ್ನ ಆತ್ಮಲಿಂಗವನ್ನು ಪೂಜಿಸಬೇಕೆಂದು ಹಲುಬುತ್ತಿರುವಳು. ಮಾತೆಯ ಈ ಬಯಕೆಯನ್ನು ಸಲ್ಲಿಸಿದ ಕೃತಾರ್ಥತೆಯನ್ನು ನನಗೆ ಕರುಣಿಸಿ ಕಾಪಾಡಬೇಕು.

ಶಂಕರ: — ಆಗಲಿ. ಇದೋ ತೆಗೆದುಕೋ! ಇದರ ಪ್ರಭಾವದಿಂದ ಸಕಲ ಸಚರಾಚರ ಜಗತ್ತು ನಿನ್ನಾಧೀನವಾಗುವುದು. ಆದರೆ ಮಾತ್ರ ಇದನ್ನು ನೆಲದಲ್ಲಿ ಎಲ್ಲಿಯೂ ಇಡಕೂಡದು. ತಿಳಿಯಿತೆ? (ಕೊಡುವನು.)

ರಾವಣ:— ದೇವಾ! ಧನ್ಯನಾದೆನು.

ಪದ್ಯ ೨೦.

(ಎಂದು ಎರಗುವನು.)

[ತೆರೆ ಬೀಳುವುದು.]

ಮೂರನೆಯ ದೃಶ್ಯ.

ಮಾರ್ಗ.

ನಾರದ:—ನಾರಾಯಣ! ಮತ್ತಾ ಈ ರಾವಣನ ಪೀಡೆ ತಪ್ಪಲಿಲ್ಲ ವಲ್ಲಾ? ಈತನು ಲಂಕೆಗೆ ಮುಟ್ಟುವ ಮೊದಲೇ ಆ ಜ್ಯೋತಿರ್ಲಿಂಗವನ್ನು ನೆಲದಲ್ಲಿ ಇಡಿಸಲಿಕ್ಕೇ ಬೇಕು. ಅದಕ್ಕೇನು ಹಂಚಿಕೆಯನ್ನು ಮಾಡಲಿ?

ಗಣಪತಿ:—(ವಟು ವೇಶದಿಂದ ಪ್ರವೇಶಿಸಿ.) ದೇವರ್ಷಿಗಳಿಗೆ ಅಭಿವಾದನವು.

ನಾರದ:—ಅರೇ! ಈ ಬಾಲಕನು ಯಾರು? ಮಗೂ! ಯಾರು?

ಗಣಪತಿ:—ನಾರದರೇ! ನನ್ನ ಗುರುತು ಹತ್ತಲಿಲ್ಲವೇ ನಿಮಗೆ? ಜಗತ್ತಿನಲ್ಲಿ ಆದಿವಂದ್ಯನಾದ ವಿಘ್ನೇಶ್ವರನಲ್ಲವೆ ನಾನು?

ನಾರದ:—ಯಾರು ಗಣಪತಿಯೆ? ಇದೇನು ಹೀಗೆ ವೇಷ ಮರೆಸಿಕೊಂಡು ಎಲ್ಲಿಗೆ ಹೊರಟೆ?

ಗಣಪತಿ:—ಸರಿ ಹೋಗುವಾಗ ಎದುರಿಗೆ ಒಬ್ಬರೇ ಬಂದುದಲ್ಲದೆ, ಎಲ್ಲಿಗೆ ಎಂದು ಬೇರೆ ಕೇಳಿದಿರಾ? ಒಳ್ಳೇ ಶಕುನವಾಯಿತು.

ನಾರದ:—ಅದೇನು ಬಲು ದೊಡ್ಡ ಕಾರ್ಯ ಸಂಗ್ರಹಕ್ಕಾಗಿ ಹೊರಟಿದ್ದೆಯೊ?

ಗಣಪತಿ:—ಪೂಜ್ಯರೇ! ಕೈಲಾಸದಲ್ಲೇ ಕುಳಿತು ಕುಳಿತು ಬೇಸರ ಹಿಡಿಯಿತು. ಅದಕ್ಕಾಗಿ ಒಮ್ಮೆ ಹೀಗೆ ಇಂದ್ರ ಸಭೆಗಾದರೂ ಹೋಗಿ, ರಂಭೆ, ಊರ್ವಶಿ ಮುಂತಾದವರ ಸಂಗೀತ, ನಾಟ್ಯ - - - -

ನಾರದ:—ಏ ಹುಡುಗ! ಅದಕ್ಕಾಗಿ ಇನ್ನೊಬ್ಬರು ಗುರುತು ಹಿಡಿಯಲಾಗದೆಂದು ಈ ತರದ ವಟು ವೇಷವನ್ನು ಕಟ್ಟಿಕೊಂಡು ಹೊರಟೆಯಾ? ನಾರಾಯಣ! ಈಗಲೇ ನಿನ್ನ ಬುದ್ಧಿಯು ಇಷ್ಟಕ್ಕೆ ಮುಟ್ಟಿತೆ?—ಸರಿ ಕೈಲಾಸದಿಂದ ಆತ್ಮಲಿಂಗವು ಯಾವಾಗ ಮಾಯವಾಯಿತೋ, ಇನ್ನೆಲ್ಲವೂ ವಿಪರೀತವೇ.

ಗಣಪತಿ:—(ಚಕಿತನಾಗಿ) ಏನು ಆತ್ಮಲಿಂಗವು ಹೋಯಿತೆ?

ನಾರದ:—ಒಹೋ ಅದೇ ನಿನ್ನ ತಿಳುವಳಿಕೆಗೆ ಬಂದಿಲ್ಲವೋ? ಹುಂ, ಹೇಗೆ ಬರಬೇಕು? ಉದರಂಭರಣವೊಂದರಲ್ಲಿಯೇ ಕಾಲ ಕಳೆಯುವವರಿಗೆ

ಜಗತ್ತಿನಲ್ಲಾಗುವ ವಿಪರೀತಗಳು ತಿಳಿಯಲ್ಪಡುವ ಬಗೆ ಹೇಗೆ? ಎಲ್ಲಿ ಕೇಳಿಲ್ಲಿ. ಆ ಆತ್ಮಲಿಂಗವು ರಾವಣನ ಅಧೀನವಾಗಿರುವುದು.

ಗಣಪತಿ:— ಏನೇನು? ರಾವಣನ ಅಧೀನವೆ?

ನಾರದ:— ಅಹುದು. ರಾವಣನ ಅಧೀನವೇ. ಯಾರೇ ಆಗಲಿ, ಯಾವ ಶುಭ ಕಾರ್ಯವೇ ಆಗಲಿ, ಅದು ನಿರ್ವಿಘ್ನವಾಗಿ ನೆರವೇರಲು ಪ್ರಥಮತಃ ನಿನ್ನನ್ನು ಪೂಜಿಸಲೇ ಬೇಕಷ್ಟೆ? ಅದೇನೊಂದೂ ಇಲ್ಲದೆ, ರಾವಣನು ಈಶತ್ವವನ್ನು ಸಾಧಿಸುವುದೆಂದರೆ ಇನ್ನೇನು ಉಳಿಯಿತು? ಅದೂ ಅಲ್ಲ. ಆತ್ಮಲಿಂಗವು ನಿರ್ವಿಘ್ನವಾಗಿ ಲಂಕೆಗೆ ಮುಟ್ಟಿತೆಂದರೆ, ನೀವೆಲ್ಲರೂ ಆತನ ಸೇವಕರಾಗ ಬೇಕಾಗುವುದು.

ಗಣಪತಿ!— ಹಾಗಿದ್ದರೆ ಇನ್ನೂ ಅದು ಲಂಕೆಗೆ ಮುಟ್ಟಿಲ್ಲವೆ?

ನಾರದ:— ಇಲ್ಲ. ರಾವಣನಿನ್ನೂ ಅಹಿಕ್ಷೇತ್ರ ಮಾರ್ಗವಾಗಿ ಹೋಗುತ್ತಿರುವನಷ್ಟೆ. ಬೇಗನೇ ನೀನಲ್ಲಿಗೆ ಹೋಗತಕ್ಕುದು. ಏಕೆಂದರೆ ಈಗಲೇ ಸಂಧ್ಯಾ ಕಾಲವು ಸಮೀಪಿಸುತ್ತಿರುವುದು. ತನ್ನ ನಿತ್ಯ ನಿಯಮದಂತೆ ರಾವಣನು ಈ ಸಮಯದಲ್ಲಿ ಶೌಚಾಚಮನಾದಿ ಕರ್ಮಗಳನ್ನು ಬಿಡತಕ್ಕವನಲ್ಲ. ಈ ಕಾಲದಲ್ಲಿ ಆ ಜ್ಯೋತಿರ್ಲಿಂಗವನ್ನು ಇರಿಸಲು ಒಂದು ಸ್ಥಾನವು ದೊರಕದೆ ಆತನು ಚಡಪಡಿಸಬೇಕಾಗುವುದು.— ಆಗ ನೀನವನನ್ನು ಸಂಧಿಸಿ, ಆತನ ನಿತ್ಯ ಕರ್ಮಾನುಷ್ಠಾನಗಳು ತೀರುವ ತನಕ, ಆತ್ಮಲಿಂಗವನ್ನು ಹಿಡಕೊಳ್ಳುವುದಾಗಿ ಒಪ್ಪಿ, ಅದನ್ನು ಸ್ವಾಧೀನ ಪಡಿಸಿಕೊಂಡು,—

ಗಣಪತಿ:— ಓಡಿ ಬರಲೆ?

ನಾರದ:— ಛೆ, ಹಾಗಲ್ಲ. ಸಂಧಿಯನ್ನು ಸಾಧಿಸಿ, ಅಲ್ಲೇ ನೆಲದಲ್ಲಿರಿಸಿ ಬಂದುಬಿಡು.

ಗಣಪತಿ:— ತಿಳಿಯಿತು. ಹಾಗೇ ಮಾಡುವೆನು. (ಹೋಗುವನು.)

ನಾರದ:— ಹಾಂ. ವಿಘ್ನೇಶ್ವರನನ್ನು ಕೆರಳಿಸಿಯಾಯಿತು. ಇನ್ನು ಕಾರ್ಯವು ಸಿದ್ಧಿಸಿದಂತೆಯೇ. ನಾನು ಮರೆಯಲ್ಲಿದ್ದು ಅಲ್ಲಿ ಏನೇನು ನಡೆಯುವುದೋ ನೋಡುವೆನು.— ನಾರಾಯಣ. (ಹೋಗುವನು.)

ನಾಲ್ಕನೆಯ ದೃಶ್ಯ.

ಸಮುದ್ರ ತೀರ.

ರಾವಣ:—(ಹಾಡುತ್ತಾ ಪ್ರವೇಶಿಸುವನು.)

ಪದ್ಯ ೨೧.

ಅದೋ! ಸಂಧ್ಯಾರಾಗವು ಪ್ರಸರಿಸುತ್ತಿರುವುದು. ಪಾವನವಾದ ಈ ಪ್ರದೋಷ ಕಾಲದಲ್ಲಿ ನನ್ನ ನಿತ್ಯ ಕರ್ಮಗಳನ್ನು ಮಾಡಲೇ ಬೇಕಾಗಿದೆಯಲ್ಲ! ಆದರೆ ಈ ಆತ್ಮಲಿಂಗವನ್ನೇನು ಮಾಡಲಿ? ಎಲ್ಲಿ ಇಡಲಿ? ಮೋಸವಾಯಿತಲ್ಲಾ!

ಗಣಪತಿ:— (ವಟುವಾಗಿಯೇ ಪ್ರವೇಶಿಸುತ್ತಾ.)

"ಸ್ವಾಮಿದೇವನೆ, ಲೋಕಪಾಲನೆ। ನಿನ್ನ ಭಜಿಸುವೆ ಭಜಿಸುವೆ ॥"

(ಎಂದು ರಾಗ ಎಳೆಯುವನು.)

ರಾವಣ:—ಎಲಾ! ಇದಾರು? (ಹತ್ತಿರಕ್ಕೆ ಕರೆಯುವ ನೆವನದಿಂದ ಸ್ನೇಹವನ್ನು ತೋರಿಸಿ) ಮಗೂ! ಸ್ವಲ್ಪ ಹೀಗೆ ಬಾ! ಯಾರು ನೀನು? ನಿನ್ನ ಹೆಸರೇನಪ್ಪಾ! ಒಳ್ಳೆಯ ಹುಡುಗ!!

ಗಣಪತಿ:—ಹೆಸರು ಗಣಪತಿ ಶರ್ಮನೆಂದು.

ರಾವಣ:—ಆಹಾ! ಚಂದದ ಹೆಸರು. ಗಣಪತಿ ಶರ್ಮಾ! ನೀನೊಂದು ಉಪಕಾರ ಮಾಡಲಾರೆಯಾ ನನಗೆ?

ಗಣಪತಿ:—ಏನದು? ನನ್ನಿಂದ ಸಾಧ್ಯವಿದ್ದರೆ ಅವಶ್ಯವಾಗಿಯೂ ಮಾಡುವೆನು.

ರಾವಣ:—ಬೇರೇನೂ ಅಲ್ಲ. ಇದೋ! ಇದು ಶಿವನ ಆತ್ಮಲಿಂಗ. ಇದನ್ನು ಒಂದು ಕ್ಷಣಕಾಲ ನೀನು ಹಿಡಕೊಳ್ಳ ಬೇಕು, ಅಷ್ಟೆ. ನಾನು ಥಕ್ಕನೆ ನನ್ನ ಶೌಚಾಚಮನಗಳನ್ನು ಮುಗಿಸಿಕೊಂಡು ಬರುವೆನು.

ಗಣಪತಿ:—ಅದು ಭಾರವಿಲ್ಲವಷ್ಟೆ?

ರಾವಣ:—ಛೇ ಛೆ! ಏನೂ ಇಲ್ಲ. ಒಂದು ವೇಳೆ ಭಾರವಾದರೆ "ಶಿವ ಶಿವ" ಎನ್ನು. ಮತ್ತೂ ಭಾರವಾದರೆ ನನ್ನನ್ನು ಕರೆ.

ಗಣಪತಿ:—ನಿನ್ನ ಹೆಸರೇನು?

ರಾವಣ:—ರಾವಣನೆಂದು.

ಗಣಪತಿ:—(ಹೆದರಿದವನಂತೆ) ಹಾಂ! ರಾವಣ? (ಅಳುವಿನ ಧ್ವನಿ
ಯಲ್ಲಿ) ಅಯ್ಯೋ ಹಾಗಿದ್ದರೆ ನೀನು ರಾಕ್ಷಸನಲ್ಲವೆ?

ರಾವಣ:—ಹೆದರಬೇಡ ಮಗೂ! ನಿನ್ನನ್ನು ನಾನು ಏನೂ ಮಾಡಲಾರೆ

ಗಣಪತಿ:—ಹಾಗಿದ್ದರೆ ಸರಿ. ಭಾರವಾದರೆ ರಾವಣಾ! ರಾವಣಾ! ಎಂದು
ಕರೆಯುವೆನು. ಮೂರು ಬಾರಿಗೂ ನೀನು ಬಾರದೆ ಹೋದರೆ ನಾನಿಲ್ಲೇ
ಇರಿಸಿ ಬಿಡುವೆನು, ಹಾಂ.

ರಾವಣ:—ಹಾಗೆಂದಿಗೂ ಮಾಡಬೇಡ ಮಗೂ! ಕರೆದಾಗಲೇ ಬಂದು
ಬಿಡುವೆನು.

ಗಣಪತಿ:—ಬಂದರೆ ಸರಿ.

ರಾವಣ:—ಇದೋ! (ಎಂದು ಕೊಟ್ಟು) ಮಗೂ! ಶೀಘ್ರವೇ ಬರು
ತ್ತೇನೆ. (ಹೋಗುವನು.)

ಗಣಪತಿ:—(ಕೂಡಲೇ) ಅಯ್ಯೋ ಬಹಳ ಭಾರವಾಗುತ್ತಿರುವುದಲ್ಲಾ!

ರಾವಣಾ! ರಾವಣಾ!! ಏ—ರಾವಣಾ!!!

(ಎಂದವನೇ ನೆಲದಲ್ಲಿಡುವನು.)

ರಾವಣ:—(ಓಡಿಬಂದು ಕರಾಳನಾಗಿ) ಛೂ ಪಿಶಾಚಿ! ನನ್ನ ಸಕಲ
ಸಂಪದವನ್ನೂ ಹಾಳು ಮಾಡಿದೆಯಲ್ಲಾ? (ಎಂದು ಆ ಹುಡುಗನ ಕತ್ತನ್ನು
ಹಿಚುಕುವ ಭರದಲ್ಲಿದ್ದಾಗ.)

ಗಣಪತಿ:—ಅಯ್ಯೋ ಅಯ್ಯೋ! (ಕೂಗುವನು.)

ನಾರದ:—(ಓಡಿ ಬಂದು) ಓಂ ಶಾಂತಿಃ ಶಾಂತಿಃ ಶಾಂತಿಃ ರಾವಣಾ!
ಏನಿದು ಅತ್ಯಾಚಾರ?

ರಾವಣ:—ನಾರದರೇ! ಈ ಪಾಪಿಯು ನನ್ನ ಭಾಗಕ್ಕೆ ವಿಘ್ನೇಶ್ವರನಾಗಿ
ಪರಿಣಮಿಸಿದನಲ್ಲಾ! ಆತ್ಮಲಿಂಗವನ್ನು ಕ್ಷಣಕಾಲ ಹಿಡಿಮುಕೋ ಎಂದು ಕೈಗೆ
ಕೊಟ್ಟರೆ, ಅದನ್ನು ನೆಲದಲ್ಲಿಟ್ಟು, ನನ್ನ ಸರ್ವಸ್ವವನ್ನೂ ನಾಶಮಾಡಿದನು
ಈ ಮೂರ್ಖನು. (ಹಲ್ಲು ಕಡಿದು.) ಹುಂ. ಇವನ ಇವನ - - - (ಎಂದು
ಹುಡುಗನ ಕತ್ತು ಹಿಚುಕುವನು.)

ನಾರದ:—(ತಡೆದು) ಎಲಾ! ರಾವಣಾ! ನಿನ್ನಂತಹ ಮೂರ್ಖರು ಜಗತ್ತಿನಲ್ಲಿ ಬೇರೆ ಯಾರು? ಇಲ್ಲವಾದರೆ ಮಂಗನ ಕೈಗೆ ಮಾಣಿಕ್ಯವಿತ್ತಂತೆ ನೀನು ಈತನ ಕೈಯಲ್ಲಿ ಆತ್ಮಲಿಂಗವನ್ನು ಕೊಡುತ್ತಿದ್ದೆಯಾ? ಪಾಪ! ಈ ಎಳೆ ಕೂಸು ಏನು ತಿಳಿದೀತು? ಭಾರವಾಯಿತು, ಕೆಳಗಿಟ್ಟಿತು. ಬಿಟ್ಟು ಬಿಡು. ನಿನ್ನ ತಪ್ಪಿಗೆ, ಸುಮ್ಮನೇ ಶಿಶುಹತ್ಯ ಮಾಡಿ ಫಲವೇನು? (ಎಂದು ಬಿಡಿಸುವನು. ಹುಡುಗನು ಓಡಿಬಿಡುವನು.)

ನಾರದ:—ರಾವಣಾ! ಮಿಂಚಿ ಹೋದ ಕಾರ್ಯಕ್ಕೆ ಚಿಂತಿಸಿ ಫಲವೇನು? ಆತ್ಮಲಿಂಗವು ಕೈತಪ್ಪಿತು. ಮಾಡುವುದೇನು? ಇನ್ನು ಹರನಿತ್ತುದನ್ನು ಉಂಡುಟ್ಟು ಬಾಳುವುದು. ಸುಮ್ಮನೆ ಲಂಕೆಗೆ ಹೋಗಿ, ನೆಮ್ಮದಿಯಾಗಿರು.

ರಾವಣ:— ನಾರದರೇ! ಅದಾಗದು. ಒಂದೋ ಆತ್ಮಲಿಂಗದೊಂದಿಗೆ ಲಂಕೆಯ ಪ್ರವೇಶ. ಅದಲ್ಲದಿದ್ದರೆ ಇಲ್ಲೇ ಪ್ರಾಯೋಪವೇಶ. ಇದು ಖಂಡಿತ. (ಎಂದು ಆತ್ಮಲಿಂಗವನ್ನು ಕೀಳಲು ಪ್ರಯತ್ನಿಸುವನು.)

ನಾರದ:—(ಮುಂದೆ ಬಂದು.) ಹೇಗಾದರೂ, ಈತನನ್ನು ಈಗ ಸಾಯಗೊಡಬಾರದು. ಆದ್ದರಿಂದ ಈತನ ತಾಯಿಗೆ ಈ ವಾರ್ತೆಯನ್ನು ತಿಳಿಸಿ, ಆಕೆಯನ್ನು ಪರಿವಾರ ಸಹಿತ ಇಲ್ಲಿಗೆ ಬರಿಸಿ, ಈತನನ್ನು ಉಳಿಸುವುದಕ್ಕಾಗುವುದೋ ನೋಡೋಣ. (ಹೋಗುವನು.)

ರಾವಣ:—(ಬಹಳ ಪೇಚಾಡಿ, ಕೀಳಲಿಕ್ಕೆ ಬಾರದೆ.) ಹಾಯ್! ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲವಲ್ಲಾ! ಆತ್ಮಲಿಂಗವು ಪಾತಾಳದ ತನಕ ಬೇರಿಳಿಸಿದಂತಿದೆ. ಶಂಕರಾ! ಮಹಾಬಲೇಶ್ವರಾ! ಮಾತೃವಚನವನ್ನು ಪಾಲಿಸಲಿಕ್ಕಾಗದೆ ನಾನು ಉಳಿದೇನು ಫಲ? ಇದೋ ಈ ನಿನ್ನ ಆತ್ಮಲಿಂಗಕ್ಕೆ ತಲೆಯನ್ನು ಒಡೆದು ನಿನ್ನ ಪಾದಗಳಿಗೇ ಆತ್ಮಾರ್ಪಣೆ ಮಾಡಿಬಿಡುತ್ತೇನೆ— (ಎನ್ನುವಷ್ಟರಲ್ಲಿ, ನಾರದ, ಕೈಕಸೆ, ಮಂಡೋದರಿಯರು ಪರಿವಾರ ಸಹಿತ ಪ್ರವೇಶಿಸುವರು.)

ರಾವಣ:—(ಕಣ್ಮುಚ್ಚಿ) ಓಂ ನಮಃ ಶಿವಾಯ (ಎಂದು ತಲೆಯಪ್ಪಳಿಸಲುದ್ಯುಕ್ತನಾಗುವನು, ಅಷ್ಟರಲ್ಲೇ.)

ಶಂಕರ:—(ಪಾರ್ವತೀ ಸಹಿತನಾಗಿ ಪ್ರತ್ಯಕ್ಷನಾಗಿ.) ರಾವಣಾ! ಸೈರಿಸು! ಸೈರಿಸು! ನಿನ್ನ ಭಕ್ತಿ ಶಕ್ತಿಗಳೆರಡೂ ಅಪ್ರತಿಹತವಾದುದು. ಸಂತೋಷವಾಯಿತು. ನನ್ನಿಚ್ಛೆಯಿಂದಲೇ ಆತ್ಮಲಿಂಗವು ಇಲ್ಲಿ ನಿನ್ನ ನಿಮಿತ್ತದಿಂದ ಗಣಪತಿಯ ಮೂಲಕ ಪ್ರತಿಷ್ಠಿಸಲ್ಪಟ್ಟಿತು. ಇನ್ನು ಮುಂದೆ ಈ ಅಹಿಕ್ಷೇತ್ರವು ನಮ್ಮ ಅನುಗ್ರಹದಿಂದ 'ಭೂಕೈಲಾಸ'ವೆಂಬ ಹೆಸರಿನಿಂದ ಪ್ರಸಿದ್ಧ ಯಾತ್ರಾ ಸ್ಥಳವಾಗುವುದು. ಈ ಕ್ಷೇತ್ರವಿರುವಷ್ಟು ಕಾಲ ನಿನ್ನ ಹೆಸರೂ ಉಳಿಯುವುದು. ನಿನ್ನ ಕೀರ್ತಿಯು ಶೋಭಿಸುವುದು. ನೀನು ಕುಟುಂಬ ಸಹಿತವಾಗಿ ಇಲ್ಲೇ ನನ್ನನ್ನು ಪೂಜಿಸಿ ಕೃತಾರ್ಥನಾಗು.

ಕೈಕಸೆ:—ರಾವಣಾ! ನೀನು ನನಗಿತ್ತ ಭಾಷೆಯು ಸಂದಿತು ಮಗೂ! ನಿನ್ನನ್ನು ಹೆತ್ತು ನನ್ನ ಗರ್ಭವು ಪಾವನವಾಯಿತು. ಆಹಾ! ಇಂದಿನ ದಿನವೇ ಸುದಿನವು.

ರಾವಣ:—ದೇವಾ! ಧನ್ಯರಾದೆವು.

ಎಲ್ಲರೂ:—ನಮಃ ಪಾರ್ವತೀ ಪತಯೇ ಹರಹರ ಮಹಾದೇವ!

(ಮಂಗಲಂ.)

ತೆರೆ ಮೆಲ್ಲನೆ ಇಳಿಯುವುದು.

ಸಂಪೂರ್ಣಂ.

॥ ಶ್ರೀ ಕೃಷ್ಣಾರ್ಪಣಮಸ್ತು ॥

ಪದ್ಯ ೨

॥ ಕೇದಾರ ಜಂಪೆ ॥

ಜಯು ಜಯು ಮಹಾರಾಜ । ದಿನರಾಜಸಮತೇಜ ।
ಜಯು ಜಯು ಮಹಾದನುಜ । ಕುಲಜ, ನತಸುರಭೂಜ ॥ ೧ ॥
ಜಯು ಜಯುತು ದಶಕಂಠ । ವಿಬುಧಗಣ ಕುಲಕಂಠ ।
ಜಯು ಜಯುತು ಶ್ರೀ ಕಂಠ । ಶರಣ, ರಕ್ಕಸ ನೆಂಟ ॥ ೨ ॥

ಪದ್ಯ ೩

॥ ಸಾರಂಗ ಆದಿತಾಳ ॥

ಭಲ ಭಲಾ । ಸರಿಯೋಚನೇ ॥ ಪಲ್ಲವಿ ॥
ದುಷ್ಕರ ಮೆಟ್ಟುತ್ತ ಕಟ್ಟುತ್ತಲೆ । ಕಟ್ಟುತ್ತ ಪಟ್ಟವನೇರುತ್ತಲೆ ।
ಪಟುಭಟರೆನಿಸುವ ನಡೇನಡೇ ॥ ಭಲ ಭಲಾ ॥ ॥ ೧ ॥
ಅರ್ಗಳವೀರರು ಶೀಘ್ರದೊಳು । ಸ್ವರ್ಗದ ಸತಿಯುರ ವರ್ಗದೊಳು ।
ಹರುಷದಿ ಕಲೆಯುವ ನಡೇ ನಡೇ ॥ ಭಲ ಭಲಾ ॥ ॥ ೨ ॥

ಪದ್ಯ ೪

"ಜಾವೊ ಜಾವೊ—ಎಂಬಂತೆ"

ಅಕಟಾ ಅಕಟಾ! ಇಂತಾದುದೇ ಹಾ । ಹರೇ ಸದಾಶಿವನೇ ॥ ಪಲ್ಲವಿ ॥
ಸುಮನ ಸುಖಂಕರ । ಮುನಿದೆಯು ಶಂಕರ । ಸಮರ ಭಯಂಕರನೇ ॥
ವಿಮಲ ಭವತವ । ಪೂಜೆಯೊಳೀದಿನ । ಪರಿಭವವೇಕೆನಗೇ ॥ ೧ ॥
ಪರಮ ದಯಾಘನಾ! ಶಂಕರಾ! ಹಾಯ್, ಏನಿದು ಪರಾಭವ?

ಪದ್ಯ ೫

"ಜಮುನಾ ಬಿಚಖೇಲ—"ಎಂಬಂತೆ

ನೀವ್ ಬನ್ನಿರಿ ಬನ್ನಿರಿ ನೀರಜ ವದನೆಯುರೇ—ಸಖಿಯುರೇ ॥
ಸಖಿಯುರೇ–ಸತಿಯುರೇ–ಸಖಿಯುರೇ ॥ ನೀವ್– ॥
ಸೇರೀ–ಗೋದಾವರಿ ತಟವಾ । ಬಲು–ಮೋದದಿಂದಲಿ ನಲಿವಾ ।
ಸೊಗ–ಸಾದ ವನದಾ । ಸಿರಿಯು ನೋಡೀ–ಹರುಷಗೂಡೀ ।
ಬರಲು ಬೇಗಾ–ನಡೆಯಿರೀಗಾ ॥ ಈಗಾ ॥ ನೀವ್ ॥ ೧ ॥

ಪದ್ಯ ೬

"ವೈಬನಿಯಾ - - - "ಎಂಬಂತೆ.

ಸಖಿ ಸುಮುಸುಂದರಿಯೇ—ಸರಸಿಜನೇತ್ರೇ—ಏಂ ಪೇಳ್ವೆ॥
ಈ ಚಾರುಸೊಬಗ ನಾಂ ಮರೆದೂ। ಬರ—ಲಾರೆ ವನವನಾನುಳಿದೂ
ನಲವೇರಿನಿತ್ಯ ವಿರ ಜೀಕದಿಲ್ಲಿ ನಲಿ ನಲಿದೂ—ಮೆರೆದೂ—ಎಂದು
—ತೋರ್ಪುದು ॥ ಸಖಿ ॥೧॥

ಪದ್ಯ ೭

॥ ಮುಖಾರಿ-ಆದಿತಾಳ ॥

ಶಂಭೋ ಸದಾಶಿವಾ। ಶಂಬರ ಹರಜಿತ। ನಂಬಿದೆ ತವ ಪಾದವಾ। ಪಲ್ಲವಿ
ಶಂಭೋ ಶಂಕರ, ದಿ-ಗಂಬರ ಪಾಹಿ! ವಿ। ಶ್ವಂಭರ ಜಯು, ಜಗ —
—ದಂಬಿಕಾ ವರಾ ॥ ಅ. ಪ. ॥
ವ್ಯಾಳ ಭೂಷ ಪರ। ಮೇಶ ಲೋಕಾಧೀಶ। ಕಾಲಕಾಲ ಶಶಿ। ಭೂಷ
—ಪರಾತ್ಪರಾ ॥ ಶಂಭೋ ॥ ೧ ॥

ಪದ್ಯ ೮

ಶ್ರೀ ಲೋಲ ಪಾಹಿವನಮಾಲ ಹರಿ ನಾರಾಯಣ—ನಾರಾಯಣ।
ಲೋಲಾಕ್ಷ ಖಲಹಾರಿಯೆಶೌರೀ—ಲೀಲಾ ವಿಲಾಸ ಜಾಲಾ।
ಲೀಲಾ ವಿಲಾಸ ಜಾಲಾ। ನತ—ಜಾಲ ಸುಪಾಲ ವಿಶಾಲ।
ವನ—ಮಾಲ ಸುಕೋಮಲ ವಿಮಲಾ। ನಾರಾಯಣ।
ಫಾಲಾಕ್ಷ ಸಖ ಶ್ರೀಹರಿಶೌರೀ। ಲೀಲಾ ವಿಲಾಸ॥
ಜಾಲಾ ಶ್ರೀಲೋಲಾ ॥ ೧ ॥

ಪದ್ಯ ೯

॥ ಅಭೇರಿ—ಆದಿತಾಳ ॥

ಜಯು ಶಂಭೋ ಮಹಾದೇವ। ಹೇ ನಾಗಭರಣಾ ಪಲ್ಲವಿ
ಪರಿಪಾಹಿ ಮಾಂ ದೇವಾ। ಗೌರೀ ರಮಣಾ ಅ. ಪಲ್ಲವಿ
ಪರಮೇಶ ಶಶಿಭೂಷ। ಗಿರಿಜೇಶ ಪೊರೆಯುನಿಶ।
ಕರುಣಾಭರಣಾ ಶರಣಾಗತ ಜನಪಾಲಾ। ರಾಜರಾಜಸಖ ಜಯು
ಸುರಮೌನಿ ಜನಜಾಲಾ—ವಿನುತಪದ—ದ್ವಯುಶೋಭ।
ವರಮಾರ ಹರ ಬಾ ಭವದೂರಾ ದಯಿದೋರೂ
ಪುರಕಾಲ ಗುಣಮಾಲ—ವರನೀಲಗಳ ವಿಮಲ।
ಚರಣಾನಳಿನಾ ಯುುಗಳವನು ನೀ ತೋರೋ। ಕಾಲಕಾಲವಿಭು। ಜಯು

ಪದ್ಯ ೧೦

॥ ಅಠಾಣ-ಜಂಪೆ ॥

ದೇವಾ ನಿನ್ನಂದದೊಳು । ಸೇವಕರ ಕರುಣದೊಳು ।
ಕಾವ ಮಹಿಮರ ಕಾಣೆ-ಪಾದದಾಣೇ ।
ನಿನ್ನ ದಯೆಯೊಳು ಧನ್ಯ-ನಾನಾದೆ ಶಂಕರನೆ ।
ಪನ್ನಗ ವಿಭೂಷಣನೆ-ರಾಜಶೇಖರನೇ ॥ ೧ ॥

ಪದ್ಯ ೧೧

॥ ರಾಗ ಹಮೀರ್-ಆದಿತಾಳ ॥

ಜಯ ಪಂಕಜ ನಾಭಾ । ದೇವಾ ॥ ಪಲ್ಲವಿ ॥
ಜಯ ಪಂಕಜ ಭವತಾತಾ ॥ ಅ. ಪಲ್ಲವಿ ॥
ಕಮಲನೇತ್ರ-ಕಮಲಾನಾಥ ಅಮಲಚರಿತಾ-ವಿಮಲಗಾತ್ರ !
ನಮಿಪೆ ಸುಮನಸ ವಿನುತ ಸತತ । ಪಾಹಿ ಲೋಕನಾಥ । ಜಯ ॥ ೧

ಪದ್ಯ ೧೨.

॥ ರಾಗ ಕಾಂಭೋಜ. ಆದಿತಾಳ ॥

ಮನವಾರಿ ನಿಧಿ ಚಂದಿರಾ । ಹೇ ನೀರ ಗಂಭೀರ-ನವ ಮೋಹನಾಂಗಾ ।
ಸುಮಚಾಪ-ಸಮರೂಪ । ದನುಜಾಧಿಪ ಕುಲದೀಪ ।
ಮಮ ಪ್ರೇಮ ಸಾಮ್ರಾಜ್ಯ । ಸುವಿರಾಜ । ರಾಜ । ಮನ ॥ ೧ ॥

ಪದ್ಯ ೧೩.

॥ ತೋಡಿ. ಆದಿತಾಳ ॥

ಏನ ಹೇಳ್ವೆನೂ । ಮಾನಿನೀ ನಾನು ॥ ಪಲ್ಲವಿ ।
ವನಜ ಶೂನ್ಯವಾದ ಕಾಸಾರದಂದ ।
ವನಿತೆಯೆನ್ನ ಬಾಳ್ವೆ ತಾನಾಯ್ತು ಕೇಳೇ ॥ ೧ ॥
ಎಂದು ಕಾಂಬೆನಾ ನಾ-ನಂದ ಚಂದ್ರನುದಯ ।
ಇಂದಿರೇಶ ದಯೆ-ಯೆಂದು ತೋರ್ಪನೋ ಹಾ ॥ ೨ ॥

ಪದ್ಯ ೧೪.

॥ ದುರ್ಗಾ. ಆದಿತಾಳ ॥

ಮನ-ಮೋಹನ ಜಯಶ್ರೀ ಲೋಲಾ ॥
ಜಯಶ್ರೀ ಲೋಲಾ-ಜಯ ವನಮಾಲಾ ॥ ಮನ ॥
ಮುನಿಜನಮಾನಸ-ವನರುಹ ವಾಸಾ ।
ಅನಿಶದಿನೇಶ ಪ್ರ-ಕಾಶ ಸುಭಾಸಾ ॥
ಅನಿಮಿಷರರಸಾ-ಮಣಿ ಭೂಷಾ ।
ಶ್ರೀನಿವಾಸಾ ಜಗದೀಶಾ ॥ ಮನ ॥ ೧ ॥

ಪದ್ಯ ೧೫.

॥ ಮೋಹನ-ರೂಪಕ ॥

ನಾರಾಯಣ ಭವ ಭಂಜನ ॥ ಪಲ್ಲವಿ ॥
ಪಾಹಿ ಪಾಹಿ ಶ್ರೀ ಮೋಹನ ॥ ನಾರಾಯಣ ॥ ಅ. ಪಲ್ಲವಿ ॥
ಶಂಖ ಚಕ್ರ ಗದಾ ಪದ್ಮ । ಬಿಂಕದಿಂದ ಪಿಡಿದು ತನ್ನ ।
ಕಿಂಕರರ ಪೊರೆವ ದೇವ ॥ ಕರುಣಾ-ಭರಣಾ-ಶರಣೋ-ದ್ಧರಣಾ ।
---ಶ್ರೀ ನಳಿನೇಕ್ಷಣ ॥ ಪಾಹಿ ॥ ೧

ಪದ್ಯ ೧೬.

॥ ಮೋದಮಯಿಾ-ಎಂಬಂತೆ ॥

ಮೋದಕರಾ-ಹೇ ಸದಯಾ । ಶ್ರೀಶ ಶುಭಕರಾ ॥ ಪಲ್ಲವಿ
ಮುರಖಲಹರ-ಸ್ಮರ ಸುಂದರ । ಪಾರಾ-ವಾರಗಭೀರಾ ॥ ಅ. ಪಲ್ಲವಿ
ಸುರಾನತಾ-ಪದಕಮಲಾ । ಕೋಮಲ ವಿಮಲಾ ।
ಗಿರಿಧರ ಸುರು-ಚಿರ, ಭಾಸುರ । ಶ್ರೀಶ ಸುಖಕರಾ ॥ ಮೋದಕರಾ ॥ ೧

ಪದ್ಯ ೧೭.

॥ ಮೋಹನ—ಆದಿತಾಳ ॥

ಕೇಳಲೆ ಕೋಮಲೇ । ಬಾಲೆ ಸುಶೀಲೆಯೇ ॥ ಪಲ್ಲವಿ ॥
ಅತ್ತೆ ಮಾವಂದಿರ ಭಕ್ತಿಯಿಂ ಕಾಣುತ ।
ಹತ್ತು ಜನರು ಮೆಚ್ಚೆ ವಂದದಿ ಬಾಳಿರು ॥ ೧ ॥
ದಾಸ ದಾಸಿಯರೊಳು-ದೋಷವ ಹುಡುಕುತ
ರೋಷವ ತಾಳದೆ ಪೋಷಿಸಿ ಬಾಳಿರು ॥ ೨ ॥
ಕಾಂತನ ತಪ್ಪನು ಕಾಂತೆ ನೀ ತಿಳಿದರೆ ॥
ಶಾಂತತೆಯಿಂದಲೇ ಕಾಂತದಿ ಪೇಳಲೆ ॥ ೩ ॥
ಮೈದುನರಲ್ಲಿ ನೀ ಭೇದವಗೈಯದೆ ।
ಪಾದವೆ ಗತಿಯೆಂದು ಪತಿಸೇವೆ ಮಾಡೆಂದು ॥ ೪

ಪದ್ಯ ೧೮.

॥ ಮಾಯಾ ಮಾಳವ ಗೌಳ—ಆದಿತಾಳ ॥

ಏತಕೆ ಕೋಪವು ನಲ್ಲಾ ॥ ಪಲ್ಲವಿ ॥
ನೀತಿಯೆ ಸತಿಯನು ಜರೆವುದು, ತೊರೆವುದು ॥ ಅ ಪಲ್ಲವಿ ॥
ವಲ್ಲಭನಿಹಪರ-ಕೆಲ್ಲಾಧಾರ ತಾ । —
ನಲ್ಲವೆ? ಬರಿದೆ, ತ-ಪ್ಪಿಲ್ಲದ ಕಾಂತೆಯೊ ॥ ಏತಕೆ ॥ ೧ ॥
ರಕ್ಷಿಪ ಕಾಂತನು-ಪೇಕ್ಷಿಸಲನ್ಯನು ।
ರಕ್ಷಕ ನಾರೈ? —ರಾಕ್ಷಸ ಪತಿ ಪೇಳೇತಕೆ ॥ ೨ ॥

ಪದ್ಯ ೧೯.

ಕರುಣಿಸು ಸದಾಶಿವಾ-ಕರುಣೆಸದ್ಭಾವಾ ॥ ಪಲ್ಲವಿ ॥
ಪುರಹರವರ ಶಶಿ-ಧಾರಿ ಮಹಾದೇವಾ ॥ ಅ. ಪಲ್ಲವಿ ॥
ಕಿಂಕರ ಜಾಲ ಸು-ಖಂಕರ ಪಾಲಯಾ!
ಶಂಕರ ಸಮರ ಭ-ಯಂಕರ ಹೇ ದೇವಾ ॥ ೧ ॥

ಪದ್ಯ ೨೦.

॥ ಜುಂಜೂಟಿ—ಆದಿತಾಳ ॥

ಧನ್ಯನು ನಾ ಬಹು-ಮಾನ್ಯನು ಜಗದೊಳು ।
ನಿನ್ನ ಕಾರುಣ್ಯದಿ-ಪರಮ ಶಿವಾ । ದೇವಾ ॥
ಪನ್ನಗಾಭರಣ ಕೃ-ಪಾರ್ಣವ ಕವಿಗಣ ।
ಪೂರ್ಣ ಜನಾವನ-ಶಿಖಿನಯನಾ । ದೇವಾ ॥ ೧ ॥
ತ್ರೈಜಗ ವಿನುತಾ-ಸುಜನ ಸುಪ್ರೀತ ।
ಗಜಮುಖ ತಾತಾ-ಶುಭಚರಿತಾ ॥
ಗಜ ಚರ್ಮಾಂಬರ-ಧರ ವಿಶ್ವಂಭರ ।
ಅಜನುತ ಗಂಗಾ-ಧರ ಭವ ದೂರಾ ॥ ೨ ॥

ಪದ್ಯ ೨೧.

॥ ಹಿಂದೋಳ—ಆದಿತಾಳ ॥

ಭಜರೇ ಮಹದೇವಂ । ಮಾನಸ ॥ ಪಲ್ಲವಿ ॥
ಭಜ ಮಹದೇವಂ ! ಭಜಕ ಸಂಜೀವಂ ।
ಅಜ ಸಂ ಸೇವ್ಯಂ । ನಿಜ ಸಂ ಭಾವ್ಯಂ ॥ ೧ ॥
ನಾಗ ವಿ ಭೂಷಂ । ಯೋಗ ವಿಲಾಸಂ ।
ಯೋಗಿ ಹೃದ್ವಾ ಸಂ । ಶ್ರೀ ಗೌರೀಶಂ ॥ ೨ ॥

ಪಾತ್ರವರ್ಗ.

1 ರಾವಣ.
2. ಕುಂಭಕರ್ಣ.
3. ವಿಭೀಷಣ.
4. ಪ್ರಹಸ್ತ.
5. ನಾರದ.
6. ಶಂಕರ.
7. ಮಯ.
8. ಗಣಪತಿ
(ಚಾರಕ, ಶಿವಭಕ್ತರು ಇತ್ಯಾದಿ.)
9. ಕೈಕಸೆ.
10. ಮಂಡೋದರಿ.
11. ಮಂಡೋದರಿಯ ೧ನೆ ಸಖಿ.
12. .. ೨ನೆ ಸಖಿ.
13. ಪಾರ್ವತಿ.
14. ಭದ್ರಕಾಳಿ.
(ಪಾರ್ವತಿಯ ಸಖಿಯರು ಇಬ್ಬರು.)